
ಗೌರಿ ಲಂಕೇಶರ

ಲಂಕೇಶ್

ಆಗಸ್ಟ್ 2, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಮೋದನೆ



- ◆ ಮೈನಿಂಗ್‌ನಲ್ಲಿ ಗೌಡರ ಕುಟುಂಬ
- ◆ ವಸೂಲಿ ಮಾಡಿದ್ದು BSK ಕಂಪನಿ
- ◆ ಮಾಲೀಕರು ಬಾಲಕೃಷ್ಣ-ರಮೇಶ್

ಸರ್ಕಾರ ಫಿನಿಶ್!



ನಕ್ಸಲ್ ರಮೇಶ್ ಸಂದರ್ಶನ

ಎಲ್ಲಿಗೆ ಪಯಣ?

ಬೆಂಗಳೂರು ಬಿಲ್ಡರ್ ಮಾಫಿಯಾ : ಕಾನೂನೆಲ್ಲಾ ಕಸದ ತೊಟ್ಟಿಗೆ!

ದಾವಣಗೆರೆ ಟೆಕ್ಸ್‌ಟೈಲ್ ಪಾರ್ಕ್‌ನಲ್ಲಿ ಭೂ ಮಾಫಿಯಾ

ಸ್ತ್ರೀ ಪೀಡಕ

ರವಿ ಶ್ರೀವತ್ಸ



ಸತ್ರೂ ಯಾರ ಮನಿಗೂ ಊಟುಕ್ಕೋಗದಿಲ್ಲ ಕಂಡ್ರಿ

ಕೆಲವರಿಗೂ ದ್ವೈತ ಮತ್ತು ಅದ್ವೈತ ಸಿದ್ಧಾಂತಗಳ ಪ್ರತಿಪಾದಕರಂತಾಗಿನ್ನ ರೈತ ಬಣಗಳು ಒಂದಾಗುವುದಿಲ್ಲ ವಂತಲ್ಲಾ, ಕಾರಣ ಕೇಳಿದರೆ "ಪುಟ್ಟಣ್ಣಯ್ಯನ ಬಣ ರಾಜಕೀಯಕ್ಕೆ ಅಂಟಿಕೊಂಡಿರುವುದರಿಂದ ಆ ನಂಟು ಬಿಡದ ಹೊರತು ನಮ್ಮ ನಂಟು ಸಾಧ್ಯವಿಲ್ಲ" ಎಂದು ಚುಕ್ಕಿ ನಂಜುಂಡಸ್ವಾಮಿ ಚುಟ್ಕಿ ಮಾತನಾಡಿದರಂತಲ್ಲಾ. ಇದರಿಂದ ಕೆರಳಿ ಕೆಂಡಾಮಂಡಲವಾದ ಪುಟ್ಟಣ್ಣಯ್ಯನ ಬಣ "ಅಯ್ಯೋ ಸ್ವಾಮಿ, ಚುಕ್ಕಿ ಮಾತಿಗೆ ನಾವು ಚಕಾರ ಎತ್ತಲ್ಲ, ಅದು, ಈ ಚುಕ್ಕಿಗೇನು ಗೊತ್ತು ರೈತ ಸಂಘದ ಇತಿಹಾಸ? ರೈತ ಸಂಘದ ಪಿತಾಮಹ ಎಷ್ಟೇ ಬುದ್ಧಿವಾದ ಹೇಳಿದ್ರೂ ಹಠ ಮಾಡಿ ರಾಜಕಾರಣಕ್ಕೆ ಹೋದವರು ನಂಜುಂಡ ಸ್ವಾಮಿಗಳೊ? ನಾವೊ? ಕನ್ನಡ ದೇಶ ಮಾಡೋದಕ್ಕಿಂತ್ಲೂ ಮೊದಲು ಲೋಕಸಭೆ ಚುನಾವಣೆಗೆ ನಿಲ್ಲಿಸಿ ಆರು ಜನಗಳ ಠೇವಣಿ ಕಳದೋರ್ಯಾರು? ನಂತರ ಬಾಬಾಗೌಡರು ಗೆದ್ದ ಜಾಗವನ್ನು ತೆರವು ಮಾಡಿಸಿ ಅಲ್ಲಿ ತಾವೇ ನಿಂತು ಗೆದ್ದು ವಿಧಾನಸಭೆಗೆ ಹೋದ ವರ್ಯಾರು? ನಂತರದ ಚುನಾವಣೆಲಿ ಪುಟ್ಟಣ್ಣಯ್ಯ ಗೆದ್ದು ವಿಧಾನಸಭೆಗೋದ ಅಂತ ಹೇಳಿ ದ್ವೇಷ ಮಾಡೋಕೆ ಶುರು ಮಾಡಿದೋರ್ಯಾರು? ಪುನಃ ನಡೆದ ಚುನಾವಣೆಲಿ ಪುಟ್ಟಣ್ಣಯ್ಯ ಮತ್ತೆ ಗೆದ್ದು ರೈತ ನಾಯಕನಾಗಬಹುದು ಅಂತ ಹೆದರಿ, ಮಾಣ್ಣಿ ಕ್ಷೇತ್ರದಲ್ಲಿ ನಿಂತು ಮೂರೂವರೆ ಸಾವಿರ ಓಟು ತಗೊಂಡು ರೈತರ ಮಾನ ಹರಾಜಾಕಿ ದವ್ರ್ಯಾರು? ಅಂತವರ ಮಗಳು ನಮಗೆ ಬುದ್ಧಿ ಹೇಳೋ ಮುನ್ನ ರೈತ ಸಂಘದ ಇತಿಹಾಸ ಓದಿ ಕೊಂಡು ಮಾತನಾಡಲಿ" ಎಂದು ಪುಟ್ಟಣ್ಣಯ್ಯನ ತಮ್ಮನಂತಹ ವ್ಯಕ್ತಿಯೊಂದು ಪಾಂಡವಪುರದ ಬಸ್ಟಾಂಡಿನಲ್ಲಿ ಟೀ ಕುಡಿಯುತ್ತ, ಬೀಡಿ ಎಳೆಯುತ್ತ, ಕೆಮ್ಮಿದನಂತಲ್ಲಾ, ಥೂತ್ತೇರಿ!



****

ಇತ್ತೀಚೆಗೆ ಮಂಡ್ಯದಲ್ಲೊಂದು ಜಿಲ್ಲಾ ಸಾಹಿತ್ಯ ಸಮ್ಮೇಳನ ಜರುಗಿ, ಅದಕ್ಕೆ ಕ್ಯಾತನಹಳ್ಳಿ ರಾಮಣ್ಣ ಅಧ್ಯಕ್ಷನಾಗಿದ್ದಕ್ಕೆ ಸಿಡಿಮಿಡಿಗೊಂಡ ಕವಯಿತ್ರಿಯೊಬ್ಬರು "ನಿಜಕ್ಕೂ ಈ ಜಿಲ್ಲೆಯ ಸಾಹಿತ್ಯ ಸಮ್ಮೇಳನಕ್ಕೆ ಯೋಗ್ಯಳು ನಾನೆ. ಏಕೆಂದರೆ ನಾನು ಬರೆದಿರುವ ಪುಸ್ತಕವನ್ನು ಈಗಾಗಲೇ ಆನೆಯ ಮೇಲೆ ಮೆರವಣಿಗೆ ಮಾಡಿದ್ದಾರೆ. ಈ ಕ್ಯಾತನಹಳ್ಳಿ ರಾಮಣ್ಣ ಬರೆದ ಪುಸ್ತಕವನ್ನು ಕನಿಷ್ಠ ಕತ್ತೆಯ ಮೇಲೂ ಮೆರವಣಿಗೆ ಮಾಡಿಲ್ಲ. ನೀವು ಈ ಕೂಡಲೇ ಪ್ರತಿಭಟಿಸಿ" ಎಂದು ಕತ್ತೆಯಂತಹ ಕೆಲವು ವ್ಯಕ್ತಿಗಳಿಗೆ ಸೂಚನೆ ಕೊಟ್ಟರಂತಲ್ಲಾ, ಆ ಗಾರ್ಧಭ ಕುವರರು ಎಷ್ಟೇ ಕೂಗಾಡಿದರೂ ಕೇಳದ ಮಂಡ್ಯದ ಹೈದರು ಕ್ಯಾತನಹಳ್ಳಿ ರಾಮಣ್ಣನನ್ನು ಹೊತ್ತು ಮೈಲಿದೂರ ಮೆರವಣಿಗೆ ಮಾಡಿ, ಬಿಸಾಡಿದ ವಂತಲ್ಲಾ, ಥೂತ್ತೇರಿ!!

****

ರೆಡ್ಡಿ ಬೀಸಿದ ಬಲೆಯೊಳಕ್ಕೆ ಕಾಡುಂದಿಯಂತೆ ಸಿಕ್ಕಿಬಿದ್ದು ಕೂಗುತ್ತಿರುವ ಚೆನ್ನಿಗಪ್ಪನನ್ನು ನೆನೆಸಿಕೊಂಡಂತೆಲ್ಲಾ ದೇವೇಗೌಡರ ಬಿಪಿಯಲ್ಲಿ ಏರುಪೇರಾಗತೊಡಗಿತಂತಲ್ಲಾ, "ಈ ಸೂಳೆಮಗನಿಗೆ ಏನು ಮಾಡಬೇಕು? ಒಂದಿಷ್ಟೂ ಮೈಮೇಲೆ ಎಚ್ಚರವಿಲ್ಲದೆ ವರ್ತಿಸಿದ್ದಾನಲ್ಲಾ?" ಎಂದು ಗೌಡರು ಯೋಚಿಸುತ್ತಿರಬೇಕಾದರೆ ಥೇಟ್ ಚೆನ್ನಿಗಪ್ಪನಂತೆ ಕಾಣಿಸಿಕೊಂಡ ವ್ಯಕ್ತಿಯೊಂದು "ಅಪ್ಪಾ, ಚೆನ್ನಾಗಿದ್ದೀರಾ?" ಎಂದು ಕಾಲಿಗೆರಗಿತಂತಲ್ಲಾ, ದೇವೇಗೌಡರು ಶನಿದೇವರಂತೆ ಆಕಾಶ ನೋಡುತ್ತ "ಯು ಡರ್ಟಿ ಫೆಲೊ, ನಿನಿಗೇನಾದ್ರು ಮೈಮೇಲೆ ಎಚ್ಚರ ಇದಿಯಾ? ಹೋಗಿ ಆ ರೆಡ್ಡಿ ಕೈಗೆ ಸಿಕ್ಕಿಬಿದ್ದಿಯಲ್ಲೋ" ಎಂದಾಗ ಎದುರು ನಿಂತ ವ್ಯಕ್ತಿ ಕಂಗಾಲಾಗಿ "ಅಪ್ಪಾ, ನಾನು ತಿಮ್ಮರಾಯಿ" ಎಂದಿತಂತಲ್ಲಾ, "ಯಾವ ತಿಮ್ಮರಾಯಿ?" ಎಂದು ಗೌಡರು ಕಣ್ಣುಬಿಟ್ಟು ನೋಡಲಾಗಿ, "ನಾನು ಕಣಪ್ಪ, ನಾಗಮಂಗಲದ ಕಡೆ ತಿಮ್ಮರಾಯಿ. ಅದೇ ನೀವು ಗಂಗಾಧರಮೂರ್ತಿ ಕೊಲೆಯಾದಾಗ ಬಂದು ಭಾಷಣ ಮಾಡಿ ನಾಗಮಂಗಲದ ಕೇಶವಸ್ವಾಮಿ ದೇವಸ್ಥಾನದೊಳಗಡೆ ಹೋದ್ರಿ. ಹೊರಗೆ ಬರೋವತ್ತಿಗೆ ನಿಮ್ಮ ಚಪ್ಪಲಿ ಕಳವಾಗಿದ್ವೊ. ನಾನು ಕೂಡ್ಲೆ ಹೋಗಿ ಹೊಸ ಚಪ್ಪಲಿ ತಂದುಕೊಟ್ಟೆ. ಇಲ್ದೆಯಿದ್ರೆ ನೀವು ಬರಿಗಾಲಲ್ಲಿ ಓಡಾಡಬೇಕಿತ್ತು" ಎಂದಿತಂತಲ್ಲಾ, ತುಸು ಸಿಟ್ಟಿನ ಮುಖದಿಂದ ಗೌಡರು "ಈಗೇನಾಗಬೇಕು ಹೇಳು" ಎಂದಾಗ, "ತುಂಬ ತೊಂದ್ರೆಲಿದ್ದಿನಿ" ಎಂದು ಹೇಳಿದ ತಿಮ್ಮರಾಯಿ ಗೌಡರ ಮುಖ ನೋಡಲಾಗಿ, ಗೌಡರು "ನಿಗಮ ಮಂಡಲಿ ನೇಮಕದ ಸಮಯಕ್ಕೆ ಬಾ. ಚರ್ಮ ನಿಗಮಕ್ಕೆ ನೇಮಕಾ ಮಾಡೋಣ" ಎಂದು ಹೇಳಿ ಮತ್ತೆ ಕಣ್ಣು ಮುಚ್ಚಿದರಂತಲ್ಲಾ, ಥೂತ್ತೇರಿ!!

****

ಈಗ ತಲೆದಂಡಕ್ಕೆ ರೆಡಿಯಾಗಿರುವ ಚೆನ್ನಿಗಪ್ಪನನ್ನು ಮಾತನಾಡಿಸಿದರೆ ಹೇಗೆ ಅನ್ನಿಸಿತು. ಅದೇ ಹೊತ್ತಿಗೆ ಮಾತನಾಡದೆ ಹೋದರೆ ಹೇಗೆ ಎಂದೂ ಅನುಮಾನ ವಾಯ್ತು. ಪತ್ರಿಕೆಯವರೆಂದರೆ ಅವರು ಮಾತನಾಡು ತ್ತಾರೊ ಹೇಗೊ ಎಂದುಕೊಂಡೇ ಫೋನಾಯಿಸಿದರೆ, ಸಿಕ್ಕೇಬಿಟ್ಟರು!

"ಹಲೋ ಚೆನ್ನಿಗಣ್ಣ, ನಾನು ಯಾಹೂ."

"ಯಾವೂ ಅಂದ್ರೆ ಯಾರ್ರ?"

"ಅದೆ ಅವತ್ತು ಮಾತಾಡಿಸಿದ್ನಲ್ಲಣ್ಣಾ..."

"ಏನೇಳ್ರ ಜಲ್ದಿಯಾ?"

"ಇದೇನಣ್ಣ ಹಿಂಗಾಯ್ತು? ರೆಡ್ಡಿ ತಿರಗ ಕೈ ಕೊಟ್ಟನಲ್ಲಣ್ಣ?"

"ಥೂ, ಆ ಸುದ್ಯಾಕೆ? ಬ್ಯಾರೆ ಮಾತಾಡ್ರ. ಏನವುನಿಗೆ ತಲಿಕೆಟ್ಟೋಗ್ಯದೊ ನನಿಗೇ ಕೆಟ್ಟದೊ, ಒಂದೂ ಗೊತ್ತಾಯ್ತ ಯಿಲ್ಲ."

"ನೀನು ಬಳ್ಳಾರಿಗೋಗಿದ್ದು ನಿಜವೇನಣ್ಣ?"

"ಹೋಗ್ದೆ ಬೇಕಲ್ಲೊ? ಗಣಿಮಂತ್ರಿ ಅಂತ ಮನೆಲಿರ ಕ್ಯಾದತೆ. ಎಲ್ಲೇ ಹೋದ್ರು ಯಾವ ಸೂಳೆಮಗನ ಮನೆಲೂ ಊಟ ಮಾಡಬಾರ್ದು, ಒಂದು ಲೋಟ ನೀರನೂ ಕುಡಿಬಾರ್ದು ಅನ್ನದು ಈಗ ಗೊತ್ತಾಯ್ತು."

"ಯಾಕಣ್ಣ ಅಂಗಂತಿ?"

"ಮದ್ದಾಕಿಬುಡ್ತರೆ."

"ಮದ್ದು ತಗಿಸಿಕೊಬವುದು ಕಣಣ್ಣ, ಇಲ್ಲೊಬ್ರು ನಾಟಿ ವೈದ್ಯರವುರೆ, ಜಫರುಲ್ಲಾ ಖಾನ್ ಅಂತ ಹೆಸರು."

"ಥೂ, ಆ ಮದ್ದಲ್ಲ, ಸುಮ್ಮನಿರಲೆ ಅತ್ಲಾಗೆ."

"ಯಾವುದೇ ಮದ್ದಾಗ್ಲಿ ತಗುದು ಹೋರ್‍ತರೆ."

"ಆ ಮದ್ದಲ್ಲ ಕಣೊ ಇದು. ಇದೇ ಬ್ಯಾರೆ ಮದ್ದು. ತಿನ್ಲಿಲ್ಲ, ಉಣ್ಕೆಲ್ಲ ಅದೇನೊ ಬಂದು ತಲಿಗೆ ತಾಗತು ಅನ್ನಂಗಾಗ್ಯದೆ."

"ನಿಮ್ಮ ದೇವರತ್ರಕೋಗಣ್ಣ, ಯಲ್ಲಾ ಸರಿಯಾ ಯ್ತದೆ."



"ನಮ್ಮದ್ಯಾವ ದೇವರ್‍ಲಾ?"

"ನೀನೇ ಹೇಳಿದಲ್ಲಣ್ಣ ದ್ಯಾವೇಗೌಡ್ರೆ ನಮ್ಮ ದೇವರು ಅಂತ."

"ಆ ದೇವರೆ ಈಗ ಸಿಟ್ಟಾಗಿರದು. ಅದರ ದೃಷ್ಟಿ ತಪ್ಪಿಸಿಗೊಂಡೆ ತಿರುಗ್ತಾಯಿದ್ದಿನಿ."

"ಈಗೇನು ಮಾಡನ ಅಂತ ಮಾಡಿದ್ದಿ ಅಣ್ಣ?"

"ಏನಿಲ್ಲ ಹಳೆ ಯವಾರ ನೋಡಿಕಂಡು ಆರಾಮಾಗಿರತಿನಿ. ಮಾಜಿ ಮಂತ್ರಿ ಅನ್ನದ ಯಾವನಾರ ತಪ್ಪಸಕ್ಯಾದತೆ? ಸಾಯಗಂಟ ಜತೆಲಿರತದದು. ಅದೂ ಇಲ್ದೆ ಬದ್ದಿರೋರು ಏಟು ಜನವುರೆ."

"ಮಾಜಿ ಮಂತ್ರಿ ಜೊತೆಗೆ ನೂರೈವತ್ತು ಕೋಟಿನೂ ಅಂಟಿಗತ್ತಲ್ಲಣ್ಣ?"

"ಅದು ಮರತೋಯ್ತದೆ ಕಂಡ್ಯ. ಇನ್ನಾವುದಾರ ಇನ್ನೂರು ಕೋಟಿ ಹಗರಣ ಹಕನಾಯಿಸಿಗಂಡ್ರೆ ನೂರೈವತ್ತು ಕೋಟಿ ಮರತೋಯ್ತದೆ."

"ಥೂತ್ತೇರಿ!!!"

-ಯಾಹೂ

ಜೆರುಸಲೇಂ: ಪುಣ್ಯಭೂಮಿಯೋ ಯುದ್ಧಭೂಮಿಯೋ?

ಕಂಡಹಾಗೆ



ಆ ಜಾಗ ಒಂಥರಾ ಬೆಂಗಳೂರಿನಲ್ಲಿರುವ ಚಿಕ್ಕಪೇಟೆಯಂತೆಯೇ ಇದೆ. ಸಣ್ಣದಾದ ರಸ್ತೆಗಳು, ಚಿಕ್ಕ ಓಣಿಗಳು, ಹಳೇ ಮನೆಗಳು, ಕಿರಿದಾದ ಅಂಗಡಿಗಳು, ಸ್ವಾದಿಷ್ಟ ಆಹಾರ ನೀಡುವ ಹೋಟೆಲ್‌ಗಳು, ಹಲವಾರು ದೇಗುಲಗಳು, ಐತಿಹಾಸಿಕ ಕಟ್ಟಡಗಳು.... ಎಲ್ಲವೂ ಅಲ್ಲಿವೆ. ಆದರೆ ದೊಡ್ಡ ಕಾಂಪೌಂಡಿನಲ್ಲಿ ಬಂಧಿತ ಆಗಿರುವ ಆ ಪುಟ್ಟ ನಗರದಲ್ಲೇ ನಾಲ್ಕು ಪ್ರತ್ಯೇಕ ನಗರಗಳಿವೆ. ಒಂದರಲ್ಲಿ ಮುಸ್ಲಿಮರಿದ್ದರೆ, ಇನ್ನೊಂದರಲ್ಲಿ ಯಹೂದಿಯರು, ಮತ್ತೊಂದರಲ್ಲಿ ಕ್ರಿಶ್ಚಿಯನ್ನರು, ಮತ್ತೆ ಕೊನೆಯದರಲ್ಲಿ ಅರ್ಮೇನಿಯನ್ನರು... ಈ ನಾಲ್ಕು ನಗರಗಳ ನಡುವೆ ಅದೆಷ್ಟು ದ್ವೇಷ, ಅಸಹನೆ ಇದೆ ಎಂದರೆ ನನ್ನೊಂದಿಗಿದ್ದ ಯುವ ಅರಬ್ ಗೈಡ್ "ನೀವು ಬೇಕಿದ್ದರೆ ಯಹೂದಿಯರ ಏರಿಯಾಗೆ ಹೋಗಿ, ನಾನಂತೂ ನಿಮ್ಮೊಂದಿಗೆ ಬರಲ್ಲ" ಅಂತ ಅಂದಿದ್ದ. ಆಗ ಪ್ರವಾಸಿಗರಿಗಾಗಿ ಪ್ರಕಟಿಸುವ ಪುಸ್ತಕವನ್ನು ಹಿಡಿದು ಯಹೂದಿಯರ ಪುಣ್ಯಕ್ಷೇತ್ರವಾದ `The Wailing Wall' ಸೇರಿದಂತೆ ಇತರೆ ಪ್ರಮುಖ ಜಾಗಗಳನ್ನು ನೋಡಿಕೊಂಡು ಬಂದಿದ್ದೆ. ಅದೇ ಜೆರುಸಲೇಂ ನಗರ. ಯಹೂದಿಯರ ಏರಿಯಾವನ್ನು ಪ್ರವೇಶಿಸಲು ಮೊಹಮದ್ ಎಂಬ ಗೈಡ್ ಹೆದರಿದ್ದಕ್ಕೆ ಕಾರಣಗಳೂ ಇದ್ದವು.

ಅದು ಅರಬ್ ಮತ್ತು ಯಹೂದಿಯರ ನಡುವೆ ತಲೆತಲಾಂತರದಿಂದ ನಡೆದುಬಂದಿರುವ ಸಂಘರ್ಷದ ಪ್ರತಿಫಲ. ಕಳೆದ ಒಂದು ವಾರದಿಂದ ಇಂಗ್ಲಿಷ್ ಪತ್ರಿಕೆಗಳಲ್ಲಿ, ಟೀವಿ ಚಾನೆಲ್‌ಗಳಲ್ಲಿ, ಇಂಟರ್‌ನೆಟ್‌ನಲ್ಲಿ ಲೆಬನಾನ್ ಮೇಲೆ ಇಸ್ರೇಲ್ ನಡೆಸುತ್ತಿರುವ ಬಾಂಬ್ ದಾಳಿಗಳದ್ದೇ ಸುದ್ದಿ. (ನಮ್ಮ ಕನ್ನಡ ದಿನಪತ್ರಿಕೆಗಳ ಹೊರತಾಗಿ!). ಈ ಒಂದು ವಾರದಲ್ಲೇ ಲೆಬನಾನ್‌ನಲ್ಲಿ ನೂರಾರು ಜನರು ಸತ್ತಿದ್ದಾರೆ; ರಸ್ತೆ, ಆಸ್ಪತ್ರೆ, ವಿದ್ಯುತ್ ಸ್ಥಾವರ, ವಿಮಾನ ನಿಲ್ದಾಣ, ಮನೆಗಳು ನಾಶಗೊಂಡಿವೆ. ಆದರೆ ವಿಚಿತ್ರವೆಂದರೆ ಇಸ್ರೇಲ್‌ನ ಈ ಹಿಂಸಾ ಕೃತ್ಯವನ್ನು ಯಾರೂ ಭಯೋತ್ಪಾದಕರ ದಾಳಿ ಎಂದಿಲ್ಲ, ಯಹೂದಿಯರ ವಿರುದ್ಧ ಸಮರವನ್ನೂ ಘೋಷಿಸಿಲ್ಲ, ಕಡೆಗೆ "ಸುಮ್ಮನಿರಿ ಮಾರಾಯ್ರೆ, ಸಾಕು



ಈ ಹತ್ಯಾಕಾಂಡ" ಎಂದು ಅವರಲ್ಲಿ ವಿನಂತಿಯನ್ನೂ ಮಾಡಿಕೊಂಡಿಲ್ಲ. ಪ್ರತಿದಿನ ಜನ ಸಾಯುತ್ತಿದ್ದರೆ, ನಗರಗಳೇ ನಾಶವಾಗುತ್ತಿದ್ದರೆ ವಿಶ್ವಸಂಸ್ಥೆ ತನ್ನ ಎಲ್ಲ ರಂಧ್ರಗಳನ್ನು ಮುಚ್ಚಿಕೊಂಡು ಕೂತಿದೆ. ಯಾಕೆ ಗೊತ್ತಾ? ಲೆಬನಾನ್‌ನಲ್ಲಿ ಸಾಯುತ್ತಿರುವವರು ಮುಸ್ಲಿಮರು! ಈಗ ಅಮೆರಿಕಾ ಜಗತ್ತಿಗೆ ಒತ್ತಿ, ಒತ್ತಿ ಹೇಳುತ್ತಿರುವಂತೆ ಮುಸ್ಲಿಮರೆಲ್ಲಾ ಭಯೋತ್ಪಾದಕರು!

ಆದರೆ ಈ ಇಡೀ ವಿಷಯ ಅಷ್ಟು ಸರಳವಲ್ಲ. ಯಹೂದಿಯರ ಮತ್ತು ಅರಬ್ಬರ ನಡುವಿನ ಯುದ್ಧದಲ್ಲಿ ಯಹೂದಿಯರ ಧರ್ಮಾಂಧತೆ ಇದೆ, ಬ್ರಿಟಿಷರ ಕುತಂತ್ರವಿದೆ, ಅಮೆರಿಕದ ಹುಂಬತನವಿದೆ, ಅರಬ್ಬರ ಆಸ್ಫೋಟವಿದೆ... ಹಾಗೆಯೇ ಇದೆಲ್ಲದರ ನಡುವೆ ಸಿಕ್ಕಿಹಾಕಿಕೊಂಡು ತತ್ತರಿಸುತ್ತಿರುವ ಅಮಾಯಕರ ಅಸಹಾಯಕತೆ ಇದೆ.

1991 ರಲ್ಲಿ ಅಪ್ಪ ಬರೆದ 'ಬೈರೂತ್ ಬೇಗೆಯಲ್ಲಿ ತಣ್ಣನೆ ಹನಿ' ಎಂಬ ಟೀಕೆ-ಟಿಪ್ಪಣಿ ಬಹಳಷ್ಟು ಓದುಗರಿಗೆ ನೆನಪಿರಬಹುದು (ಟೀಕೆ-ಟಿಪ್ಪಣಿ, ಸಂಪುಟ 2, ಪುಟ 117). ಆ ಲೇಖನದಲ್ಲಿ ರೀಮಾ ಶಹದೇ ಎಂಬ ಮುಸ್ಲಿಮ್ ಮಹಿಳೆಯ ಮನೆಯಲ್ಲಿ ಪ್ರತಿವರ್ಷ ನಡೆಯುತ್ತಾ ಬಂದಿರುವ ಕ್ರಿಶ್ಚಿಯನ್ನರ ಹಬ್ಬವಾದ ಕ್ರಿಸ್‌ಮಸ್ ಬಗ್ಗೆ ಬರೆಯುತ್ತಾ, ಆ ದೇಶದ ಸಂಸ್ಕೃತಿ, ಇತಿಹಾಸ, ಕಲೆ, ಜನಾಂಗಗಳ ನಡುವಿನ ಅನುಮಾನ, ಯುದ್ಧದಿಂದಾಗಿರುವ ಆಘಾತಗಳ ಬಗ್ಗೆ ಅಪ್ಪ ತಮ್ಮ ಎಂದಿನ ಮನಮುಟ್ಟುವ ಶೈಲಿಯಲ್ಲಿ ಬರೆದಿದ್ದರು.

ದುರಂತವೆಂದರೆ ಆ ಲೇಖನವನ್ನು ಅಪ್ಪ ಬರೆದು ಹದಿನೈದು ವರ್ಷಗಳು ಕಳೆದಿದ್ದರೂ ಈ ಅವಧಿಯಲ್ಲಿ ಲೆಬನಾನ್‌ನ ಪರಿಸ್ಥಿತಿ ಬದಲಾಗಿಲ್ಲ, ಇಸ್ರೇಲ್‌ನ ಉದ್ಧಟತನ ಕಡಿಮೆಯಾಗಿಲ್ಲ, ಅರಬ್ಬರ ಗೋಳು ನಿಂತಿಲ್ಲ. ಈ ಇಸ್ರೇಲ್, ಪ್ಯಾಲೆಸ್ಟೈನ್, ಸಿರಿಯಾ, ಇರಾನ್, ಲೆಬನಾನ್‌ಗಳ ಬಗ್ಗೆ ನನಗೆ ಸ್ವಲ್ಪ ಮಟ್ಟಿಗೆ ಗೊತ್ತಾಗಿದ್ದು 'ಓ ಜೆರುಸಲೇಂ' ಎಂಬ ಪುಸ್ತಕವನ್ನು ಹೈಸ್ಕೂಲಿನಲ್ಲಿದ್ದಾಗ ಓದಿದಾಗ.

ಲ್ಯಾರಿ ಕೊಲಿನ್ಸ್ ಮತ್ತು ಡಾಮಿನಿಕ್ ಲಾಪಿಯೇರ್ ಎಂಬುವವರು ಬರೆದಿರುವ ಆ ಪುಸ್ತಕದಲ್ಲಿ ಆ ಇಡೀ ಪ್ರದೇಶದ ಇತಿಹಾಸದಿಂದ ಹಿಡಿದು 1960ರ ತನಕದ ವಿದ್ಯಮಾನಗಳನ್ನು ಕಾದಂಬರಿ ರೂಪದಲ್ಲಿ ವಿವರಿಸಲಾಗಿತ್ತು, ಅದನ್ನು ಓದಿ ನಾನು "ಅಪ್ಪ ಜೆರುಸಲೇಂನಿಂದ ಎತ್ತಂಗಡಿ ಆಗುತ್ತಿರುವ ಅರಬ್ಬರ ಬಗ್ಗೆ ಚಿಂತೆಪಡಬೇಕೋ ಅಥವಾ ತಮ್ಮ ಪೂರ್ವಜರ ನಾಡಿಗೆ ಹಿಂದಿರುಗಬೇಕು ಎಂದು ಹಂಬಲಿಸಿರುವ ಯಹೂದಿಯರ ಆಶಯದೊಂದಿಗೆ ಸ್ಪಂದಿಸಬೇಕೋ, ಗೊತ್ತಾಗುತ್ತಿಲ್ಲ" ಎಂದು ನನ್ನ ತಳಮಳವನ್ನು ಅಪ್ಪನ ಮುಂದೆ ತೋಡಿಕೊಂಡಿದ್ದೆ. ಆಗ ಅಪ್ಪ ಹೇಳಿದ್ದು ಇನ್ನೂ ಚೆನ್ನಾಗಿ ನೆನಪಿದೆ: "ಯಾವುದೇ ಸಮುದಾಯ ಧರ್ಮದ ಹೆಸರಲ್ಲಿ ಒಂದು ದೇಶ ಸ್ಥಾಪಿಸುವುದು ಸರಿಯಲ್ಲ, ಏಕೆಂದರೆ ಧರ್ಮದ ಹೆಸರಿನಲ್ಲೇ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಅಂತಹ ದೌರ್ಜನ್ಯವನ್ನು ಎಂದೂ ಸಹಿಸಕೂಡದು. ಇತಿಹಾಸದ ನೆಪದಲ್ಲಿ, ಧರ್ಮದ ಹೆಸರಲ್ಲಿ ಯಹೂದಿಯರು ಅಲ್ಲಿನ ನಿವಾಸಿಗಳಾದ ಪ್ಯಾಲೆಸ್ಟೀನಿಯರನ್ನು 'ಒದ್ದೋಡಿಸುವುದು ಅಕ್ಷಮ್ಯ" ಎಂದಿದ್ದರು. ಅದನ್ನೇ ಉದಾಹರಣೆಯಾಗಿಟ್ಟುಕೊಂಡು ಭಾರತದಲ್ಲಿ ಜಾತ್ಯತೀತ ಮನೋಧರ್ಮದ ಅವಶ್ಯಕತೆಯನ್ನು ವಿವರಿಸಿದ್ದರು. ಪ್ರಾಯಶಃ ಅದೇ ನನಗೆ ಜಾತ್ಯತೀತತೆಯ ಮೊದಲನೇ ಪಾಠವಾಗಿತ್ತು ಅನ್ನಿಸುತ್ತೆ.

ಆ ಪುಸ್ತಕ ಓದಿದಾಗಿನಿಂದಲೂ ನನಗೆ ಇಸ್ರೇಲ್ ಪ್ಯಾಲೆಸ್ಟೀನ್ ಬಗ್ಗೆ ಅದಮ್ಯ ಕುತೂಹಲ! ಹೇಗಾದರೂ ಒಮ್ಮೆ ಅಲ್ಲಿಗೆ ಹೋಗಿಬರಬೇಕೆಂಬ ಆಸೆ. ಆದರೆ ರಾಜಕೀಯ ಮತ್ತು ಅಂತರರಾಷ್ಟ್ರೀಯ ಸಂಬಂಧಗಳ ಬಗ್ಗೆ ನನಗೆ ಆಗಿನ್ನೂ ಹೆಚ್ಚು ಗೊತ್ತಿರಲಿಲ್ಲ, ಆದರೂ ಒಂದು ಪತ್ರ ಬರೆದಿದ್ದೆ. 'ನಾನು ಕರ್ನಾಟಕದ ಶಾಲೆಯೊಂದರ ವಿದ್ಯಾರ್ಥಿನಿ. ನನಗೆ ಇಸ್ರೇಲ್ ನೋಡಬೇಕು, ಕಿಬುಟ್ಸ್‌ನಲ್ಲಿ ವಾಸ ಮಾಡಬೇಕೆಂಬ ಆಸೆ. ಇಸ್ರೇಲ್ ಮತ್ತು ಭಾರತದ ನಡುವೆ ಯಾವುದಾದರೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮವಿದೆಯೇ?' ಎಂದು ಬರೆದು ಲಕೋಟೆ ಮೇಲೆ 'ಇಸ್ರೇಲ್ ಎಂಬಸಿ, ದೆಹಲಿ' ಎಂದು ಬರೆದ ಪೋಸ್ಟ್ ಮಾಡಿದ್ದೆ. ಹಾಗೆ ಬರೆದು ಒಂದೆರಡು ವರ್ಷಗಳ ನಂತರವೇ ನನಗೆ ಗೊತ್ತಾಗಿದ್ದು : ಭಾರತ ಮತ್ತು ಇಸ್ರೇಲ್ ನಡುವೆ ಸಂಬಂಧವಿಲ್ಲ, ಆ ದೇಶದ ಎಂಬಸಿಯು ಭಾರತದಲ್ಲಿಲ್ಲ ಎಂದು!

ಏಸುಕ್ರಿಸ್ತನನ್ನು ಶಿಲುಬೆಗೇರಿಸಿದ ಜನಾಂಗ ಎಂದೇ ಕ್ರಿಶ್ಚಿಯನ್ನರು ಶತಮಾನಗಳಿಂದ ಯಹೂದಿಯರ ಮೇಲೆ ಕೆಂಡ ಕಾರುತ್ತಾ ಬಂದಿದ್ದಾರೆ. ವಿಚಿತ್ರವೆಂದರೆ ಈ ಎರಡೂ ಧರ್ಮದ ಅನುಯಾಯಿಗಳಿಗೆ ಬೈಬಲ್ ಮೇಲಿನ ನಂಬಿಕೆ ಸಾಮ್ಯವಾಗಿದ್ದರೆ, ಕ್ರಿಶ್ಚಿಯನ್ನರು ಮಾತ್ರ ಆ ನಂತರದ ಹೊಸ ಒಡಂಬಡಿಕೆ (new testament) ಯನ್ನು ಹೆಚ್ಚು ಆಧರಿಸಿದ್ದಾರೆ. ಇನ್ನುಳಿದಂತೆ ಹತ್ತು ದೈವಾಜ್ಞೆಗಳಲ್ಲಿ ಇಬ್ಬರಿಗೂ ನಂಬಿಕೆ. ಇನ್ನೊಂದು ವಿಚಿತ್ರ ನೋಡಿ. ಏಸು ಕ್ರಿಸ್ತ ಬರೀ ಕ್ರಿಶ್ಚಿಯನ್ನರಿಗೆ ಮಾತ್ರ ದೇವದೂತನಲ್ಲ. ಕೊರಾನ್‌ನಲ್ಲಿ ಏಸು ಇಸ್ಸೈಯ್ಯ ಆಗಿಯೂ, ಆತನ ತಾಯಿ ಮೇರಿ ಮರಿಯಂ ಆಗಿಯೂ ಕಾಣಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ಮೇರಿ ಪವಿತ್ರ ಮತ್ತು ಪರಿಶುದ್ಧತೆಯ ಸಂಕೇತ; ಆಕೆಗೆ ಜನಿಸಿದ ಏಸು 'ಜಗತ್ತಿನ ಉದ್ಧಾರಕ' ಎಂದು ಕೊರಾನ್‌ನಲ್ಲಿ ಹೇಳಲಾಗಿದೆ. ಅಂದಹಾಗೆ ಈ ಮೂರೂ ಸಮುದಾಯಗಳು ಮೂರ್ತಿ ಪೂಜೆಯನ್ನು ವಿರೋಧಿಸುತ್ತವೆ.

ಹೀಗೆ ಮೋಸಸ್‌ನ ಯಹೂದಿಯರು, ಏಸುವಿನ ಕ್ರಿಶ್ಚಿಯನ್ನರು, ಪೈಗಂಬರರ ಮುಸ್ಲಿಮರು - ಈ ಮೂರೂ ಸಮುದಾಯಗಳ ನಡುವೆ ಸಾಮ್ಯತೆಗಳಿವೆಯಲ್ಲದೇ, ಮೂವರಿಗೂ ಜೆರುಸಲೇಂ ಪವಿತ್ರ ಕ್ಷೇತ್ರ. ಏಕೆಂದರೆ ಇಲ್ಲಿಗೇ ಯಹೂದಿಯರನ್ನು ಮೋಸಸ್ ಕರೆತಂದದ್ದು, ಇಲ್ಲಿಯೇ ಏಸುಕ್ರಿಸ್ತ ಜನಿಸಿದ್ದು, ಇಲ್ಲಿಂದಲೇ ಪೈಗಂಬರರು ಒಂದು ರಾತ್ರಿ ಬುರಕ್ ಎಂಬ ಕುದುರೆಯನ್ನೇರಿ ಸ್ವರ್ಗಕ್ಕೆ ಹಾರಿ ಮತ್ತೆ ಭೂಮಿಗೆ ಹಿಂತಿರುಗಿದ್ದು! ಇದೆಲ್ಲಾ ಈ ಮೂರೂ ಸಮುದಾಯಗಳನ್ನು ಒಟ್ಟುಗೂಡಿಸಬೇಕಿತ್ತು, ಆದರೆ ಇವತ್ತು ಯಹೂದಿಯರ ಪರವಾಗಿ ಕ್ರಿಶ್ಚಿಯನ್ನರು ನಿಂತು ಮುಸ್ಲಿಮರ ಮೇಲೆ ಸಮರ ಸಾರುತ್ತಿದ್ದಾರೆ, ರಕ್ತದ ಓಕುಳಿಗೆ ಕಾರಣರಾಗಿದ್ದಾರೆ.

ಪ್ರಸ್ತುತ ಸಮಸ್ಯೆ ಶುರುವಾಗಿದ್ದೇ ಬ್ರಿಟಿಷರ ಕಿತಾಪತಿಯಿಂದ. ಹದಿನೆಂಟನೇ ಶತಮಾನದಲ್ಲಿ ಜಗತ್ತಿನೆಲ್ಲೆಡೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ್ದ ಬ್ರಿಟನ್, ಪ್ಯಾಲೆಸ್ಟೀನ್‌ನ್ನು ಆಕ್ರಮಿಸಿಕೊಂಡಿತ್ತು, ಆಗ ಅಲ್ಲಿ ಅರಬ್ಬರು ವಾಸಿಸುತ್ತಿದ್ದರು. ಹತ್ತೊಂಭತ್ತನೇ ಶತಮಾನದ ಆರಂಭದಲ್ಲಿ ಜಗತ್ತಿನೆಲ್ಲೆಡೆ ಎರಡನೆಯ ದರ್ಜೆ ಪ್ರಜೆಗಳಾಗಿ ವಾಸಿಸುತ್ತಾ, ಕ್ರಿಶ್ಚಿಯನ್ನರ ಕೆಂಗಣ್ಣಿಗೆ ಗುರಿಯಾಗುತ್ತಾ ಬೇಸರಗೊಂಡಿದ್ದ ಯಹೂದಿಯರು ತಮ್ಮ ಪೂರ್ವಜರ ನಾಡಾದ ಪ್ಯಾಲೆಸ್ಟೀನ್‌ನ ಅಂಗವಾಗಿದ್ದ ಜೆರುಸಲೇಂಗೆ ವಲಸೆ ಬರಲಾರಂಭಿಸಿದರು. ಎರಡನೇ ಮಹಾ ಯುದ್ಧದಲ್ಲಿ ಹಿಟ್ಲರ್‌ನ ನಾಜಿ ಪಡೆಗೆ ಯಹೂದಿಯರು ತುತ್ತಾದ ನಂತರವಂತೂ ವಲಸೆ ಬರುವವರ ಸಂಖ್ಯೆ ಹೆಚ್ಚಾಯಿತು. ನಿಧಾನವಾಗಿ ತಮ್ಮ ಜಾಗಗಳನ್ನು ಕಳೆದುಕೊಳ್ಳುತ್ತಾ, ತಮ್ಮ ನಾಡಿನಲ್ಲಿ ತಾವೇ ಅಲ್ಪಸಂಖ್ಯಾತರಾಗುತ್ತಾ ಹೋಗುವ ಭಯ ಅರಬ್ಬರನ್ನು ಕಾಡಲಾರಂಭಿಸಿತು. ಸಹಜವಾಗಿಯೇ ಅವರು ಪ್ರತಿಭಟಿಸಿದರು.

ಆಗ ಬ್ರಿಟಿಷರಿಗೆ ಹೊಳೆದದ್ದು ಅದೇ ಹಳೇ ತರ್ಕ : ವಿಭಜನೆ! ಯಹೂದಿಯರಿಗೊಂದಿಷ್ಟು, ಅರಬ್ಬರಿಗೊಂದಿಷ್ಟು ಕೊಟ್ಟು ನಾವು ಇಲ್ಲಿಂದ ಜಾಗ ಖಾಲಿ ಮಾಡುತ್ತೇವೆ ಅಂದರು. ಇದಕ್ಕೆ ವಿಶ್ವಸಂಸ್ಥೆಯ ಸಮ್ಮತಿಯೂ ಇತ್ತು. ಆದರೆ ಅರಬ್ಬರು ದೇಶ ವಿಭಜನೆಗೆ ಒಪ್ಪಲಿಲ್ಲ, ಬದಲಾಗಿ ಯಹೂದಿಯರ ವಲಸೆಯನ್ನು ತಡೆಯಬೇಕು, ಆಗಲೇ ಬಂದು ನೆಲೆಸಿರುವ ಯಹೂದಿಯರಿಗೆ ರಕ್ಷಣೆ ನೀಡುವಂತಹ ಸಂವಿಧಾನ ರಚನೆಯಾಗಬೇಕು ಎಂದು ಹೇಳಿದರು. ಆದರೆ ಇಂತಹ ಪ್ರಜ್ಞಾವಂತ ಪರಿಹಾರ ಬ್ರಿಟಿಷರಿಗೂ ಬೇಕಿರಲಿಲ್ಲ, ಅಮೆರಿಕನ್ನರಿಗೂ ಬೇಕಿರಲಿಲ್ಲ, ಆದ್ದರಿಂದಲೇ ಅವರೆಲ್ಲ ಜೊತೆಗೂಡಿ 1948ರಲ್ಲಿ ಯಹೂದಿಯರಿಗಾಗಿ ಎಂದೇ ಇಸ್ರೇಲ್ ದೇಶವನ್ನು ಘೋಷಿಸಿದರು. ಮಾತ್ರವಲ್ಲ, ಅಲ್ಲಿಯವರೆಗೂ ಅರಬ್ಬರ ವಿರುದ್ಧ ಸಮರ ಸಾರುತ್ತಾ, ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿದ್ದ ಯಹೂದಿಯರ ಹಗಾನ-ಸ್ಟರ್ನ್ ಸಂಘಟನೆಗಳನ್ನು ಒಗ್ಗೂಡಿಸಿ ಇಸ್ರೇಲ್ ಸೈನ್ಯವನ್ನು ಸ್ಥಾಪಿಸಿದರು. ಜಗತ್ತಿನಲ್ಲೇ ಭಯೋತ್ಪಾದಕರು ಒಂದು ದೇಶದ ಅಧಿಕೃತ ಸೈನ್ಯವಾಗಿದ್ದು ಅದೇ ಮೊದಲ ಬಾರಿಯಿರಬಹುದು.

ಆನಂತರ ಈ ಸೈನ್ಯ ಎಂತಹ ಹಿಂಸಾಕೃತ್ಯಗಳಲ್ಲಿ ತೊಡಗಿತೆಂದರೆ, ಅರಬ್ಬರು ಪ್ಯಾಲೆಸ್ಟೀನ್‌ಅನ್ನೇ ತೊರೆದು ನೆರೆಯ ಲೆಬನಾನ್, ಜೋರ್ಡಾನ್ ಮತ್ತು ಸಿರಿಯಾಗಳಿಗೆ ವಲಸೆ ಹೋದರು. ಹೀಗೆ ವಲಸೆ ಹೋದ ಜಾಗಗಳಿಂದಲೇ ತಮ್ಮ ತಾಯಿನೆಲವನ್ನು ಮರುಪಡೆಯಲು ಯತ್ನಿಸಿದರು. ಅದೇ ಹೊತ್ತಿಗೆ ಪ್ಯಾಲೆಸ್ಟೀನ್‌ನಲ್ಲೇ ಉಳಿದುಕೊಂಡಿದ್ದ ಅರಬ್ಬರು 'ಇಂತಿಫಾದಾ'ದಂತಹ ಅಸಹಕಾರ ಚಳವಳಿಯಲ್ಲಿ ತೊಡಗಿದರು. ಸಶಸ್ತ್ರ ಹೋರಾಟದಲ್ಲಿ ತೊಡಗಿದ್ದ ಯಾಸರ್ ಅರಾಫತ್ ಕೂಡ ತಮ್ಮ ಬಂದೂಕನ್ನು ಕೆಳಗಿಟ್ಟು 'ನಾವು ವಾಸಿಸಲು ನಮ್ಮ ತಾಯ್ನಾಡಿನಲ್ಲಿ ಒಂದಿಷ್ಟು ಜಾಗ ಕೊಡಿ' ಎಂದು ಕೇಳಿದರು. ಏನೂ ಪ್ರಯೋಜನವಾಗಲಿಲ್ಲ. ಇದೆಲ್ಲದರಿಂದ ರೋಸತ್ತ ಹಮಸ್ ಎಂಬ ಸಂಘಟನೆಯ ಸದಸ್ಯರು ಮಾನವ ಬಾಂಬ್‌ಗಳಾಗಿ ಸಿಡಿದರು. ನೂರಾರು ಜನರನ್ನು ಬಲಿ ತೆಗೆದುಕೊಳ್ಳುತ್ತಾ ತಾವೂ ಸತ್ತರು. ಇದ್ಯಾವುದಕ್ಕೂ ಇಸ್ರೇಲ್ ಬಗ್ಗಲಿಲ್ಲ, ಬದಲಾಗಿ ತನ್ನ ವ್ಯಾಪ್ತಿಯಲ್ಲಿದ್ದ ಪ್ರದೇಶವನ್ನು ವಿಸ್ತರಿಸಿಕೊಳ್ಳುತ್ತಾ ಹೋಯಿತು.



ಇದಕ್ಕೆ ಒಂದು ಉದಾಹರಣೆ ಜೆರುಸಲೇಂನ ಹಳೆಯ ಕೋಟೆಯ ಸುತ್ತ ತಲೆಯೆತ್ತಿರುವ ಅರಮನೆಯಂಥ ಕಟ್ಟಡಗಳು. ಆವತ್ತು ನನ್ನ ಗೈಡ್ ಮಹಮ್ಮದ್ ಅವುಗಳನ್ನು ತೋರಿಸಿ, 'ನೋಡು, ಈ ದೇಶದ ಮೂಲ ನಿವಾಸಿಗಳಾದ ನಮ್ಮನ್ನು ಇವತ್ತು ಸ್ಲಂನಂತಹ ಪ್ರದೇಶಗಳಿಗೆ ದೂಡಲಾಗಿದೆ. ಆದರೆ ಇಲ್ಲಿಗೆ ಬಂದು ಎಂದೂ ವಾಸಿಸದ ಅಮೆರಿಕದ ಯಹೂದಿಯರು ಇಂತಹ ಅರಮನೆಗಳನ್ನು ಕಟ್ಟಿದ್ದಾರೆ. ಆ ಮನೆಗಳು ಭೂತ ಬಂಗಲೆಗಳು. ಏ[illegible]ದರೆ ಅಲ್ಲಿ ಯಾರೂ ವಾಸವಿರುವುದಿಲ್ಲ' ಎಂದು ಹ[illegible] ಇದ್ದ.

ನಿಮಗೆ ಆಶ್ಚರ್ಯವಾಗಬಹುದು. ಇ[illegible] ಇಸ್ರೇಲ್ ದೇಶದಲ್ಲಿನ ಯಹೂದಿಯರ ಒಟ್ಟು ಜನಸಂಖ್ಯೆಗಿಂತಾ ಹೆಚ್ಚು ಯಹೂದಿಯರು ಅಮೆರಿಕಾದ ನ್ಯೂಯಾರ್ಕ್ ನಗರದಲ್ಲಿದ್ದಾರೆ. ಅಷ್ಟೇ ಅಲ್ಲ, ಇವತ್ತು ಅಮೆರಿಕದ ಉದ್ಯಮ, ಮಾಧ್ಯಮಗಳನ್ನು, ಸಿನಿಮಾ ಜಗತ್ತನ್ನು, ಸಂಗೀತ ಕ್ಷೇತ್ರವನ್ನು ತಮ್ಮ ಬಿಗಿಮುಷ್ಟಿಯಲ್ಲಿರಿಸಿಕೊಂಡಿದ್ದಾರೆ. ಅಲ್ಲಿ ತಾವು ದುಡಿದ ಹಣವನ್ನು ಹೀಗೆ ಪ್ಯಾಲೆಸ್ಟೀನಿಯರನ್ನು ನಿರಾಶ್ರಿತರನ್ನಾಗಿಸುವ ಯೋಜನೆಗಳಲ್ಲಿ ತೊಡಗಿಸಿದ್ದಾರಲ್ಲದೆ, ಅಮೆರಿಕದ ಸರ್ಕಾರದ ಮೇಲೂ ಇಸ್ರೇಲ್ ಪರ ಒತ್ತಡ ಹೇರುತ್ತಿದ್ದಾರೆ. ಹೀಗಿದ್ದರೂ ಈಗ ಅಮೆರಿಕಾದ ಕಣ್ಣಲ್ಲಿ ಮುಸ್ಲಿಮರು (ಅವರು ಯಾವ ದೇಶದವರಾಗಿದ್ದರೂ) ಭಯೋತ್ಪಾದಕ ಸಮುದಾಯವಾಗಿರುವುದರಿಂದ ಅಮೆರಿಕಾ ಇಸ್ರೇಲ್ ಪರ ವಹಿಸುತ್ತದೆ. ಅಷ್ಟೇ ಅಲ್ಲ, ಅಫಘಾನಿಸ್ತಾನ್ ಮತ್ತು ಇರಾಕ್ ಮೇಲೆ ದಾಳಿ ಮಾಡಿದ ಅಮೆರಿಕ ಇವತ್ತು ವಿಶ್ವಸಂಸ್ಥೆಯ ವತಿಯಿಂದ ಅಂತರರಾಷ್ಟ್ರೀಯ ಸೈನ್ಯವನ್ನು ಲೆಬನಾನ್‌ಗೆ ಕಳುಹಿಸೋಣ ಎಂದು ಕೋಫಿ ಅನ್ನಾನ್ ಅಂದರೆ ಆ ಸಲಹೆಯನ್ನು ಸಾರಾಸಗಟು ತಿರಸ್ಕರಿಸುತ್ತೆ.

ಇವತ್ತು ಲೆಬನಾನ್ ಮತ್ತು ಇಸ್ರೇಲ್ ನಡುವಿನ ಯುದ್ಧಕ್ಕೆ ಹೆಜಬೊಲ್ಲಾ ಎಂದು ಸಂಘಟನೆಯೇ ಕಾರಣ ಎಂದು ಅಮೆರಿಕಾ ಮತ್ತು ಅದರ ಅಂಗದಂತಿರುವ ಮಾಧ್ಯಮಗಳು ವಾದಿಸುತ್ತಿವೆ. ಆದರೆ ವಾಸ್ತವವಾಗಿ ಹೆಜಬೊಲ್ಲಾದ ಸ್ಥಾಪಕರು ಇಸ್ಲಾಮಿನ ಮುಲ್ಲಾಗಳೇ ಆಗಿದ್ದರೂ ಆ ಸಂಘಟನೆ ಕೇವಲ ಮುಸ್ಲಿಮರ ಪರ ನಿಲುವನ್ನು ತ್ಯಜಿಸಿ ಎಲ್ಲರನ್ನೂ ಒಟ್ಟಿಗೆ ಸೇರಿಸಿಕೊಳ್ಳುವ ನಿರ್ಣಯ ತೆಗೆದುಕೊಂಡು ಅದೆಷ್ಟೋ ವರ್ಷಗಳಾಗಿವೆ. ಇಂದಿಗೂ ಹೆಜಬೊಲ್ಲಾದ ಈ ಸರ್ವ ಧರ್ಮ ನಿಲುವು ಮುಂದುವರೆದಿದೆ.

ಸುಮಾರು ಹತ್ತು ವರ್ಷಗಳ ಹಿಂದೆ ನಾನು ಇಸ್ರೇಲ್‌ಗೆ ಭೇಟಿ ಇತ್ತಾಗ ಯುದ್ಧ ನಡೆಯುತ್ತಿರಲಿಲ್ಲ, ಆದರೂ ಎಲ್ಲೆಲ್ಲಿಯೂ ಸೈನಿಕರು, AK 47 ಗಳನ್ನು ಹೊತ್ತಿರುವ ಯುವಕ-ಯುವತಿಯರು. ಪ್ರತಿ ಹಂತದಲ್ಲೂ ತಪಾಸಣೆ, ತಡೆಗೋಡೆಗಳು. ಅದರಲ್ಲೂ ಒಬ್ಬಳೇ ಪ್ರವಾಸ ಮಾಡುತ್ತಿದ್ದ ನನ್ನಂತಹ 'ಕರಿ' ಬಣ್ಣದವಳನ್ನು ನೋಡಿ ಅವರಲ್ಲಿ ಅಚ್ಚರಿ, ಅನುಮಾನ. ನಾನು ಎಲ್ಲೇ ಹೋದರೂ ನನ್ನ ಬ್ಯಾಗ್ ತಪಾಸಣೆ ಮತ್ತು "ಯಾರು, ಎಲ್ಲಿಂದ, ಯಾಕೆ?" ಎಂಬ ವಿಚಾರಣೆ. ಆದರೂ ಡೆಡ್ ಸೀಗೆ ಹೋಗಿ ಅದರ ನೀರಿನಲ್ಲಿ ತೇಲಾಡಿದೆ. (ಸಮುದ್ರದಂತಿರುವ ಆ ಕೆರೆಯ ನೀರಿನಲ್ಲಿ ಉಪ್ಪಿನಾಂಶ ಎಷ್ಟಿದೆ ಎಂದರೆ ನೀವು ಮುಳುಗಬೇಕು ಅನ್ನಿಸಿದರೂ ಅದರಲ್ಲಿ ಮುಳುಗಲಾಗುವುದಿಲ್ಲ. ಅಂದಹಾಗೆ 'ಏಸುಕ್ರಿಸ್ತ ನೀರಿನ ಮೇಲೆ ನಡೆದ' ಅನ್ನುತ್ತಾರಲ್ಲ ಆತ ಯಾರೂ ಮುಳುಗಲಾಗದ ಈ ಕೆರೆಯ ಮೇಲೆ ನಡೆದಿರಬಹುದೇ ಅನ್ನಿಸಿತು). 'ಯಾದ್ ವಶೇಮ್' (ನಾವು ಎಂದೂ ಮರೆಯುವುದಿಲ್ಲ) ಎಂಬ ಮ್ಯೂಸಿಮ್ ನೋಡಿದೆ. ಜೆರಿಖೋ ಎಂಬ ಬೆಟ್ಟ ಹತ್ತಿದೆ... ಆದರೆ ಅಲ್ಲಿನ ಸೆಕ್ಯೂರಿಟಿ ಹೇಗಿತ್ತೆಂದರೆ ಅಪ್ಪಿತಪ್ಪಿಯೂ ನಾನು ಅರಬ್ಬರು ಇದ್ದ ಜಾಗದ ಹತ್ತಿರ ಸುಳಿಯುವಂತೆಯೇ ಇರಲಿಲ್ಲ. ಅಷ್ಟೇ ಅಲ್ಲ, ಭಾರತಕ್ಕೆ ಹಿಂದಿರುಗಲು ವಿಮಾನ ನಿಲ್ದಾಣಕ್ಕೆ ಹೋದಾಗ, ಅರಬ್ ಗೈಡ್ ಒಬ್ಬ ನನಗೆ ಪ್ರಮುಖ ಜಾಗಗಳನ್ನು ತೋರಿಸಿದ್ದ ಅಂತ ಹೇಳಿದ ಕೂಡಲೇ ನನ್ನನ್ನು ಸಂಪೂರ್ಣ ಸೆಕ್ಯೂರಿಟಿ ಚೆಕ್‌ಗೆ ಒಳಪಡಿಸಿದರು. ನಾಲ್ಕು ಅಧಿಕಾರಿಗಳು ಒಬ್ಬರಾದ ನಂತರ ಒಬ್ಬರಂತೆ ಒಂದು ಗಂಟೆ ಕಾಲ ನನ್ನನ್ನು ಪ್ರಶ್ನಿಸಿದರು. ಬ್ಯಾಗಿನ ಜಿಪ್‌ನಿಂದ ಹಿಡಿದು ನನ್ನ ಶರ್ಟ್ ಒಂದರಲ್ಲಿದ್ದ ಮೆಟಲ್ ಗುಂಡಿಗಳನ್ನೂ ಪ್ರತ್ಯೇಕವಾಗಿ ಪರೀಕ್ಷಿಸಿದರು. ಲ್ಯಾಪ್‌ಟಾಪ್, ಕ್ಯಾಮರಾ, ಸಿಡಿ ಪ್ಲೇಯರ್... ಪ್ರತಿಯೊಂದನ್ನೂ ಪ್ರಯೋಗಿಸಿ ನೋಡಿದರು. ಕೊನೆಗೆ ಇನ್ನೇನು ಪ್ಲೇನ್ ಬಿಡುವುದರಲ್ಲಿದೆ ಅಂದಾಗ ನನ್ನನ್ನು ಕಳುಹಿಸಿದ್ದರು.

ಪಾಪ, ಆ ಅರಬ್ ಗೈಡ್ ನನ್ನ ಮುಂದೆ ಹೇಳಿದ್ದು, ಮುಖ ತೋಡಿಕೊಂಡಿದ್ದು, ಬೇಸರಪಟ್ಟಿದ್ದು ತನ್ನ ಜನರಿಗಾಗುತ್ತಿರುವ ಅನ್ಯಾಯದ ಬಗ್ಗೆ. ಆ ದುಃಖವನ್ನು ಯಾವ ಯಂತ್ರದಲ್ಲಿ ಪರೀಕ್ಷಿಸುವುದು? ಅಂತ [illegible]ವುದು? [illegible] ಹಾಕುವುದು?...

—ಗೌರಿ ಲಂಕೇಶ್

ಏನಂತೆ ಅವಳ್ನು? ಯಾಕೆ ಮಾಡಲ್ವಂತಾ? ನೈಟು ಟೆನ್ ಟು ಸಿಕ್ಸ್ ಮಾಡೋ ರೋಲಿದೆ. ಆಕ್ಟ್ ಮಾಡ್ತಾಳಾ ಕೇಳು? ಅವಳೊಬ್ಬಳೇನಾ ಇರೋದು? ತಾರಾ ಇಲ್ವಾ? ....ಕಾ ಮುಚ್ಕೊಂಡು ಬಂದು ಮಾಡು ಅಂದ್ರೆ ಕತೆಗಿತೆ ಏನೂ ಕೇಳ್ದೆ ಬಂದುಬಿಡ್ತಾಳೆ. ಸರಿ ಬಿಡು; ಅವಳಿಗೇ ಹೇಳ್ತೀನಿ....!

ಇದು ಪೋಕರಿ ಡೈರೆಕ್ಟರ್ ರವಿಶ್ರೀವತ್ಸ ಕನ್ನಡದ ಹಿರಿಯ ನಟಿ ಶೃತಿಯನ್ನು ಗೇಲಿ ಮಾಡಿದ ರೀತಿ. ತನ್ನ ಕುಚೇಷ್ಟೆಯನ್ನು ಅತ್ತಲಿಂದ ಶೃತಿ ಕೇಳಿಸಿಕೊಳ್ಳುತ್ತಿದ್ದಾರೆ ಎಂಬ ಪರಿವೆಯಿಲ್ಲದೇ ನಡೆಸಿದ ಪುಂಡಾಟಿಕೆ. ಬಹುಶಃ ತಮಿಳುನಾಡಾಗಿದ್ದರೆ ಈ ಹೊತ್ತಿಗೆ ನಟಿಯರೆಲ್ಲ ಬೀದಿಗಿಳಿದು ಪ್ರತಿಭಟಿಸುತ್ತಿದ್ದರು. ದುರಂತವೆಂದರೆ ಇದು ಗಾಂಧಿನಗರ. ರವಿಶ್ರೀವತ್ಸನಂಥ ಪೋಕರಿಗಳೇ ಇಲ್ಲಿ ಚಲಾವಣೆಯಲ್ಲಿರುವ ನಾಣ್ಯಗಳು.

ತ್ತಾನೆಂದರೆ; ಅದು ಫಿಲ್ಮ್ ಛೇಂಬರ್ ಹೇಡಿತನವಾ? ಅಥವಾ ಕನ್ನಡ ಚಿತ್ರರಂಗದ ಅಧಃಪತನವಾ?

ಸದ್ಯ ಗಾಂಧಿನಗರದಲ್ಲಿ ಸಲ್ಲುತ್ತಿರುವವರ ಪೈಕಿ ರವಿ ಶ್ರೀವತ್ಸನಂಥ ಕ್ರಿಮಿಗಳು ಸಾಕಷ್ಟಿದ್ದಾರೆ. ಅವರ ಪಾಲಿಗೆ ನಟಿಯರಷ್ಟೇ ಅಲ್ಲ, ಹೆಣ್ಣೆಂದರೇನೇ ಖರೀದಿಯ ಸರಕು. ಘಟನೆಯನ್ನೇ ನೋಡಿ.

ತನ್ನ ಮುಂದಿನ ಚಿತ್ರ 'ರಾಜೀವ್ ಗಾಂಧಿ ಅಲ್ಲ ಗೋಡ್ಸೆ' ಎಂಬ ಅಸಂಬದ್ಧ ಟೈಟಲ್ಲಿನ ಚಿತ್ರಕ್ಕೊಂದು ಯಕಶ್ಚಿತ್ ಪಾತ್ರವೊಂದನ್ನು ಮಾಡುವಂತೆ ನಟಿ ಶೃತಿಗೆ ದುಂಬಾಲು ಬಿದ್ದ ಶ್ರೀವತ್ಸ ಕಳೆದ ಶನಿವಾರ ಸಂಜೆ ಶೃತಿಯವರ ಮನೆಗೆ ಹೋಗಿ ಪಾತ್ರ ವಿವರಿಸಿದ್ದಾನೆ. ಹೇಳಿಕೇಳಿ ಅದು ಕ್ಷುಲ್ಲಕ ಪಾತ್ರ. ನಟಿ ಶೃತಿ ಆದೇನೇ ಜರೂರತ್ತಿದ್ದರೂ ಇಂಥ ಅಸಭ್ಯ ಪಾತ್ರಗಳನ್ನು ಒಪ್ಪಿಕೊಳ್ಳುವುದಿಲ್ಲ. ರಾತ್ರಿಯಿಡೀ ಯೋಚಿಸಿ ಬೆಳಿಗ್ಗೆಯ ಹೊತ್ತಿಗೆ ಶ್ರೀವತ್ಸನಿಗೆ ಫೋನ್ ಮಾಡಿ 'ಯಾಕೋ ಇಂಥ ಪಾತ್ರ

ತೀರ ಇತ್ತೀಚೆಗೆ ಹಿರಿಯ ಪತ್ರಕರ್ತ ಸದಾಶಿವ ಶೆಣೈಗೆ ಕೊಲೆ ಬೆದರಿಕೆ ಹಾಕಿ ಇನ್ನೇನು ಜೈಲು ಪಾಲಾಗುವ ಹೊತ್ತಿಗೆ ಬಂದು ಕಾಲು ಹಿಡಿದಿದ್ದ ಪೋರ್ಕಿ ಶ್ರೀವತ್ಸ. ಇಷ್ಟೆಲ್ಲ ಆದ ನಂತರವೂ ನಟಿಯರಾದ ಶೃತಿ ಮತ್ತು ತಾರಾ ಬಗ್ಗೆ ಇಷ್ಟೊಂದು ತುಚ್ಛವಾಗಿ ಮಾತಾಡುತ್ತಾನೆಂದರೆ; ಅದು ಫಿಲ್ಮ್ ಛೇಂಬರ್ ಹೇಡಿತನವಾ? ಅಥವಾ ಕನ್ನಡ ಚಿತ್ರರಂಗದ ಅಧಃಪತನವಾ?

ಅಂತ ಆದೆಂಥಾ ಹೊಲಸು ಪಾತ್ರವಿದ್ದರೂ ನಾವುಗಳು ಒಪ್ಪಿಕೊಳ್ಳಬೇಕಾ?' ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ. ಮನೆಯಲ್ಲೇ ಇದ್ದ ಶೃತಿಯವರ ಅತ್ತೆ ನಿರ್ದೇಶಕ ಮಹೇಂದರ್ ತಾಯಿಯವರೂ ಶ್ರೀವತ್ಸನನ್ನು ಝಾಡಿಸಿದ್ದಾರೆ.

ಬಹುಶಃ ಬೇರೆ ಯಾರೇ ಆಗಿದ್ದರೂ ಕ್ಷಮೆ ಕೇಳುತ್ತಿದ್ದರು. ಆದರೆ ಶ್ರೀವತ್ಸ 'ನೋಡ್ರೀ ನಾನು ಮಾತಾಡೋದೇ ಹಾಗೆ. ಇಷ್ಟಾ ಇದ್ರೆ ಕೇಳಿಸಿಕೊಳ್ಳಿ ಬ್ಯಾಡದಿದ್ರೆ ಬಿಟ್ಹಾಕಿ' ಎಂದು ದಬಾಯಿಸಿಬಿಟ್ಟ. ಇದು ಶೃತಿಯವರ ಪತಿ ಮಹೇಂದರ್‌ಗೂ ಗೊತ್ತಾಗಿ ಅವರೂ ಶ್ರೀವತ್ಸನನ್ನು ಕೇಳಿದ್ದಾರೆ. ಅದಕ್ಕೆ ಶ್ರೀವತ್ಸ 'ನಾನು ಹೇಳೋದೂ ಸಾಲದು ಅಂತ ರೈ ಕೈಯಲ್ಲಿ ಬೇರೆ ಫೋನ್ ಮಾಡಿಸ್ಬೇಕೇನ್ರಿ ನಿಮಗೆ?' ಎಂದೇ ದಬಾಯಿಸಿದ್ದಾನೆ. ಯಾವತ್ತು ಶ್ರೀವತ್ಸನ ಬಾಯಿಂದ 'ರೈ' ಎಂಬ ಶಬ್ದ ಕೇಳಿ ಬಂತೋ ಮಹೇಂದರ್ ಥಂಡಾ ಹೊಡೆದಿದ್ದಾರೆ.

ಮರುದಿನಕ್ಕೇ ಇದು ಗಾಂಧಿನಗರದಾದ್ಯಂತ ಸುದ್ದಿಯಾಗಿದೆ. ಈ ಬಗ್ಗೆ ಒಂದೆರಡು ಪತ್ರಿಕೆಗಳೂ ವರದಿ ಮಾಡಿವೆ. ಆದರೆ ನಟಿ ಶೃತಿಯಾಗಲಿ, ಅವರ ಪತಿ ಮಹೇಂದರ್ ಆಗಲಿ ಈ ಬಗ್ಗೆ ಪೊಲೀಸ್ ಕಂಪ್ಲೇಂಟ್ ಕೊಡಲಿಲ್ಲ. ಅದು ರೈ ಬಗೆಗಿನ ಭಯವೋ ಅಥವಾ ಅವರ ದೊಡ್ಡ ಮನಸ್ಸೋ ಗೊತ್ತಿಲ್ಲ. ಒಂದು ಮೂಲದ ಪ್ರಕಾರ ಹಿರಿಯ ನಟ ಅಂಬರೀಷ್ ಶ್ರೀವತ್ಸನನ್ನು ತಮ್ಮ ಮನೆಗೆ ಕರೆಸಿಕೊಂಡು ಶೃತಿಯವರ ಕಾಲಿಗೆ ಬೀಳಿಸಿದ್ದಾರೆ. ಅಲ್ಲಿಗೆ ಇಡೀ ಪ್ರಕರಣ ತಣ್ಣಗಾಗಿದೆ.

ಒಬ್ಬ ಪೋಕರಿ ಡೈರೆಕ್ಟರ್ ಹಿರಿಯ ನಟಿಯೊಬ್ಬಳ ಬಗ್ಗೆ ಇಷ್ಟೊಂದು ತುಚ್ಛವಾಗಿ ಮಾತಾಡಿದ್ದನ್ನು ಪತ್ರಿಕೆಗಳು ಬರೆದ ನಂತರವೂ ಫಿಲ್ಮ್ ಛೇಂಬರ್ ತೆಪ್ಪಗಿದೆ. ಮತ್ತೊಬ್ಬ ನಟಿ ತಾರಾ ಈ ಬಗ್ಗೆ ಸೊಲ್ಲೆತ್ತಿಲ್ಲ. ಉಳಿಕೆ ನಟಿಯರಿಗ್ಯಾರಿಗೂ ಇದು ತಮಗಾದ ಅವಮಾನ ಎನ್ನಿಸಿಲ್ಲ. ಇಲ್ಲಿಗೆ ಎರಡು ವರ್ಷದ ಹಿಂದೆ ತಮಿಳಿನ ಡೈರೆಕ್ಟರ್ ಥಂಕರ್ ಬಚ್ಚನ್ ಎಂಬಾತ 'ದುಡ್ಡಿಗಾಗಿ ಸಿನಿಮಾದಲ್ಲಿ ನಟಿಸೋ ಹೆಂಗಸರೆಲ್ಲಾ ಒಂಥರಾ ವೇಶ್ಯೆಯರಿದ್ದಂತೆ' ಎಂಬ ವಿಕೃತ ಹೇಳಿಕೆ ಕೊಟ್ಟದ್ದಕ್ಕೆ ಇಡೀ ತಮಿಳು ಚಿತ್ರರಂಗದ ನಟಿಯರೆಲ್ಲಾ ಪ್ರತಿಭಟಿಸಿದ್ದರು. ಆವತ್ತು ತಮಿಳಿನ ಹಿರಿಯ ನಟಿ ಮನೋರಮಾ ಸೇರಿದಂತೆ ಖುಷ್ಬೂ ತನಕ ಪ್ರತಿಯೊಬ್ಬರೂ ಬೀದಿಗಿಳಿದಿದ್ದರು. ಥಂಕರ್ ಬಚ್ಚನ್ ವಿಧಿಯಿಲ್ಲದೇ ಮನೋರಮಾರವರ ಕಾಲಿಗೆ ಬಿದ್ದು ಖುಷ್ಬೂಗೆ ಕೈ ಮುಗಿದು ಎಲ್ಲ ನಟಿಯರ ಮುಂದೆ ಕ್ಷಮೆ ಕೇಳಿಕೊಂಡ.

ತಮಿಳು ನಟಿಯರ ಕಿಂಚಿತ್ತಾದರೂ ಸ್ವಾಭಿಮಾನ ಕನ್ನಡದ ನಟಿಯರಿಗಿರಬೇಕಿತ್ತು. ಈಗಲೂ ಕಾಲ ಮಿಂಚಿಲ್ಲ, ಶೃತಿ ಮನಸ್ಸು ಮಾಡಿದರೆ ರವಿಶ್ರೀವತ್ಸನಂಥವರು ಜೈಲು ಪಾಲಾಗುವ ಕಾಲ ದೂರವೇನಿಲ್ಲ.

-ರಾ. ಸೋಮನಾಥ್



ಪೋರ್ಕಿ ಡೈರೆಕ್ಟರ್ ರವಿ ಶ್ರೀವತ್ಸನ ಹಾವಳಿ

ರಾತ್ರಿ ಬರ್ತಾಳಾ ಕೇಳು?

ನಟಿ ಶೃತಿಗೆ ಕೀಚಕ ಪೀಡೆ




ಶೃತಿಯೇನೋ ಮರ್ಯಾದೆಗೆ ಅಂಜಿ ತೆಪ್ಪಗಿದ್ದಾರೆ. ಆದರೆ ರಾಷ್ಟ್ರ ಪ್ರಶಸ್ತಿ ವಿಜೇತೆ, ಪ್ರಜ್ಞಾವಂತೆ, ಕನ್ನಡದ ಶಾಬಾನಾ ಅಜ್ಮಿ; ಎಂದೆಲ್ಲಾ ಕರೆಸಿಕೊಳ್ಳುವ ತಾರಾ ತನ್ನ ಬಗ್ಗೆ ಲಂಪಟ ಡೈರೆಕ್ಟರ್ ಒಬ್ಬ ಇಷ್ಟೊಂದು ಕೀಳಾಗಿ ಮಾತಾಡಿದ್ದನ್ನು ಕೇಳಿಸಿಕೊಂಡೂ ಸುಮ್ಮನಿದ್ದಾರೆಂದರೆ ಏನರ್ಥ?

ಅಷ್ಟಕ್ಕೂ ಈ ರವಿ ಶ್ರೀವತ್ಸನ ಹಾವಳಿಗೆ ಇದು ಮೊದಲ ಉದಾಹರಣೆಯೇನಲ್ಲ. ಯಜಮಾನ ಶೂಟಿಂಗ್ ಸಂದರ್ಭದಲ್ಲಿ ಮತ್ತೊಬ್ಬ ನಟಿ ಪ್ರೇಮಾಗೆ ಈತ ಆಸಿಡ್ ಹಾಕ್ತೀನಿ ಎಂದು ಹೂಂಕರಿಸಿದ್ದನಂತೆ. ಪವಿತ್ರಾ ಲೋಕೇಶ್ ಎಂಬ ಇನ್ನೊಬ್ಬ ನಟಿ ಬಗ್ಗೆಯೂ ಅತ್ಯಂತ ಕೀಳಾಗಿ ಮಾತಾಡಿ ಆನಂತರ ಕಾಲಿಗೆ ಬಿದ್ದಿದ್ದ. ತೀರ ಇತ್ತೀಚೆಗೆ ಹಿರಿಯ ಪತ್ರಕರ್ತ ಸದಾಶಿವ ಶೆಣೈಗೆ ಕೊಲೆ ಬೆದರಿಕೆ ಹಾಕಿ ಇನ್ನೇನು ಜೈಲು ಪಾಲಾಗುವ ಹೊತ್ತಿಗೆ ಬಂದು ಕಾಲು ಹಿಡಿದಿದ್ದ. ಇಷ್ಟೆಲ್ಲ ಆದ ನಂತರವೂ ನಟಿಯರಾದ ಶೃತಿ ಮತ್ತು ತಾರಾ ಬಗ್ಗೆ ಇಷ್ಟೊಂದು ತುಚ್ಛವಾಗಿ ಮಾತಾಡು



ಥಂಕರ್ ಬಚ್ಚನ್‌ನ ಕ್ಷಮಾಪಣೆ



ನನಗಿಷ್ಟವಿಲ್ಲ ಮುಂದೊಮ್ಮೆ ನೋಡೋಣವಂತೆ....' ಎಂದಿದ್ದಾರೆ. ಆದರೆ ಶ್ರೀವತ್ಸನ ಮೊಬೈಲ್ ಫೋನ್ ಆತನ ಪ್ರೊಡಕ್ಷನ್ ಮ್ಯಾನೇಜರ್ ಪ್ರಕಾಶನ ಬಳಿಯಿತ್ತು.

ಶೃತಿಯವರ ಕರೆಯನ್ನು ಕಟ್ ಮಾಡದೇ ಪ್ರಕಾಶ "ಗುರೂ, ಶೃತಿ ಫೋನ್' ಎಂದಿದ್ದಾನೆ. ಅದಕ್ಕೆ ಶ್ರೀವತ್ಸ ಏನಂತೆ ಅವಳ್ದು? ಎಂದ. ಪ್ರಕಾಶ 'ಪಾರ್ಟು ಇಷ್ಟ ಆಗಲಿಲ್ಲವಂತೆ' ಎಂದಿದ್ದೇ ತಡ ಫೋನ್‌ಲೈನ್ ಕಟ್ಟಾಗಿಲ್ಲ ಎಂಬುದರ ಪರಿವೆ ಕೂಡ ಇಲ್ಲದೇ 'ನೈಟು ಟೆನ್ ಟು ಸಿಕ್ಸ್ ಮಾಡೋ ರೋಲಿದೆ ಆಕ್ಟ್ ಮಾಡ್ತಾಳಾ ಕೇಳು...! ಅವಳೊಬ್ಬಳೇನಾ ಇರೋದು? ತಾರಾ ಇಲ್ವಾ? .....ಕಾ ಮುಚ್ಕೊಂಡು ಬಂದು ಮಾಡು ಅಂದ್ರೆ ಕತೆಗಿತೆ ಏನೂ ಕೇಳ್ದೆ ಬಂದು ಬಿಡ್ತಾಳೆ....!' ಎಂದಿದ್ದಾನೆ ಈ ಸ್ತ್ರೀವಸ್ತ್ರ.


ಮಹಿಳೆಯರಿಗೆ ಲೈಂಗಿಕ ಕಿರುಕುಳ ನಿಷೇಧ ಕಾಯ್ದೆಯ ಸೆಕ್ಷನ್ 183ರ ಪ್ರಕಾರ ಯಾರೇ ಸ್ತ್ರೀ ಬಗ್ಗೆ ಪರೋಕ್ಷವಾಗಿ ಛೇಡಿಸುವುದು, ಲೈಂಗಿಕ ಸಂಜ್ಞೆಗಳನ್ನು ತೋರಿಸುವುದು, ಆಕೆಯೊಡನೆ ಲೈಂಗಿಕ ಹಿತಾಸಕ್ತಿ ಇಟ್ಟುಕೊಂಡು ಸಂಭಾಷಣೆ ಮಾಡುವುದು ಮತ್ತು ಆಕೆಯ ಘನತೆಗೆ ಧಕ್ಕೆಯಾಗುವ ರೀತಿಯ ನಡವಳಿಕೆ ಪ್ರದರ್ಶಿಸುವುದು ಅಪರಾಧ. ಸುಪ್ರೀಂಕೋರ್ಟ್ ಅದನ್ನು ಲೈಂಗಿಕ ಕಿರುಕುಳವೆಂದೇ ವಿಶ್ಲೇಷಿಸಿ ಅದಕ್ಕೆ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಈಗ ನಟಿ ಶೃತಿ ಸಣ್ಣದೊಂದು ಪೊಲೀಸ್ ಕಂಪ್ಲೇಂಟ್ ಕೊಟ್ಟರೂ ಸಾಕು, ಪೋರ್ಕಿ ಡೈರೆಕ್ಟರ್ ರವಿ ಶ್ರೀವತ್ಸ ಜೈಲು ಪಾಲಾಗುತ್ತಾನೆ. ಆದರೆ ಶೃತಿಗಾಗಲಿ ಅವರ ಪತಿ ಮಹೇಂದರ್‌ಗಾಗಲಿ ಪೊಲೀಸ್ ಕಂಪ್ಲೇಂಟ್ ಕೊಡುವಷ್ಟು ಧೈರ್ಯವಿಲ್ಲ.

ಯಾವತ್ತು ಶ್ರೀವತ್ಸನ ಬಾಯಿಂದ ಇಂಥ ಆಣಿ ಮುತ್ತುಗಳುದುರಿತೋ ಶೃತಿ ತಕ್ಷಣವೇ ಮತ್ತೊಂದು ಕರೆ ಮಾಡಿ 'ಏನಪ್ಪಾ ದೊಡ್ಡ ಮನುಷ್ಯ! ರಾತ್ರಿ ಮನೆಗೆ ಬಂದು ನನ್ನನ್ನು ಅಕ್ಕಾ ಅಂಥ ಕರೆದೆಯಲ್ಲ; ನಿನ್ನಕ್ಕನಿಗೂ ಹೀಗೇ ಮಾತಾಡುತ್ತಿದ್ದೆಯಾ? ಹೆಣ್ಣುಮಕ್ಕಳೆಲ್ಲಾ ನಿನಗೆ ಸೂಳೇರ ಥರ ಕಾಣ್ತಾರಾ? ಯಾಕೆ; ನಿನಗೆ ಅಕ್ಕಾ, ತಂಗಿ, ತಾಯಿ ಯಾರೂ ಇಲ್ವಾ? ಅಷ್ಟಕ್ಕೂ ನೀನು ಹೇಳಿದೆ



ಛೇಂಬರ್‌ನ ಮಂದಿ ಶ್ರೀವತ್ಸನಿಂದ ಶೆಣೈರಿಗೆ ಕ್ಷಮೆ ಕೇಳಿಸಿದ್ದು

ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಸಿಡುಕುಮೂತಿ ವೀರೇಶ ನಾಪತ್ತೆ?



ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಹೆಗಲೇರಿದ್ದ ಶನಿಮಹಾತ್ಮ ಎಲ್.ಸಿ. ವೀರೇಶ್ ಎಂಬ ಕೆಎಎಸ್ ಅಧಿಕಾರಿ ನಾಪತ್ತೆಯಾಗಿದ್ದಾನೆ. ತನಗೆ ಹುಷಾರಿಲ್ಲವೆಂಬ ನೆಪವೊಡ್ಡಿ ದೀರ್ಘರಜೆ ಹಾಕಿದ್ದಾನಾದರೂ ವೀರೇಶ ಕಚೇರಿ ಕಡೆಗೆ ತಲೆ ಹಾಕದಿರಲು ಆತ ಉಪಕಾರ್ಯದರ್ಶಿ (ಅಭಿವೃದ್ಧಿ)ಯಾಗಿದ್ದ ಅವಧಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಈಗ ಪುಕಾರುಗಳೇಳುತ್ತಿರುವುದೇ ನಾಪತ್ತೆಗೆ ಕಾರಣ ಎನ್ನಲಾಗಿದೆ.

ಆಕಸ್ಮಾತ್ ವೀರೇಶನಿಗೇನಾದರೂ ಆರೋಗ್ಯ ಕೆಟ್ಟಿರುವುದೇ ನಿಜವಾಗಿದ್ದರೆ ಅದು ಅಜೀರ್ಣ ರೋಗವೇ ಇರಬೇಕು, ಏಕೆಂದರೆ ಗ್ರಾಮ ಪಂಚಾಯಿತಿ ಲೆವೆಲ್‌ನಿಂದ ಹಿಡಿದು ನೀರು, ರಸ್ತೆ, ರೋಜ್‌ಗಾರ್, ಶಿಕ್ಷಣ.... ಹೀಗೆ ಎಲ್ಲದರಲ್ಲೂ ಅಷ್ಟೊಂದು ಲಂಚದ ಅಮೇದ್ಯವನ್ನು ಬಾಚಿ ಬಾಚಿ ತಿಂದಿದ್ದಾನೆ ಈ ಮಹಾನುಭಾವ.

ಚುನಾಯಿತ ಜಿಲ್ಲಾ ಪಂಚಾಯಿತಿ ಮೆಂಬರ್‌ಗಳನ್ನೇ ದಾರಿ ತಪ್ಪಿಸುತ್ತಾ, ಕೇಳುವ ಯಾವ ಮಾಹಿತಿಯನ್ನೂ ಕೊಡದೆ ಡಿಡಿಪಿಐ ಹಾಗೂ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳ ಜೊತೆ ಶಾಮೀಲಾಗಿ ಲಕ್ಷಾಂತರ ರೂಪಾಯಿ ಲೂಟಿ ಹೊಡೆದಿರುವ ವೀರೇಶನಿಗೆ ಗ್ರಹಚಾರ ಬಿಡಿಸಿ, ಚಳಿ ಜ್ವರ ಬರಿಸಿದ್ದೇ ಈಗಿನ ಹೊಸ ಸಿಇಓ ಸತ್ಯಮೂರ್ತಿ.


ಇತ್ತೀಚೆಗೆ ತಾನೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಸಿಇಓ ಆಗಿ ಬಂದಿರುವ ಸತ್ಯಮೂರ್ತಿ ಅಲ್ಲಿಗೆ ಕಾಲಿಡುವ ಮೊದಲೇ ಸರ್ಕಾರಿ ಹಣ ನುಂಗುತ್ತಿರುವ ಹೆಗ್ಗಣಗಳು ಯಾರ್‍ಯಾರೆಂಬ ಮಾಹಿತಿ ತಿಳಿದುಕೊಂಡಿದ್ದರು. ಅವರ ಪಟ್ಟಿಯಲ್ಲಿದ್ದ ಮೊದಲ ಹೆಸರೇ ವೀರೇಶನೆಂಬ ಹೆಗ್ಗಣ. ಖಡಕ್ ಐಎಎಸ್ ಆಫೀಸರ್ ಎಂದೇ ಹೆಸರಾಗಿರುವ ಸತ್ಯಮೂರ್ತಿ ಬಂದು ಸಿಇಓ ಚಾರ್ಜ್ ತೆಗೆದುಕೊಂಡಾಗ ಉಪಕಾರ್ಯದರ್ಶಿ ವೀರೇಶ್ ಅವರ ದಾರಿ ತಪ್ಪಿಸಿ ತನ್ನ ಕೈಗೊಂಬೆ ಮಾಡಿಕೊಳ್ಳಲು ಹವಣಿಸಿದ್ದ. ಆದರೆ ಸತ್ಯಮೂರ್ತಿ ತಿರುಗೇಟು ಕೊಟ್ಟುಬಿಟ್ಟರು. ಓಪನ್ ಮೀಟಿಂಗ್‌ಗಳಲ್ಲೇ ವೀರೇಶನ ಅವ್ಯವಹಾರಗಳ ಬಗ್ಗೆ ಕಾಮೆಂಟ್ ಮಾಡತೊಡಗಿದರು. ಪುಕ್ಕಲ ವೀರೇಶ ಇನ್ನೆಲ್ಲಿ ಸಿಕ್ಕಿಬೀಳುತ್ತೇನೋ ಎಂದು ಹೆದರಿ ಈಗ ಮೆಡಿಕಲ್ ಲೀವ್ ಹಾಕಿ ಬೇರೆ ಜಾಗ ಹುಡುಕುತ್ತಿದ್ದಾನೆ.

ವಸೂಲಿ ವೀರ ವೀರೇಶನ ವರಸೆಗಳು

ಲಂಚ ಹಾಗೂ ಜಾತಿ ಬಳಸಿ 1992ರಲ್ಲಿ ಕೆಎಎಸ್ ಪ್ಯಾಸು ಮಾಡಿಕೊಂಡ ವೀರೇಶ ಕೆಲಕಾಲ ದೇವನಹಳ್ಳಿಯಲ್ಲಿ ಬಿಡಿಓ ಆಗಿದ್ದ. ಅಲ್ಲಿ ಯಥಾಶಕ್ತಿ ನುಂಗಿ ಎಲ್ಲೆಲ್ಲೋ ಅಂಡಲೆದು ಕೊನೆಗೆ ಗ್ರಾಮೀಣಾಭಿವೃದ್ಧಿ ಇಲಾಖೆಯ ಸೆಕ್ರೆಟರಿಯೆಟ್‌ನಲ್ಲಿ ಗೋಬರ್ ಗ್ಯಾಸ್ ವಿಭಾಗದ ನಿರ್ದೇಶಕನಾಗಿದ್ದ. ಪರ್ಸೆಂಟೇಜ್ ಕೀಳುವುದರಲ್ಲಿ ನಿಸ್ಸೀಮನಾಗಿದ್ದ ವೀರೇಶ್ ಈ ಯೋಜನೆಯ ಅನುಷ್ಠಾನಕ್ಕೆ ಮಾತ್ರ ನಿರಂತರವಾಗಿ ಅಡ್ಡಗಾಲಾಕುತ್ತಾ ಬಂದಿದ್ದ. ಟರ್ನ್ ಕೀ ಏಜನ್ಸಿಗಳಿಗೆ ಕಿರುಕುಳ ನೀಡುತ್ತಾ ಗೋಳು ಹೊಯ್ದುಕೊಂಡು ಕೊನೆಗೆ ಯಾವ ಕೆಲಸವೂ ಆಗದೆ ಈಗ ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುದಾನವೇ ಬರದಂತಾಗಿದೆ. ವೀರೇಶನ ಅದಕ್ಷತೆಯ ಪರಿಣಾಮ ಇದು. ನಂತರ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಪ್ರಾಮಾಣಿಕ, ನಿಷ್ಠುರ ವಿ.ಪಿ. ಬಳಿಗಾರ್ ಕಾರ್ಯದರ್ಶಿಯಾಗಿ ಬಂದಾಗ ಈ ಪರ್ಸೆಂಟೇಜ್ ಪ್ರವೀಣ ವೀರೇಶ ಹೆದರಿಕೊಂಡು ಜಾಗ ಖಾಲಿ ಮಾಡಿದ್ದ. ರಾಮನಗರದವನಾದ ವೀರೇಶ ಆಗ ತಾನೇ ಎಂಎಲ್‌ಎ ಆಗಿದ್ದ ಎಚ್.ಡಿ. ಕುಮಾರಸ್ವಾಮಿಯವರ ಕಾಲಿಗೆ ಬಿದ್ದು 2004 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಗೆ ಉಪಕಾರ್ಯದರ್ಶಿಯಾಗಿ ಕಾಲಿಟ್ಟ. ಹಾಗೆ

ಕೋಟಿ ರಾಮು ರುಬ್ಬಿ ಕಳಿಸಿದ್ದು

ಐದು ವರ್ಷದ ಹಿಂದಷ್ಟೇ ಕಪಾಲಿಗಲ್ಲಿಯ ಫುಟ್‌ಪಾತಿನಲ್ಲಿ ನಿಂತು ಬಟ್ಟ 'ಎಗ್‌ರೈಸ್' ಮುಕ್ಕುತ್ತಿದ್ದ ರವಿಶ್ರೀವತ್ಸ ಆಲಿಯಾಸ್ ಸ್ತ್ರೀವಸ್ತ್ರ(!) ಗಾಂಧಿನಗರಕ್ಕೆ ಕಾಲಿಟ್ಟದ್ದೇ 'ಅಮ್ಮನ್ ಅಕ್ಕನ್' ಶೈಲಿಯ ಡೈಲಾಗಿಗಾಗಿ. ಪ್ರಾರಂಭದಲ್ಲಿ ನಾಗಣ್ಣ, ಓಂಪ್ರಕಾಶ್ ರಾವ್ ಥರದವರು ಡೈಲಾಗ್ ಬರೆಸುತ್ತಿದ್ದರು. ಯಾವತ್ತು ರಾಮು ಜೊತೆ ಬಿದ್ದನೋ ಶ್ರೀವತ್ಸನ ಗೆಟಪ್ಪೇ ಬದಲಾಯಿತು. ಸುದೀಪ್ ಅಭಿನಯದ ಕಿಚ್ಚ, ಚಂದು, ಸೈ ಮುಂತಾದ ಚಿತ್ರಗಳಿಗೆ ಅಮ್ಮನ್ ಅಕ್ಕನ್ ಡೈಲಾಗ್ ಬರೆದನಾದರೂ ಅವ್ಯಾವುದಕ್ಕೂ ಹಾಕಿದ ಬಂಡವಾಳ ಹುಟ್ಟಲಿಲ್ಲ. ಶ್ರೀವತ್ಸ ಇದ್ದಕ್ಕಿದ್ದಂತೆ ಡಾನ್ ಮುತ್ತಪ್ಪ ರೈ ಬೆನ್ನಿಗೆ ಬಿದ್ದ. ರೈ ಜೀವನಚರಿತ್ರೆಯನ್ನಾಧರಿಸಿ ಸಿನಿಮಾ ಮಾಡಲು ಹೇಗೋ ಪಿ. ಧನರಾಜ್ ಎಂಬ ತಗಡು ಪ್ರೊಡ್ಯೂಸರ್‌ನನ್ನು ಒಪ್ಪಿಸಿದ್ದ. ಅದಕ್ಕೆ ಆರ್.ವಿ. ದೇವರಾಜ್ ಫೈನಾನ್ಸ್ ಮಾಡುತ್ತಾರೆಂದೇ ನಂಬಿಸಿದ್ದ. ನಿರ್ದೇಶನಕ್ಕೆಂದು ಓಂಪ್ರಕಾಶ್ ರಾವ್‌ರನ್ನು ಒಪ್ಪಿಸಿದ್ದ.



ತಮಾಷೆಯೆಂದರೆ ಚಿತ್ರದ ಹೆಸರು ಕೇಳಿದ್ದೇ ಆರ್.ವಿ. ದೇವರಾಜ್ ಕೈ ಎತ್ತಿಬಿಟ್ಟ. ತನ್ನದೇ ಹೆಸರಿನ ಚಿತ್ರವಾದ್ದರಿಂದ ಅದಕ್ಕೆ ರೈ ಫೈನಾನ್ಸ್ ಮಾಡಬಹುದೆಂಬ ಧನರಾಜ್‌ನ ನಿರೀಕ್ಷೆ ಕೂಡ ಹುಸಿಯಾಗಿತ್ತು. 'ನನ್ನದೇ ಹೆಸರಲ್ಲಿ ನಾನೇ ದುಡ್ಡು ಹಾಕಿ ಸಿನಿಮಾ ಮಾಡೋಕೆ ನನಗೇನು ಹುಚ್ಚಾ' ಎಂದು ರೈ ಉಗಿದಟ್ಟಿದ್ದ. ಅಲ್ಲಿಗೆ 'ರೈ' ಮಕಾಡೆ ಬಿತ್ತು. ನಿತ್ಯ ತಮ್ಮ ಮನೆ ಬಾಗಿಲು ಕಾಯುತ್ತಿದ್ದ ಶ್ರೀವತ್ಸನನ್ನು ರಾಮು ಮತ್ತು ಮಾಲಾಶ್ರೀ ಪ್ರೀತಿಯಿಂದಲೇ ನೋಡಿಕೊಂಡಿದ್ದರು. ಆದರೆ ಇವನು ಎಂಥಾ ಹರಾಮಿಯೆಂದರೆ ಪತ್ರಿಕೆಯೊಂದರಲ್ಲಿ 'ಕೋಟಿ ರಾಮು ನಾಪತ್ತೆ' ಎಂಬರ್ಥದ ಕಪೋಲ ಕಲ್ಪಿತ ವರದಿ ಬರೆಸಿಬಿಟ್ಟ. ಜೊತೆಗಿದ್ದೇ ಬೆನ್ನಿಗಿರಿದ ಶ್ರೀವತ್ಸನನ್ನು ಆವತ್ತು ರಾಮು ಮ್ಯಾನೇಜರ್ ಶಿವಾರ್ಜುನ್ ಗಾಂಧಿನಗರದಿಂದ ಎಳೆದೊಯ್ದು ಎರಡು ಗಂಟೆ ಕಾಲ ಕೂಡಿಟ್ಟು ಸಮಾ ರುಬ್ಬಿ ಕಳಿಸಿದ್ದ. ಒದೆ ತಿಂದು ಮಲ್ಲಿಗೆ ನರ್ಸಿಂಗ್ ಹೋಮಿನಲ್ಲಿ ಮಲಗಿದ್ದ ಶ್ರೀವತ್ಸ ಕ್ರಮೇಣ 'ಕ್ರೈಂ ಡೈರಿ' ಸೇರಿಕೊಂಡು ಸುಧಾರಿಸಿಕೊಂಡವನು ಗಾಂಧಿನಗರಕ್ಕೆ ಕಾಲಿಟ್ಟದ್ದು 'ಡೆಡ್ಲಿ ಸೋಮು'ದ ಡೈರೆಕ್ಟರ್ ಆಗಿ.

ಡೆಡ್ಲಿ ಸೋಮು ದುಡ್ಡು ಮಾಡಿದ್ದು ಅದರ ಕತೆಯಿಂದಾಗಿಯೇ ಹೊರತು ಶ್ರೀವತ್ಸನ ಪ್ರತಿಭೆಯೇನೂ ಇರಲಿಲ್ಲ. ಹಾಗಿದ್ದೂ ಜಾಕ್ ಮಂಜು ಜೊತೆ ಸೇರಿ ದುಡ್ಡು ಹಾಕಿದ್ದ ಲ್ಯಾಂಡ್ ಡೀಲರ್ ಸ್ವರೂಪ್‌ಕುಮಾರ್ ಮತ್ತು ಕಂಟ್ರಾಕ್ಟರ್ ರಾಜಣ್ಣನಿಗೆ ಟೋಪಿ ಹಾಕಿದ. ಅದೇ ಹೊತ್ತಿಗೆ ಹಿಂದಿಯ 'ಮರ್ಡರ್' ಚಿತ್ರದ ರೀಮೇಕ್ ರೈಟ್ಸ್ ಹಿಡಕೊಂಡು ನಾಮಕಾವಸ್ತೆಯ ಡೈರೆಕ್ಟರ್ ಒಬ್ಬನಿಗಾಗಿ ಶೈಲೇಂದ್ರಬಾಬು ಹುಡುಕಾಟ ನಡೆಸಿದ್ದ. 'ಹಿಟ್ಟು ಹಳಸಿತ್ತು ನಾಯಿಯೂ ಹಸಿದಿತ್ತು' ಮರ್ಡರ್‌ಗೆ 'ಗಂಡಹೆಂಡತಿ' ಎಂಬ ಹೆಸರಿಟ್ಟು ಸಂಜನಾ ಎಂಬ ಅಪ್ಪಟ ಸಿಂಧಿ ತಳಿಯ ಮಾಡೆಲ್ ಒಬ್ಬಳನ್ನು ಬ್ಯಾಂಕಾಂಕ್‌ಗೆ ಕರೆದೊಯ್ದು ಈ ಶ್ರೀವತ್ಸ ಚಿತ್ರೀಕರಿಸಿದ್ದು ಪಕ್ಕಾ ಬ್ಲೂಫಿಲ್ಮ್. ಅದು ದೆಹಲಿಯ ಸೆನ್ಸಾರ್ ಬೋರ್ಡಿಗೆ ಹೋದರೂ ಮುಕ್ತಿ ಸಿಗದೇ ಕೊನೆಗೆ ಸಾಕಷ್ಟು ಸೆಕ್ಸ್ ದೃಶ್ಯಗಳನ್ನು ಕತ್ತರಿಸಿಯೇ 'A' ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಶ್ರೀವತ್ಸನ ಪಾಲಿಗೆ 'A' ಸರ್ಟಿಫಿಕೇಟ್ ಸಿಕ್ಕಿದ್ದೂ ಹೆಮ್ಮೆಯಂತೆ!

ಮೈತುಂಬ ಮಾಂಸ ತಲೆತುಂಬ ಮಣ್ಣು!

ಬ್ಯಾಂಕಾಂಕ್‌ನಲ್ಲಿ ಗಂಡಹೆಂಡತಿ ಶೂಟಿಂಗ್ ನಡೆಯುತ್ತಿತ್ತು. ಸಂಜನಾಳನ್ನು ಯರ್‍ರಾಬರ್‍ರಿ ಬೆತ್ತಲೆ ಮಾಡಿಸಿ ಅದನ್ನು ಹಸಿಹಸಿಯಾಗಿ ಶೂಟ್ ಮಾಡುವಂತೆ ಶ್ರೀವತ್ಸ ಕ್ಯಾಮರಾಮನ್ ವೇಣು ತಲೆ ತಿನ್ನುತ್ತಿದ್ದ. ವೇಣು ಮಾನವಂತ. ಇದೇನು ಫಿಲ್ಮಾ ಬ್ಲೂಫಿಲ್ಮಾ? ಎಂದು ಕೇಳಿಬಿಟ್ಟ. ಅಷ್ಟಕ್ಕೇ ಶ್ರೀವತ್ಸ ವೇಣುವನ್ನು ಅರ್ಧಕ್ಕೇ ಕೈಬಿಟ್ಟು ಮ್ಯಾಥ್ಯೂ ರಾಜನ್ ಎಂಬ ಹೊಸ ಕ್ಯಾಮರಾಮನ್‌ನನ್ನು ತಂದ. ವೇಣು ಈ ಬಗ್ಗೆ ಫಿಲ್ಮ್ ಛೇಂಬರಿಗೆ ದೂರು ಕೊಟ್ಟರೂ ಪ್ರಯೋಜನವಾಗಲಿಲ್ಲ.


ಚಿತ್ರಾ ಶೆಣೈ

ಕನಿಷ್ಠ ಸೆನ್ಸಾರ್ ಮಾಡಿಸಿಯೇ ಪತ್ರಕರ್ತರಿಗೆ ತೋರಿಸಬೇಕೆಂಬ ಕಾಮನ್‌ಸೆನ್ಸ್ ಶ್ರೀವತ್ಸನಿಗಿರಲಿಲ್ಲ. ಗಂಡಹೆಂಡತಿಯ ಪ್ರೀವ್ಯೂ ನೋಡಿದ ಅನೇಕ ಪತ್ರಕರ್ತರು ಅದೊಂದು ಬ್ಲೂಫಿಲ್ಮ್ ಎಂಬರ್ಥದಲ್ಲಿ ಬರೆದರು. ಅಷ್ಟಕ್ಕೇ once again ಶ್ರೀವತ್ಸ 'ಲಂಕೇಶ್' ವರದಿಗಾರ ಸದಾಶಿವ ಶೆಣೈಗೆ ಕೊಲೆ ಬೆದರಿಕೆ ಹಾಕಿದ. ಈ ಬಗ್ಗೆ ಶೆಣೈ ಪೊಲೀಸರಿಗೆ ದೂರು ಕೊಟ್ಟರೆ ಶ್ರೀವತ್ಸ ಛೇಂಬರಿಗೆ ಬಂದು ಕೈಕಾಲು ಹಿಡಕೊಂಡ.

ಇದು ಶ್ರೀವತ್ಸನ ಕಂತ್ರಿಬುದ್ಧಿ. ಹಿಂದೆ ಓಂಪ್ರಕಾಶ್ ರಾವ್ ನಿರ್ದೇಶನದ 'ಪ್ರೀತಿ ಮಾಡಬಾರದು' ಚಿತ್ರದ ಶೂಟಿಂಗ್ ವೇಳೆ ನಟಿ ಚಿತ್ರಾ ಶೆಣೈಯನ್ನು ಹೋಟೆಲ್ ಕೋಣೆಗೆ ಎಳೆದೊಯ್ದಿದ್ದ. ಆ ನಂತರ ಡೆಡ್ಲಿ ಸೋಮಕ್ಕೆಂದು ಚನ್ನೇಗೌಡರ ಮನೆಗೆ ಮುರಳಿಯ ಕಾಲ್‌ಶೀಟ್ ಕೇಳಲು ಹೋಗಿ ವಿಜಯರಾಘವೇಂದ್ರನ ಬಗ್ಗೆ ಕೆಟ್ಟದಾಗಿ ಮಾತಾಡಿ ಮತ್ತೆ ರಂಪ ಮಾಡಿಕೊಂಡ. ಹಾಳಾಗಲಿ, ಚೂರುಪಾರು ಪ್ರತಿಭೆಯೇನಾದರೂ ಈತನಲ್ಲಿದೆಯೇ ಅಂತ ತಡಕಾಡಿದರೆ ಮೈತುಂಬ ಕೊಲೆಸ್ಟರಾಲ್ ತುಂಬಿಕೊಂಡಂತೆ ಮೆದುಳಿನ ತುಂಬ ಮಣ್ಣು! ತೆಲುಗು-ತಮಿಳಿನ ಡೈಲಾಗುಗಳನ್ನು ಮಕ್ಕಿಕಾಮಕ್ಕಿ ಕಾಪಿ ಹೊಡೆಯುತ್ತಾನೆ. ಅದು ಬಿಟ್ಟರೆ ಗೊತ್ತಿರುವುದು ಬರೀ ಅಮ್ಮನ್ ಅಕ್ಕನ್!

ಬಂದವನೇ ಇಡೀ ಸಿಬ್ಬಂದಿಯನ್ನೇ ಥರಗುಟ್ಟಿಸಿಬಿಟ್ಟಿದ್ದ. ಎಲ್ಲರೂ ಬೆಳಗ್ಗೆ 10 ಗಂಟೆಗೇ ಆಫೀಸಿಗೆ ಬರಬೇಕು, ಕಾಫಿ-ಟೀಗೂ ಹೊರಗೆ ಹೋಗಕೂಡದು, ನೌಕರರು ತಮ್ಮ ತಮ್ಮಲ್ಲೇ ಮಾತಾಡಲೂಬಾರದು, ರಜಾ ಕೇಳಬಾರದು.... ಹೀಗೆ ವೀರೇಶನ ಹುಚ್ಚು ಆಡಳಿತ ಶುರುವಾಗಿತ್ತು.

ಆದರೆ ಹೊರನೋಟಕ್ಕೆ ಹೀಗೆ ಬಹಳ ಸ್ಟ್ರಿಕ್ಟ್ ಆಫೀಸರ್‌ನಂತೆ ಪೋಜ್ ಕೊಡುತ್ತಿದ್ದ ವೀರೇಶ್ ಆಗಿನ ಸಿಇಓ ರಂಗಸ್ವಾಮಿಯವರನ್ನೇ ಮರುಳು ಮಾಡಿ ತನ್ನ ಹಳೇ ಚಾಳಿ ಪ್ರಾರಂಭಿಸಿದ್ದ.

ಗ್ರಾಮ ಪಂಚಾಯಿತಿ ಸೆಕ್ರೆಟರಿಗಳ ವರ್ಗಕ್ಕೆ, ರಿಲೀವ್‌ಗೆ, ಡ್ಯೂಟಿ ರಿಪೋರ್ಟ್‌ಗಳಿಗೆಲ್ಲಾ ಇಂತಿಷ್ಟು ದುಡ್ಡು, ಎಸ್‌ಜಿಆರ್‌ವೈ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಇಷ್ಟು ಲಂಚ ಎಂದು ವಸೂಲಿ ಮಾಡುತ್ತಿದ್ದ.

ಬ್ರೋಕರ್‌ಗಳಿಲ್ಲದೆ ನೇರವಾಗಿ ವ್ಯವಹರಿಸುವುದೇ ಇವನ ಸ್ಪೆಷಾಲಿಟಿಯಾಗಿತ್ತು. ಇವನೆಂಥಾ ದುರಾಶೆಯವನೆಂದರೆ ಜಲಾನಯನ ಇಲಾಖೆಯವರು ಯೋಜನೆಯೊಂದಕ್ಕೆ ಅನುಮೋದನೆ ಕೋರಿ ಬಂದಿದ್ದಾಗ ವೀರೇಶ ಹಣ ಕೇಳಿದ್ದ, ಅವರು ಇಲ್ಲವೆಂದಾಗ 'ಹೋಗಲಿ ಒಂದು ರೇಷ್ಮೆ ಸೀರೆಯಾದರೂ ತಂದುಕೊಡಿ' ಎಂದು ಬಿಡದೆ ವಸೂಲಿ ಮಾಡಿಕೊಂಡಿದ್ದ. ಪ್ರತಿ ವರ್ಷ ಮಾರ್ಚ್ ಬಂತೆಂದರೆ ಪ್ರತಿ ತಾಲ್ಲೂಕಿನ ಇಓ ಕಚೇರಿಗಳಿಗೂ ಭಿಕ್ಷುಕನಂತೆ ಹೋಗಿ ಪರ್ಸೆಂಟೇಜ್ ಕಿತ್ತುಕೊಂಡು ಬರುವ ಚಾಳಿ ಇತ್ತು ವೀರೇಶನಿಗೆ. 'ನಾನು ಇಂತಿಂತಾ ಸ್ಕೀಮಿಗೆ ಇಷ್ಟು ಲಕ್ಷ ದುಡ್ಡು ರಿಲೀಸ್ ಮಾಡಿದ್ದೀನಿ. ಈಗ ನನಗೆ ಇಷ್ಟು ಪರ್ಸೆಂಟ್ ಕೊಡು' ಎಂದು ಲಂಚದ ಕಾಸು ಪೀಕುತ್ತಿದ್ದ. ಅವರಪ್ಪನ ಮನೆಯಿಂದ ಅನುದಾನ ತಂದು ಕೊಟ್ಟಂತಿರುತ್ತಿದ್ದವು ವೀರೇಶನ ವರಸೆಗಳು.

ಈಗಿನ ಹೊಸ ಸಿಇಓ ಸತ್ಯಮೂರ್ತಿ ಸ್ವಭಾವದಲ್ಲಿ ಅತೀ ಸರಳ ಹಾಗೂ ದಕ್ಷ ಅಧಿಕಾರಿ ಎನಿಸಿಕೊಂಡಿದ್ದಾರೆ. ಭ್ರಷ್ಟ ವೀರೇಶನಿಗೆ ಲಾತ ಕೊಟ್ಟಿದ್ದಾರೆ. ಆದರೆ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ಸರ್ಕಾರಿ ಅನುದಾನ ಹಾಗೂ ಸಾರ್ವಜನಿಕ ವಂತಿಕೆಯು ಸಂಗ್ರಹವಾಗಿರುವ ಲಕ್ಷಾಂತರ ರೂಪಾಯಿಗಳನ್ನು ವೀರೇಶ ಹಾಗೂ ಡಿಡಿಪಿಐ ಸೇರಿ ನುಂಗಿ ಹಾಕಿದ್ದಾರೆಂಬ ಗುಮಾನಿ ಇದೆ.

ಜಿಲ್ಲಾ ಪಂಚಾಯಿತಿ ಮುಖಂಡರೂ ಹಾಗೂ ಸತ್ಯಮೂರ್ತಿಯವರು ವೀರೇಶನ ಈ ಅವ್ಯವಹಾರಗಳ ಬಗ್ಗೆ ಸಮಗ್ರ ತನಿಖೆ ಮಾಡಿಸುವ ಅಗತ್ಯವಿದೆ.

-ಈಶ

ಮಂಗಳೂರು :

ಬಿಲ್ಡರ್ ಮಾಫಿಯಾ ಕಾನೂನೆಲ್ಲಾ ಕಸದ ತೊಟ್ಟಿಗೆ!



ಮಂಗಳೂರಿನ ಬಿಲ್ಡರ್‌ಗಳ 'ಶಕ್ತಿ' ಯೇ ಅಂಥಾದ್ದ? National Building Codes (ರಾಷ್ಟ್ರೀಯ ಕಟ್ಟಡ ನಿಯಮಗಳು) ಉಲ್ಲಂಘಿಸಿಯೂ ಅವರು ಗಗನಚುಂಬಿ ಕಟ್ಟಡಗಳನ್ನು ನಿರ್ಮಿಸಲು ಲೈಸೆನ್ಸು ಪಡೆದುಕೊಳ್ಳುತ್ತಾರೆ.

ಮೊನ್ನೆ ಶುಕ್ರವಾರ (21-07-06) ದಂದು ಮುಖ್ಯ ಕಾರ್ಯದರ್ಶಿ ಬಿ.ಕೆ.ದಾಸ್ ನೇತೃತ್ವದಲ್ಲಿ ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ನಡೆದ ಸಭೆ ಮಂಗಳೂರಿನ ಬಿಲ್ಡರುಗಳ ಮನದಿಚ್ಛೆಯಂತೆ ಬಿಲ್ಡರ್ಸ್ ಪರ ಆದೇಶವೊಂದಕ್ಕೆ ಸಹಿ ಹಾಕಿದೆ.



ಅಲ್ಲಿಗೆ ಸುಮಾರು 2-3 ವರ್ಷಗಳಿಂದ ಮಂಗಳೂರಿನ ನಾಗರಿಕರು ನಡೆಸುತ್ತಾ ಬಂದಿರುವ 'ಮಂಗಳೂರು ರಕ್ಷಿಸಿ' ಹೋರಾಟಕ್ಕೆ ಹಿನ್ನೆಡೆಯುಂಟು ಮಾಡುವ ಬಿಲ್ಡರ್ಸ್ ಅಜೆಂಡಾಕ್ಕೆ ಒಂದಿಷ್ಟು ಗೆಲವು ಸಿಕ್ಕಂತಾಗಿದೆ. ನ್ಯಾಷನಲ್ ಬಿಲ್ಡಿಂಗ್ ಕೋಡ್, ಮಂಗಳೂರು ಅಭಿವೃದ್ಧಿ ಪ್ರಾಧಿಕಾರ (ಮುಡಾ)ದ Zoning ನಿಯಮಗಳು, ಮಂಗಳೂರು ಪಾಲಿಕೆ ಉಪನಿಯಮಗಳು ಇವೆಲ್ಲ ಸೋಮವಾರ (24-07-06) ದಿಂದ ಮತ್ತೆ ಪಾಲಿಕೆಯ ಕಸದ ತೊಟ್ಟಿ ಸೇರಲಿವೆ.

ಪೆಂಡಿಂಗ್‌ನಲ್ಲಿರುವ ನೂರಾರು ಲೈಸೆನ್ಸುಗಳಿಗೆ ಈ ಸೋಮವಾರವೇ ಮುಕ್ತಿ ಸಿಕ್ಕು ಮಂಗಳೂರಿನ ಖತರ್‌ನಾಕ್ ಬಿಲ್ಡರ್‌ಗಳು ನಿಯಮಗಳನ್ನೆಲ್ಲ ಗಗನಕ್ಕೆ ತೂರಿ 15-16 ಮಹಡಿಗಳ ಗಗನಚುಂಬಿ ಕಟ್ಟಡಗಳನ್ನು ಎಬ್ಬಿಸಲು ಶುರು ಮಾಡಲಿದ್ದಾರೆ. ಅಲ್ಲಿಗೆ ಮಂಗಳೂರಿನ ಮಧ್ಯಭಾಗದ 3 ಕಿ.ಮೀ. ಸುತ್ತಳತೆ ವ್ಯಾಪ್ತಿಯ ಪ್ರದೇಶ ಗಿಜಿಗುಟ್ಟಿ ಹೋಗಿ ಈಗಿರುವ ಚೋಟುಗಲದ ರಸ್ತೆಗಳು ಇನ್ನೂ ಕಿರಿದಾಗಿ ಹೋಗಲಿವೆ. ಅಪಾಯದ ಭೂಕಂಪ ವಲಯ -3 ರಲ್ಲಿ ಬರುವ ಮಂಗಳೂರು, ಭೂಕಂಪಕ್ಕೆ ತುತ್ತಾಗಬಲ್ಲ ದೇಶದ 38 ನಗರಗಳ ಪಟ್ಟಿಯಲ್ಲಿದೆ. ಈ ತಿಂಗಳು 13ರಂದು ಬೆಂಗಳೂರಿನಲ್ಲಿ ನಡೆದ ನರಾಭಿವೃದ್ಧಿ ಇಲಾಖೆಯ ಅಧಿಕಾರಿಗಳ ಸಭೆ ಬಿಲ್ಡರ್‌ಗಳಿಗೆ ಅನುಕೂಲವಾಗುವಂತೆ ನಿರ್ಣಯ ಕೈಗೊಂಡಿದೆ. ಇದರ ಹಿಂದೆ ನಗರಾಭಿವೃದ್ಧಿ ಇಲಾಖೆಯ ಸೆಕ್ರೆಟರಿ ಸುಭಾಷ್ ಚಂದ್ರರ ಕೈ ಚಳಕವಿದೆ. ಈ ಮನುಷ್ಯ ಹೇಳಿ ಕೇಳಿ ಮಂಗಳೂರು ಬಿಲ್ಡರ್‌ಗಳಿಗೆ ದೈವೀಪುರುಷನಿದ್ದಂತೆ.

ಮಂಗಳೂರಿನ ಸಿಟಿಜನ್ ಫೋರಮ್ "ಗಗನ ಚುಂಬಿ ಕಟ್ಟಡ ನಿರ್ಮಾಣ ಮಾಡುವ ಮುನ್ನ NBC, MUDA ಪಾಲಿಕೆಗಳ ಎಲ್ಲಾ ನಿಯಮಗಳನ್ನು ಪಾಲಿಸಿಯೇ ಪರ್ಮಿಟ್ ನೀಡಬೇಕು. ಅಗ್ನಿಶಾಮಕ ಇಲಾಖೆಯ ಪರವಾನಗಿ ಇಲ್ಲದೇ ಲೈಸೆನ್ಸ್ ನೀಡಬಾರದು" ಎಂದು ವಾದಿಸಿ ಕೋರ್ಟ್ ಮೆಟ್ಟಿಲು (ಪೆಟಿಷನ್ ನಂ: 2950/2006) ಹತ್ತಿರುವುದು ಗೊತ್ತಿದ್ದೂ ಸುಭಾಷ್‌ಚಂದ್ರರ ಗ್ಯಾಂಗ್ ಈಗ ಪೆಂಡಿಂಗ್‌ನಲ್ಲಿರುವ ಬಿಲ್ಡರ್ಸ್ ಅರ್ಜಿಗಳಿಗೆ " one time concession" (ಒಂದು ಬಾರಿಯ ರಿಯಾಯಿತಿ) ಕೊಡಲು ನಿರ್ಧರಿಸುತ್ತದೆ. ಹಾಗೆಯೇ "ಅಗ್ನಿಶಾಮಕ ಇಲಾಖೆಯವರೂ ಇದಕ್ಕೆ ಒಪ್ಪಿದ್ದಾರೆ" ಎಂದು ರಾಜ್ಯ ಸರ್ಕಾರವನ್ನು ದಿಕ್ಕು ತಪ್ಪಿಸುತ್ತದೆ. ಅಷ್ಟೊತ್ತಿಗೆ ಮಂಗಳೂರಿನ ಬಿಲ್ಡರ್ ಮಾಫಿಯಾಕ್ಕೆ ಇದ್ದ ಎಲ್ಲ ಅಡೆತಡೆಗಳು ನಿವಾರಣೆಯಾದಂತಾಯ್ತು. ಬೆಂಗಳೂರಿನಲ್ಲಿ 21ತಾರೀಖಿಗೆ ಆದೇಶಕ್ಕೆ ಸಹಿ ಬೀಳುತ್ತಿದ್ದಂತೆ ಇಲ್ಲಿ ಮಂಗಳೂರಿನ ಪಾಲಿಕೆ ಕಮಿಶನರ್ ಕೃಷ್ಣಪ್ಪ ಪೂಜಾರಿ ಎಂಬ ಬಿಲ್ಡರ್ಸ್‌ಗಳ ಕುನ್ನಿ ಫೋನ್ ಎತ್ತಿ ಕೊಳ್ಳುತ್ತದೆ. "ಸಾರ್ ಎಲ್ಲಾ ಓಕೆ ಆಯ್ತು. ಸೋಮವಾರ 24ನೇ ತಾರೀಖಿಗೆ ಬಿಲ್ಡಿಂಗ್ ಕೆಲಸ ಶುರು ಆಗ್ತಾವೆ ಬಿಡಿ. ನಾವು ಗೆದ್ದೇ ಬಿಟ್ವಿವು" ಎಂದು ಕೇಕೆ ಹಾಕುತ್ತಾನೆ. ಅತ್ತ ಕಡೆ ಫೋನ್ ರಿಸೀವ್ ಮಾಡಿದ್ದು ಯಾರು? ಮಂಗಳೂರಿನ ಬಿಲ್ಡರ್ಸ್ ಮಾಫಿಯಾ ಬಲ್ಲವರೆಲ್ಲರೂ ಹೇಳುವುದು ಅದು ಬಂದರು, ಮೀನುಗಾರಿಕೆ ಮಂತ್ರಿ ನಾಗರಾಜಶೆಟ್ಟಿಯೇ ಇರಬೇಕು, ಇಲ್ಲಾ ಚಿಡ್ಡಿ ಶಾಸಕ, ಸ್ವತಃ ಬಿಲ್ಡರ್ ಆಗಿರುವ ಕೃಷ್ಣ ಪಲೆಮಾರು ಇರಬೇಕು.

ಈಗ ಪಿಕ್ಚರ್ ಕ್ಲಿಯರ್ ಆಯ್ತೆ ಓದುಗರೆ? ಅಗ್ನಿಶಾಮಕ ಇಲಾಖೆಯ ಡೆಪ್ಯೂಟಿ ಡೈರೆಕ್ಟರ್ ಚೆಂಗಪ್ಪ "ನಮ್ಮ ಇಲಾಖೆಯ ಅನುಮತಿ ಇಲ್ಲದೇ ಕಟ್ಟಡ ನಿರ್ಮಾಣಕ್ಕೆ ಪಾಲಿಕೆ ಲೈಸೆನ್ಸ್ ಕೊಡುವಂತಿಲ್ಲ. ನಗರಾಭಿವೃದ್ಧಿ ಇಲಾಖೆ ಹೇಳುವಂತೆ ನಾವು ಒನ್ ಟೈಮ್ ರಿಯಾಯಿತಿಗೆ ಒಪ್ಪಿಯೇ ಇಲ್ಲ" ಎಂದು ಖಡಕ್ ಆಗಿ ಹೇಳುತ್ತಿರುವುದು ಚೀಫ್ ಸೆಕ್ರೆಟರಿ ದಾಸ್‌ಗೆ ಗೊತ್ತಿಲ್ಲವೆ? ಅವರು ಸುಭಾಷ್‌ಚಂದ್ರರ ಒತ್ತಡಗಳಿಗೆ ಶರಣಾದರೆ?

ಮಂಗಳೂರು ಬಿಲ್ಡರ್ಸ್ ಅಸೋಸಿಯೇಷನ್‌ನ ಪ್ರೆಸಿಡೆಂಟ್ ಧರ್ಮೇಂದ್ರ ಮೆಹ್ತಾ ಬಹಿರಂಗವಾಗಿಯೇ (C.Dಯಲ್ಲಿದೆ) ಹೇಳ್ತಾನೆ: "ಕಾನೂನಿನಲ್ಲಿ loop holes (ಲೋಪದೋಷ) ಇವೆ. ಅವನ್ನೆಲ್ಲ ನಾವು ಬಳಸಿಕೊಳ್ತೀವೆ". ಬಪ್ಪರೆ ಮಗನೆ! ಮಲ್ಲಿ ಎಂಬುವವನ ಅಭಿಮಾನ್ ಕನ್‌ಸ್ಟ್ರಕ್ಷನ್ಸ್, ಜನಾರ್ಧನ ಪೂಜಾರಿಯ ರೈಟ್‌ಹ್ಯಾಂಡ್ ರಮೇಶಕುಮಾರ್‌ನ ಜನತಾ ಕನ್‌ಸ್ಟ್ರಕ್ಷನ್ಸ್ , ಚಿಡ್ಡಿ ಶಾಸಕ ಕೃಷ್ಣ ಪಲೆಮಾರ್‌ನ ಲ್ಯಾಂಡ್ ಲಿಂಕ್ಸ್, ಹರ್ಷದ್‌ನ ಮೋತಿಶ್ಯಾಮ್ ಇಂತಹ ದೈತ್ಯರಿಗೆಲ್ಲ ಪೊಲಿಟಿಕಲ್ ಸಪೋರ್ಟು ಇರದೇ ಇರುತ್ತಾ?

ಒಮ್ಮೆ ಈ ಬಿಲ್ಡರ್ಸ್ ಪರ ನಿಂತು ವಿಧಾನಸೌಧದಲ್ಲಿಯೇ ಚೀಫ್ ಸೆಕ್ರೆಟರಿಯನ್ನು ಬಯ್ದಾಡಿದ್ದು ಮತ್ತಾರೂ ಅಲ್ಲ, ಜನಾರ್ಧನ ಪೂಜಾರಿ! ಈ ಎಲ್ಲ ಬಿಲ್ಡರ್ಸ್‌ಗಳಿಗೆ ಮೋತಿಶ್ಯಾಮ್ ಬಿಲ್ಡರ್ಸ್‌ನ ಧರ್ಮರಾಜ್ ಎನ್ನುವ ಆರ್ಕಿಟೆಕ್ಟ್ ಒಬ್ಬ ದಲ್ಲಾಳಿ ತರಹ ಕೆಲಸ ಮಾಡುತ್ತಾನೆ. ರಾಜಕಾರಣಿಗಳು, ಬೆಂಗಳೂರಿನ ಅಧಿಕಾರಿಗಳ ಲಿಂಕ್ ಕೊಡುವಾತನೇ ಈ ಧರ್ಮರಾಜ್! ಇಂತಹ ಭಂಡನನ್ನು ಮುಡಾ, ಪಾಲಿಕೆ, ಹೌಸಿಂಗ್ ಬೋರ್ಡ್‌ಗಳು ಸಲಹಾಗಾರನೆಂದು ನೇಮಕ ಮಾಡಿಕೊಳ್ಳುತ್ತವೆ. ಇದರರ್ಥವಿಷ್ಟೇ : ಬಿಲ್ಡರ್ಸ್‌ಗಳ ಪ್ರತಿನಿಧಿಯೊಬ್ಬ ಎಲ್ಲ ಕಡೆ ಹಾಜರು!

ಮೊಯ್ಲಿ ಸಾಹೇಬರೇನೂ ಕಡಿಮೆನಾ? ನೈಸಾಗಿ ಮಾತಾಡುತ್ತಲೇ ಬಿಲ್ಡರ್ಸ್ ಪರ ನಿಲ್ಲುತ್ತಾರೆ ಅವರು . ಅವರ ಶಿಷ್ಯ ವಿಧಾನ ಪರಿಷತ್ ಸದಸ್ಯ ಅಭಯಚಂದ್ರರು ಬೇನಾಮಿಯಾಗಿ ಬಿಲ್ಡಿಂಗ್ ಉದ್ಯಮದಲ್ಲಿ ಬಂಡವಾಳ ಹಾಕಿದ್ದಾರೆ.




ಫೈರ್ ಇಲಾಖೆಯ ವಾಹನಗಳು ಓಡಾಡಲಿಕ್ಕೂ ಇಕ್ಕಟ್ಟಾದ ರಸ್ತೆಗಳ ಎರಡೂ ಬದಿಗೆ ಬಿಲ್ಡಿಂಗ್‌ಗಳು ಎದ್ದಿವೆ, ಏಳುತ್ತಿವೆ. ಈ ಹಿಂದೆ ಎರಡು ಸಲ ಬಿಲ್ಡಿಂಗ್‌ಗಳಿಗೆ ಬೆಂಕಿ ಬಿದ್ದಾಗ ಫೈರ್ ಇಲಾಖೆಯ ವಾಹನ ಚಲಿಸಲು ರಸ್ತೆ ಇಲ್ಲದೇ ಭಾರಿ ಅನಾಹುತವಾಗಿತ್ತು.

ಭೂಕಂಪವಲಯ-3 ರಲ್ಲಿರುವ ಮಂಗಳೂರು ಬಿಲ್ಡಿಂಗ್‌ಗಳ ಭಾರಕ್ಕೆ ತತ್ತರಿಸಿ ಹೋಗಲಿದೆ.

ಮಂಗಳೂರಿನ ನಾಗರಿಕರು ಬೇಗ ಎಚ್ಚೆತ್ತುಕೊಳ್ಳಲಿ. ಸರ್ಕಾರಕ್ಕೆ ದಾರಿ ತಪ್ಪಿಸುವ ನಗರಾಭಿವೃದ್ಧಿ ಇಲಾಖೆಯ ಸುಭಾಷ್‌ಚಂದ್ರರನ್ನು ಪ್ರಶ್ನಿಸುವ ತಾಕತ್ತು ಪ್ರಿನ್ಸಿಪಲ್ ಸೆಕ್ರೆಟರಿ ದಾಸ್‌ಗಿಲ್ಲವೆ?

-ಮಲ್ಲಿ

ಲೈಟ್‌ಹೌಸ್ ಕುಸಿತದತ್ತ!



ಮಂಗಳೂರಿನ ಪುರಾತನ ಐತಿಹಾಸಿಕ ಲೈಟ್‌ಹೌಸ್ ಗುಡ್ಡವನ್ನೆಲ್ಲ ಬಗೆದು ಅಪಾರ್ಟ್‌ಮೆಂಟ್ಸ್ ಕಟ್ಟಿಸಿಬಿಟ್ಟಿದ್ದಾರೆ. ಒಂದು ಕಡೆ ಮಣ್ಣು ಕುಸಿತ ಆರಂಭವಾಗಿ ಬಿಲ್ಡಿಂಗ್‌ಗಳಿಗೆ ಧಕ್ಕೆ ಬಂದರೂ ಜನರಿಗೆ ಫ್ಲ್ಯಾಟ್ಸ್ ಮಾರುತ್ತಲೇ ಇದ್ದಾರೆ. ಸುರತ್ಕಲ್‌ನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿವಿಲ್ ವಿಭಾಗದವರು ಈ ಬಗ್ಗೆ ಅಧ್ಯಯನ ನಡೆಸಿ ಎಚ್ಚರಿಕೆ ನೀಡಿದ್ದರೂ ಮುಡಾ, ಪಾಲಿಕೆಗಳ ತಲೆಗೆ ಅದು ಅರ್ಥವಾಗಿಲ್ಲ. ಅಗ್ನಿಶಾಮಕ ಇಲಾಖೆಯವರ ಕಾನೂನಿನಂತೆ ರಸ್ತೆ ಅಗಲ, ಕಟ್ಟಡದ ಸುತ್ತ ಬಿಡಬೇಕಾದ ಸೆಟ್‌ಬ್ಯಾಕ್ ಜಾಗ ಇವೆಲ್ಲವನ್ನೂ ಗಾಳಿಗೆ ತೂರಿರುವ ಪಾಲಿಕೆ ಎಂದರೆ ಅದು ಮಂಗಳೂರು ಪಾಲಿಕೆಯೊಂದೇ!

ಗಣಿ ದುಡ್ಡಿನ ಸರಕಾರ ಗಣಿ ವಳಿಕೆ ಹೋಗಂಗದಲ್ಲೋ

ಬಯಲು ಸೀಮೆಯ ಕಟ್ಟೆ ಪುರಾಣ

ವಾಟಿಸ್ಸೆ ಇದ್ದಕ್ಕಿದ್ದಂತೆ ಎಳೆಗರುವಿನಂತೆ ನೆಗೆದಾಡುತ್ತ ಬಂದ. ಅವನ ಕೈಕಾಲುಗಳು ಸ್ವಾದೀನವಿಲ್ಲದ ಪ್ರಯುಕ್ತ ಅವುಗಳನ್ನು ಬೀಸಿದ ಶೈಲಿಗೆ ನಗಾಡಿದ ಜುಮ್ಮಿ.

"ನಿನಿಗೇನು ಮಲ್ಲಾಗ್ರು ಬತ್ತ ಕಿಸಗುಂಡು ಬಿದ್ದು ಹಲ್ಲ ಮುರಕಂಡ್ರೇನು ಮಾಡ್ತೀ?" ಎಂದಳು.

"ನಾನು ಎಷ್ಟೇ ಕುಡುದ್ರು ಹಲ್ಲು ಮುರಕಳಂಗೆ ಬೀಳದಿಲ್ಲ ಕಣಕ್ಕ. ಆಕ್ಚುವಲಿ ಡ್ರಿಂಕ್ಸ್ ಮಾಡಿದೋರಿಗೆ ಇರೋ ಬ್ಯಾಲೆನ್ಸು ಮಾಡದೆಯಿರೋರಿಗೆ ಇರದಿಲ್ಲ" ಎಂದ.

"ಅಂಗರೆ ಕುಡುದೋರಿಗೆ ಬ್ಯಾಲೆನ್ಸು ಸರಿಯಾಗಿದ್ವತೆ?"

"ಊ ಕಣಕ್ಕ. ನೀನು ಲಾರಿ ಬಸ್ಸಲ್ಲಿ ಕುತಗಂಡು ನೋಡು. ಡ್ರಿಂಕ್ಸ್ ಮಾಡಿರೊ ಡ್ರೈವರ್ರು ಕೇವಲ ಅರ್ಧ ಅದಿಲಿ, ನಮ್ಮನ್ನ ಯುಸ್‌ಕೇಪ್ ಮಾಡಿಕಂಡು ತಗಂಡೋಯ್ತರೆ. ಅದೇ ಡ್ರಿಂಕ್ಸ್ ಮಾಡದೋರು ಎಲ್ಲಾರ ಎಟ್ಟೇಬುಡತರೆ ಗೊತ್ತೆ?"

"ಅದ್ಯಾಕೆ ಗೊತ್ತನೊ? ಡ್ರಿಂಕ್ಸ್ ಮಾಡಿರೋರು ಮಾಡೋ ಅನಾಹುತ ಅದು. ಈಗ್ಲು ಅಂಗೆ ಆಗ್ಯದೆ ನೋಡು" ಎಂದ ಉಗ್ರಿ.

"ಈಗ್ಯಾವಾಕ್ಸಿಡೆಂಟಾಗಿದೆಯಪ್ಪಾ?"

"ಈಗಾಗಿರೊ ಆಕ್ಸಿಡೆಂಟು ಇಡೀ ದೇಸಕೆ ಗೊತ್ತಾಗ್ಯದೆ."

"ಅದೆ ಬೊಂಬಾಯಿ ಬಾಂಬ್ ಬ್ಲಾಷ್ಟ."

"ಅದಲ್ಲ ಕಣೊ. ಕುಮಾರಣ್ಣ ಕುಡದಿರಲಿಲ್ಲ, ಚೆನ್ನಿಗಪ್ಪ ಕುಡಿದಿದ್ದ. ಅದ್ಕೆ ಜನಾರ್ಧನ ರೆಡ್ಡಿ ವಿಧಾನಪರಿಷತ್‌ನಲ್ಲಿ ಸಿಡಿಸಿದ ಬಾಂಬಿನ ಹ್ವಡತಕ್ಕೆ ಸ್ಪೀಕರ್ ಎದ್ದು ಯಂಗೋಡಿದ ಗೊತ್ತೆ? ಕಣ್ಣುಮುಚ್ಚ ಬಿಡದ್ರಲ್ಲಿ ಸೀಟು ಕಾಲಿಯಾಗಿತ್ತು."

"ರಿಯಲಿ ಜಂತಾದಳದೋರ ಪಾಲಿಗೆ ಆರಡಿ ಎಕ್ಸ್‌ಬಾಂಬು ಕಣೊ" ಎಂದ ವಾಟಿಸ್ಸೆ.

"ಅದೇನು ಸರಿಯಾಗಿ ಅರ್ಥವಾಗಂಗೆ ಮಾತಾಡಿರ್ಲ?" ಎಂದ ಕಾಳಮಾವ.

"ಏ ಅದೆ ಕಣಮಾವ. ನಿಮ್ಮ ದ್ಯಾವೇಗೌಡ್ರು ಮಗ ಕುಮಾರಣ್ಣ ಇದ್ದಕ್ಕಿದ್ದಂಗೆ ಜಮೀರಮದ್ದನ್ ಬಸ್ಸಲ್ಲಿ ಯಮ್ಮೆಲ್ಲೆಗಳನ್ನೆಲ್ಲ ತುಂಬಿಕಂಡು ತಗಂಡೋಗಿ ಹೋಟ್ಲಲ್ಲಿ ಮಡಿಕಂಡಿದ್ದು ತಂದು ಮುಖ್ಯಮಂತ್ರಿಯಾದ ನೋಡು."

"ಅದಳಿಕತೆಯಲ್ಲವೇನ್ಲ? ಅದ್ನೆ ಏಟುಸತಿ ಹೇಳ್ತಿರಿ ನೀವು" ಎಂದು ಕಾಳಮಾವ ರೇಗಿದ.

"ಹಳೆ ಕತೆ ಸಿಬುರು ಹ್ವಸದಾಗಿ ಹಕಣಾಯಿಸಿಗಂಡದೆ."

"ಅದೆ ಏನೂ ಅಂತ ಹೇಳ್ಳ?"

"ಯಮ್ಮೆಲ್ಲೆಗಳು ಇವುನು ಕರದೇಟಗೆ ಹೋಗಿ ಬಸ್ಸಲ್ಲಿ ಕೂತಗಂಡರೆ?"

"ಇಸ್ವಾಸಕ್ಕೆ ಕೂತಗಬವುದು" ಎಂದಳು ಜುಮ್ಮಿ.

"ಇದು ಆ ಇಸ್ವಾಸ ಅಲ್ಲ ಕಣೆ, ತಮ್ಮನ್ನೇ ಮಾರಿಕಳೊ ಅಂತ ಇಸ್ವಾಸಕ್ಕೆ ಬಲಿಯಾದ್ರು" ಎಂದು ಉಗ್ರಿ ಹೇಳುವಾಗ ಮಧ್ಯೆ ನುಗ್ಗಿದ ವಾಟಿಸ್ಸೆ.

"ಏನು ಗೊತ್ತೇನಕ್ಕ. ಒಬ್ಬ ಎಮ್ಮೆಲ್ಲೆ ಒಂದು ಕ್ಷೇತ್ರದಲ್ಲಿ ದುಡಿಬವುದಾದ ಹಣದ ಹತ್ತರಷ್ಟು ನಾನೇ ಕೊಡ್ತಿನಿ ಬನ್ನಿ ಅಂದ್ರೆ ಯಾವ ಎಮ್ಮೆಲ್ಲೆ ಅವುನಿಂದೆ ಹೋಗದಿಲವಕ್ಕ. ಅದ್ಕೆ ಕುಮಾರ ಸ್ವಾಮಿ ಕರದೇಟಗೆ ಹೋದ್ರು. ಹೋದೇಟಗೆ ಅವ್ರುರ ಕೈಗೆ ಸೂಟುಕೇಸು ಬಂದೊ. ಆ ಸೂಟುಕೇಸು ಎಲ್ಲಿವು ಗೊತ್ತಾ?"

"ನನಿಗೇನು ಗೊತ್ಲ?"

"ಬಳ್ಳಾರಿವು ಕಣಕ್ಕ. ಯಾರೀಗ ವಿಧಾನ ಪರಿಷತ್ ವಳಗೆ ಬಾಂಬು ಹಾಕಿದ್ದನೊ ಆ ರೆಡ್ಡಿ, ಅವುನಂತ ಹಲವಾರು ಜನ ಸೇರಿಸಿ ನೂರಾರು ಕೋಟಿ ಕೊಟ್ರು. ಕಮಾರಣ್ಣ ಮುಖ್ಯಮಂತ್ರಿಯಾದ."

"ಓಹೊಹೊ ಅಂಗಾದ್ರೆ ಇವ್ರುನೂ?"

"ಊ. ಯಾವ ಗಣಿ ದುಡ್ಡಿನಿಂದ ಇವುನು ಮುಖ್ಯಮಂತ್ರಿಯಾದನೊ ಅದೇ ಗಣಿ ದುಡ್ಡಿನ ದೂರಿನಿಂದ ಮನಿಗೋಗಬೇಕಾಗ್ಯದೆ."

"ಅಂಗರೆ ಕುಮಾರಣ್ಣ ಮನಿಗೋದನೇನ್ಲ?"

"ಅಷ್ಟು ಸುಲಭಕ್ಕೆ ಹೋಗದಿಲ್ಲ ಕಣೆ. ಅಂಗೋಗನಾಗಿದ್ರೆ ಆತರ ಮುಖ್ಯಮಂತ್ರಿಯಾಗೋನೆ? ಜನತಾದಳದೋರ್ಯಲ್ಲ ಸೇರಿ ಪರವಾಗಿಲ್ಲ ಕುಮಾರಣ್ಣ ನಮ್ಮ ಲೀಡ್ರು ಅಂತ ಒಪ್ಪಿಗಂಡು ಅವ್ರುರೆ ಮಾಡೋವರಿಗೂ ಇರೋನು."

"ಎಜ್ಜಾಕ್ಟ್ಲಿ ಕರಟ್ ಕಣೊ ಉಗ್ರಿ. ಈ ಅಪ್ಪ ಮಕ್ಕಳ ಸೆಂಟ್ರಿಗೆ ಸಿಕ್ಕಂಡು ದೇವರಂತ ನಮ್ಮ ಚೆನ್ನಿಗಪ್ಪ ಮನಿಗೋಗಂಗಾಗ್ಯದೆ."

"ಚೆನ್ನಿಗಪ್ಪ ಯಾಕ್ಲ ಮನಿಗೋದನು?"

"ರಿಯಲಿ ಕಣಕ್ಕ, ಪಾಪ ಓಪನ್ ಆರಟ್ ಫೆಲೋ. ಇರದನ್ನೆಲ್ಲ ಮುಚ್ಚುಮರೆಯಿಲ್ದಂಗೆ ಹೇಳತನೆ. ಹ್ವಡದ ಲಂಚನ್ನೆಲ್ಲ ಬಡಬಗ್ಗರಿಗೆ ಹಂಚತನೆ, ಅಂತ ದೇವರಂತ ಮನುಸನಿಗೆ ಹಿಂಗಾಗಬಾರದಿತ್ತು ಕಣಕ್ಕ."

"ಈಗೇನಾಗಿದ್ದತ್ಲ ಅವುನಿಗೆ?"

"ಏನು ಆಗಿಲ್ಲ ಕಣಕ್ಕ. ಮಂತ್ರಿಗಿರಿ ಬುಟ್ಟು ಮನಿಗೋಗೋ ಕಾಲ ಬಂದದೆ, ರಿಯಲಿ ವೆರಿಬ್ಯಾಡು. ಪಾಪ ಅವುನು ಮದ್ದು ಬಡ್ಡಿ ವ್ಯವಹಾರ ಮಾಡಿಕಂಡು ಯಂಗೊ ಕಾಲ ಹಾಕತಿದ್ದ, ಅಂಗೆ ಇದ್ರಾಗದು" ಎಂದು ವಾಟಿಸ್ಸೆ ಹೇಳುವುದನ್ನು ಕೇಳಿ ಸಿಟ್ಟಾದ ಜುಮ್ಮಿ,

"ಅದೇನು ನೀಸಾರ ಸರಿಯಾಗೇಳ್ಳ ಉಗ್ರಿ" ಎಂದಳು.

"ನೋಡೆ ಈ ಚೆನ್ನಿಗಪ್ಪ ಬಳ್ಳಾರಿ ಗಣಿ ಮಾಲೀಕರಿಗೆ ಪೋನು ಮಾಡಿ ಕುಮಾರಣ್ಣ ದುಡ್ಡು ಕೇಳ್ತ ಅವ್ರುರೆ ಕೊಡಿ ಅಂತ ಅಂದನಂತೆ"

"ಕುಮಾರಣ್ಣ ಕೇಳಿದ್ನೆ?"

"ಕೇಳಿದ್ನೊ ಬುಟ್ನೊ ಅದು ಚೆನ್ನಿಗಪ್ಪನಿಗೇ ಗೊತ್ತು, ಅವ್ರುರು ಬಾ ಕೊಡ್ತಿವಿ ಅಂದ್ರು. ಇವುನು ಹೋದ. ಯಲ್ಲಾರ ಜ್ವತೆಲೂ ಮಾತಾಡಿದ, ಕುಡುದ, ತಿಂದ, ಬಾಯಿಗೆ ಬಂದಂಗೆ ಮಾತಾಡಿದ. ಕಡಿಗೆ ನೂರೈವತ್ತು ಕೋಟಿ ಏಣಿಸಿಗಂಡು ಸೂಟುಕೇಸಿಗೆ ತುಂಬಿಕಂಡು ಬಂದ. ಅಲ್ಲೇ ನಾಗಿತ್ತವ್ವಾ ಅಂದ್ರೇ, ಚೆನ್ನಿಗಪ್ಪನಿಗೆ ನೂರೈವತ್ತು ಕೋಟಿ ಕೊಟ್ರಲ್ಲ ಆ ನನಮಕ್ಕಳು ಯಲ್ಲಾನು ವಿಡಿಯೋ ಮಾಡಿಕಂಡು ಮಡಿಕಂಡ್ರು. ಈಗ ನೀವು ಸುಳ್ಳು ಅಂದ್ರೆ ತಗುದು ತೋರತಿವಿ ಅಂತ ಕುಂತವ್ರುರೆ; ಅಂತು ಈಗ ಸಿಗಾಯ್ಕಂಡನೇ ಚೆನ್ನಿಗಪ್ಪ" ಎಂದ ಉಗ್ರಿ.

"ಅದೆಲ್ಲೊ ದಡ್ಡ ಮುಂಡೆದು ಕಂಡ್ಯ" ಎಂದ ಸೀರ.

"ಅವುನು ಈಗಾಡತಾಯಿರೊ ಮಾತಿಗೆ ಯಲ್ಲಾ ನಗತಾ ಅವ್ರುರೆ."

"ಏನಂತಾ ಅವುನೆ?"

"ಆ ವಿಡಿಯೋದಲ್ಲಿರೋನು ಯಾರೊ ನನ್ನ ಮುಖವಾಡ ಹಾಯ್ಕಂಡವುನೆ, ಮಿಮಿಕ್ರಿ ದಯಾನಂದ ನನ್ನಂಗೆ ಮಾತಾಡ್ಯವುನೆ ಅಂತಾ ಅವುನೆ. ಇದಕೇನೇಳ್ತಿ?


"ಓ ಅಂಗರವುನು ಹೋದ ಬುಡತ್ತಗೆ" ಎಂದ ಸೀರ.

"ಹೋಗದಲ್ಲ, ಇಲ್ಲಿಗಂಟ ದ್ಯಾವೇಗೌಡ್ರೆ ದೇವರು ಅಂತಿದ್ದೊನು ಈಗ ಅಯ್ಯಪ್ಪ ಸ್ವಾಮಿನೆ ಕಾಪಾಡಬೇಕು ಅಂತಾ ಅವುನೆ."

"ನೋಡು ಮತ್ತೆ?"

"ಲ್ಯಕ್ಕ ಹಾಕು. ಇನ್ನಂಥಾ ಇವುನವುನು."

–ಬಿ. ಚಂದ್ರೇಗೌಡ



Zero Hour ಮುನ್ನಿ

1. ರಮ್ಯಾಗಿಂತ ರಕ್ಷಿತಾ 13 ದಿನ ದೊಡ್ಡವಳು. ರಕ್ಷಿತಾಗಿಂತ ರಾಧಿಕಾ 29 ದಿನ ಚಿಕ್ಕವಳು. ರಾಧಿಕಾ, ರಮ್ಯಾರ ವಯಸ್ಸುಗಳ ಮಧ್ಯದ ವ್ಯತ್ಯಾಸ 16 ದಿನಗಳು. ರಮ್ಯಾ, ರಕ್ಷಿತಾ, ರಾಧಿಕಾರಲ್ಲಿ ಯಾರು ಚಿಕ್ಕವರು ಯಾರು ದೊಡ್ಡವರು?





a) ರಮ್ಯಾ ಅತಿ ಚಿಕ್ಕವಳು ರಾಧಿಕಾ ಅತಿ ದೊಡ್ಡವಳು
b) ರಾಧಿಕಾ ಅತಿ ಚಿಕ್ಕವಳು ರಮ್ಯಾ ಅತಿ ದೊಡ್ಡವಳು
c) ರಮ್ಯಾ ಅತಿ ದೊಡ್ಡವಳು ರಕ್ಷಿತಾ ಅತಿ ಚಿಕ್ಕವಳು
d) ರಾಧಿಕಾ ಅತಿ ಚಿಕ್ಕವಳು, ರಕ್ಷಿತಾ ಅತಿ ದೊಡ್ಡವಳು
e) ಹೊಯ್ ಮುನ್ನಿ, ನಟಿಯರ ವಯಸ್ಸು ಲೆಕ್ಕ ಹಾಕೋ ಗಣಿತಜ್ಞ ಇನ್ನೂ ಹುಟ್ಟಿಲ್ಲಮ್ಮ...
f) d & e ಎರಡೂ ಸರಿ

2. ಸಿದ್ದು ಈಗ ಎಲ್ಲಿದ್ದಾರೆ?
a) ಇನ್ನೂ ಎಬಿಪಿಜೆಡಿಯಲ್ಲಿರಬೇಕಲ್ಲಾ?
b) ಕಾಂಗ್ರೆಗೆ ಬಂದಾಯ್ತು ಅನಿಸುತ್ತೆ
c) ಅದೇನೋ ರಾಜೀನಾಮೆ ನೀಡಿ, ಭಾಷಣ ಮಾಡಿ ಕಾಂಗ್ರೆಗೆ ಬರ್ತೀನಿ ಅಂದಿದ್ದರಲ್ಲ
d) ಅರೆ ಮುನ್ನಿ, ಎಲ್ಲಿದ್ದರೇನು ಬಿಡಮ್ಮ, ಇನ್ನೆಂದೂ ಅವರು ಸಿಎಮ್, ಡಿಸಿಎಮ್ ಆಗಲ್ಲ!

3. ಜನಾರ್ಧನ ರೆಡ್ಡಿಯ ಈ ಹೇಳಿಕೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ
a) ನಕ್ಸಲೈಟರು 150 ಕೋಟಿ ವಸೂಲು ಮಾಡಿದ್ದಾರೆ
b) ಸಿ.ಎಂ. ಹೆಸರಲ್ಲಿ ಕೆಲವರು 150 ಕೋಟಿ ವಸೂಲಿ ಮಾಡಿದ್ದಾರೆ
c) ಸಿ.ಎಂ. ಕುಟುಂಬ, ಚೆನ್ನಿಗಪ್ಪ, ಎಂ.ಪಿ. ಪ್ರಕಾಶ್ ಇವರೆಲ್ಲ ಸೇರಿ 150 ಕೋಟಿ ತಿಂದಿದ್ದಾರೆ.
d) ಮಾಧ್ಯಮದವರು ತಿರುಚಿ ಬರೆದಿದ್ದಾರೆ ನಾನು ಆ ಅರ್ಥದಲ್ಲಿ ಹೇಳಿಲ್ಲ.
e) ಸಿ.ಎಂ., ಚೆನ್ನಿಗಪ್ಪ 150 ಕೋಟಿ ಲಂಚ ಪಡೆದಿದ್ದಾರೆ.
i) d-c-e-a-b ii) e-a-c-d-b
iii) e-d-a-b-c iv) d-e-a-b-c

4. ವಿಷಭಟ್ಟ, ಪಿ. ತ್ಯಾಗರಾಜ್, ಭಜರಂಗಿ ಸುನೀಲ್‌ಕುಮಾರ್, ಅರವಿಂದ ಲಿಂಬಾವಳಿಗಳೆಲ್ಲ 'ಮುಕ್ತ'ದಲ್ಲಿ ಮುಖ ಹಾಕಿವೆಯಲ್ಲ?
a) ಸರ್ಪದೋಷ ಪರಿಹಾರಕ್ಕೆ ನಟಿಸುತ್ತಿದ್ದಾರೆ
b) ಅಂತೂ 'ಮುಕ್ತ'ದಲ್ಲಿ ಮಂಗಗಳ ಹಿಂಡೇ ಸೇರಿದಂತಾಯ್ತು
c) ಮಂಗಗಳನ್ನು ಕುಣಿಸಲು ಸೀತಾರಾಮ್ ಇದ್ದಾನಲ್ಲ....
d) ಮೇಲಿನೆಲ್ಲವೂ ಸರಿ

5. ಬರ್ತ್‌ಡೇ ಬಾಯ್ ಖರ್ಗೆಯನ್ನು 'ಅಭಿನವ ಬುದ್ಧ'ನೆಂದು ಕರೆದಿದ್ದಾರಲ್ಲ?
a) ಮುದಿ ವಯಸ್ಸಿನ ಬರ್ತ್‌ಡೇಯಲ್ಲಿ ಖರ್ಗೆಗೆ ಖುಷಿ ಮಾಡಲು
b) 'ಅಭಿನವ ಪೆದ್ದ' ಎನ್ನಬೇಕಿತ್ತು
c) ಮಗ ಪ್ರಿಯಾಂಕಾ, ಅಳಿಯ ರಾಧಾಕೃಷ್ಣ ಕಾಸು ಚೆಲ್ಲಿ ಬಿರುದು ತಂದರಂತೆ
d) ಔಟ್ ಡೇಟೆಡ್ ರಾಜಕಾರಣಿ ಬರ್ತ್‌ಡೇ ಮಾಡ್ತ ಇರ್ಲಿ ಬಿಡಿ
e) ಬುದ್ಧನನ್ನೂ ಬಿಡಲ್ವಲ್ಲ ಈ ಪೆದ್ದುಗಳು

6. ಬೆಂಗಳೂರಿನ ಗಾಂಧಿನಗರದಲ್ಲಿನ ಥಿಯೇಟರ್‌ಗಳೆಂದರೆ
a) ತಿಗಣೆ ಕಡಿತ ಉಚಿತ, ಕೂಲ್-ಡ್ರಿಂಕ್ಸ್, ಬೇಕರಿ ಐಟಮ್ಸ್ ಬ್ಲೇಡ್ ಖಚಿತ
b) ಟಾಯ್ಲೆಟ್ ಗಬ್ಬು ವಾಸನೆ ಬೋನಸ್
c) ಪೊಲೀಸರು, ಬ್ಲಾಕ್ ಟಿಕೇಟಿನವರ ದೋಸ್ತಿ ಖಾತ್ರಿ
d) ಅಯ್ಯೋ, ಇನ್ನೂ ಏನೇನೋ ಫ್ರೀ ಇವೆ ಬಿಡಿ. ಅದ್ಕೆ ಮೇಲಿನೆಲ್ಲವೂ ಸರಿ ಅನ್ನೋಣ



7. ಸ್ತ್ರೀವಸ್ತನ ಮುಂದಿನ ಸೀನ್ ಏನಿರಬಹುದು?
a) ಯಾವುದೋ ನಟಿಗೆ "ಕಾಲ್‌ಶೀಟ್ ಕೊಡದಿದ್ರೆ ಏನಾತು, ಬೆಡ್‌ಶೀಟ್‌ಗಾದರೂ ಬಾರೆ" ಎಂಬ ಡೈಲಾಗ್
b) "ಬರೀ ರಾತ್ರಿ 10 ರಿಂದ 5 ಅಷ್ಟೇ ಅಲ್ಲ, ಡೇ ಅಂಡ್ ನೈಟ್ ಮ್ಯಾಚಿಗೂ ಬರ್ತಿಯಾ" ಎಂಬ ಡೈಲಾಗ್
c) "ಎಲ್ಲಾ ನಟಿಯರೂ ಮುಚ್ಕೊಂಡು ನನ್ ಸಿನಿಮಾದಲ್ಲಿ ನಟಿಸಿ, ಬಿಚ್ಚಾಟ ಮಾಡ್ಬೇಕು" ಎಂಬ ಡೈಲಾಗ್
d) ಆತ ತಿಕಮುಚ್ಕೊಂಡು ಕೂಡ್ರದಿದ್ದರೆ ಮಹಿಳಾ ಸಂಘಗಳು ಚಪ್ಪಲಿ ಸೇವೆ ಮಾಡ್ತವೆ ಬಿಡಿ

ಉತ್ತರಗಳು
1. d ಅಥವಾ ಎಫ್, 2. d 3. iii 4. d
5. d ಅಥವಾ e 6. d 7. d



ಹುಟ್ಟು ಮತ್ತು ಸಾವುಗಳ ನಡುವೆ


ಕಾಲದ ಬಗ್ಗೆ, ಕ್ಲುಪ್ತತೆಯ ಬಗ್ಗೆ ನಾನು ಬಹಳ ಹೇಳುತ್ತಿದ್ದೇನೆ. ಅದನ್ನು ಇವತ್ತು ವಿವರಿಸುವುದು ಒಳ್ಳೆಯದು.

ಹುಟ್ಟು ಸಾವುಗಳ ನಡುವಿನ ವೇಳೆಯನ್ನು ಬದುಕು ಎಂದು ಕರೆಯುತ್ತೇವೆ. ಈ ಬದುಕು ಕಾಲಕ್ಕೆ ಬಂಧಿ. ಕಾಲ ಕೇವಲ ಗಡಿಯಾರವನ್ನವಲಂಬಿಸಿದ್ದಲ್ಲ; ನಾಡಿಬಡಿತವನ್ನು, ಬದುಕುವ ಆಶೆ ಮತ್ತು ಸಾವಿನ ಸಾಧ್ಯತೆಯನ್ನು ಅವಲಂಬಿಸಿದ್ದು. ಗಡಿಯಾರ ಕೂಡ ಕಾಲವನ್ನು ಅವಲಂಬಿಸಿದ್ದು.


ಒಂದು ತಮಾಷೆ, ಗಡಿಯಾರ ಕಟ್ಟಿಕೊಂಡವನು ಮಾತ್ರ ಕ್ಲುಪ್ತತೆಯನ್ನು ಪಾಲಿಸಲು ಸಾಧ್ಯ ಎಂದು ಕೆಲವರು ಹೇಳಬಹುದು. ಇದು ಮೂರ್ಖತನ. ಗಡಿಯಾರ ಸಹಾಯಕ ಮಾತ್ರ. ಯಾಕೆಂದರೆ ಕಾಲದ ಪ್ರಜ್ಞೆ ನೈತಿಕ ಮತ್ತು ಸಾಮಾಜಿಕವಾದದ್ದು. ನಾನು ತುಂಬ ಚಿಕ್ಕವನಾಗಿದ್ದಾಗ ಕಂಡುಕೊಂಡ ಸತ್ಯ ಇದು. ಒಮ್ಮೆ ಗೆಳೆಯನೊಬ್ಬನಿಗೆ ಒಂದು ಗೊತ್ತಾದ ಸ್ಥಳಕ್ಕೆ ಬರಲು ಹೇಳಿದ್ದೆ. ನಾನು ಹೇಳಿದ ವೇಳೆಗೆ ಸರಿಯಾಗಿ ಹೋಗಿ ಅಲ್ಲಿ ಕಾಯುತ್ತ ನಿಂತೆ. ಆತ ಬಂದಿರಲಿಲ್ಲ, ಆತನಿಗಾಗಿ ಕಾಯುವಾಗ ನನ್ನಲ್ಲಿ ಆಗುತ್ತಿದ್ದ ತಳಮಳ ಗಮನಿಸಿದೆ. ನಾನು ಭೇಟಿಗೆ ತಕ್ಕ ಮನುಷ್ಯನಲ್ಲ ಎಂದು ಆತ ತಿಳಿದಿರಬಹುದೆ, ನಾನು ಆತನಿಗೆ ಹೇಳಿದ ಸ್ಥಳ, ವೇಳೆಯಲ್ಲಿ ತಪ್ಪಿರಬಹುದೆ, ನನ್ನಲ್ಲಿ ಏನೋ ದೋಷವಿರಬಹುದಾದ್ದರಿಂದ ಆತ ಹೀಗೆ ವೇಳೆಗೆ ಸರಿಯಾಗಿ ಬರದೆ ಅವಮಾನ ಮಾಡುತ್ತಿರಬಹುದೆ, ನಮ್ಮ ಭೇಟಿಯ ಉದ್ದೇಶವೇ ಕ್ಷುಲ್ಲಕವಿರಬಹುದೆ-ಎಂದೆಲ್ಲ ಕೇಳಿಕೊಂಡು ಮಂಕಾಗಿ ನಿಂತೆ. ಆತ ಬರಲಿಲ್ಲ, ನನ್ನ ಸಮಯ ವ್ಯರ್ಥವಾದಂತೆ ಅನ್ನಿಸಿತು; ಅದೇ ವೇಳೆಯನ್ನು ಬೇರೆ ಕ್ರಿಯೆಯಲ್ಲಿ ಕಳೆಯಬಹುದಿತ್ತು ಅನ್ನಿಸಿತು. ಗೆಳೆಯನ ಮೇಲೆ ಸಿಟ್ಟು ಬಂತು. ಆತ ಸಿಕ್ಕಾಗ ರೇಗಿದೆ.

ನಾವು ಇನ್ನೊಬ್ಬರನ್ನು ಸಮಯಕ್ಕೆ ಸರಿಯಾಗಿ ಭೆಟ್ಟಿಯಾಗದೆ ಇದ್ದಾಗ ಅವರನ್ನು ಮಾತ್ರ ಗೊಂದಲಕ್ಕೀಡುಮಾಡುವುದಿಲ್ಲ, ನಮ್ಮ ಸಭೆಯ ಉದ್ದೇಶವನ್ನೇ ಇಳ್ಕಾಗಿ ಕಾಣುತ್ತೇವೆ. ಈಗ ನಡೆಯಬೇಕಾದ ಚರ್ಚೆ ಅಥವಾ ಮಾತುಕತೆ ಒಂದು ಗಂಟೆ ತಡವಾಗಿ ನಡೆದರೆ ಚರ್ಚೆಯ , ಗಾಂಭೀರ್ಯ ಮತ್ತು ಉದ್ದೇಶ ಸಡಿಲಗೊಳ್ಳುತ್ತವೆ. ಕೋಟ್ಯಂತರ ಜನರ ಬದುಕಿಗೆ ಸಂಬಂಧಿಸಿದ ವಿಷಯವನ್ನು ನೀವು ನಿಮ್ಮ ಗೆಳೆಯರೊಂದಿಗೆ ತಡವಾಗಿ ಚರ್ಚಿಸಿದ್ದರೆ ಈ ಕೋಟ್ಯಂತರ ಜನರ ಬದುಕಿನ ಕಾಲವನ್ನು ಕೀಳಾಗಿ ಕಂಡಿದ್ದೀರಿ. ಹುಟ್ಟು ಮತ್ತು ಸಾವುಗಳ ನಡುವಿನ ಗೆರೆ, ಗಡಿಗಳೇ ಇಲ್ಲದ ಬದುಕಿನಲ್ಲಿ ಗೆರೆಯನ್ನೆಳೆಯುವ, ಖಚಿತ ಕ್ರಿಯೆಯಲ್ಲಿ ತೊಡಗುವ ಹಕ್ಕನ್ನೇ ಕಳೆದುಕೊಳ್ಳುತ್ತೀರಿ.

ಕಾಲದ ಪರಿವೆ ಕೇವಲ ಸಾಮಾಜಿಕವಲ್ಲ, ಅದು ಒಬ್ಬ ವ್ಯಕ್ತಿ ಮತ್ತು ಗುಂಪು ತನ್ನಲ್ಲಿ ಇರುವ ಭೂತಕಾಲದ ನೆನಪುಗಳನ್ನು, ಮೌಲ್ಯಗಳನ್ನು ವರ್ತಮಾನಕ್ಕೆ ಹೊಂದಿಸಿ ಭವಿಷ್ಯ ಕಾಲದತ್ತ ಅಡಿ ಇಡುವ ರೀತಿ ಕೂಡ. ಭಾರತೀಯ ಈ ದೃಷ್ಟಿಯಲ್ಲಿ ಕೊಂಚ ದುರ್ಬಲ. ಇಪ್ಪತ್ತೈದು ವರ್ಷದ ಹಿಂದೆ ನಡೆದದ್ದನ್ನು ದಾಖಲೆ ಸಹಿತ ನೀಡಲಾರದ ವ್ಯಕ್ತಿ ಭಾರತೀಯ. ರಾಷ್ಟ್ರದ, ರಾಜ್ಯದ ಸ್ಥೂಲ ಸಂಗತಿ ಗೊತ್ತಿರಬಹುದು; ವ್ಯಕ್ತಿಯ ಹತ್ತಿರದ ಸಂಗತಿಗಳು ಅಸ್ಪಷ್ಟವಾಗುತ್ತ ಹೋಗುತ್ತವೆ. ಆತನ ವರ್ತಮಾನದ ಕ್ರಿಯೆ ಮಂದವಾಗುತ್ತ ಹೋಗುತ್ತವೆ. ಕಾಲ, ದೇಶಕ್ಕೆ ವ್ಯಕ್ತಿಯ ಹೊಣೆ ತನ್ನ ಮೊನಚು ಕಳೆದುಕೊಳ್ಳತ್ತದೆ.



ಕಾಲದ ಆಟ ವ್ಯಕ್ತಿಯಿಂದಲೇ ಶುರುವಾಗುತ್ತದೆ. ಆತ ತನಗೆ, ತನ್ನವರಿಗೆ ಎಂದು ರೂಪಿಸಿಕೊಳ್ಳುವ ಆಶಯಗಳೆಲ್ಲ ಆತನ ಒಳ ಮಾರ್ದವಗಳನ್ನು, ಆತನ ವ್ಯಕ್ತಿತ್ವದ ಸಾಧ್ಯತೆಗಳನ್ನು ಅವಲಂಬಿಸುತ್ತದೆ. ನಾನು ನಾಳೆಯ ಹೊತ್ತಿಗೆ, ಇಷ್ಟು ಗಂಟೆಗೆ ಮಾಡಬೇಕಾದ್ದನ್ನು ಮಾಡದಿದ್ದರೆ ಅದು ಆತ್ಮವಂಚನೆ. ತನ್ನ ವೇಳೆಗೆ ತಾನು ಮಾಡಿಕೊಂಡ ಮೋಸ. ಈ ವಂಚನೆಯಿಂದಲೇ ಸಾಮೂಹಿಕ ವೇಳೆಯ ಬಗ್ಗೆ ನಿರ್ಲಕ್ಷ್ಯ ಶುರುವಾಗುತ್ತದೆ.




ಮೇ 8, 1988

ಈ ಜಗತ್ತಿನಲ್ಲಿ ಏನಾದರೂ ಒಳ್ಳೆಯದು, ಮೌಲ್ಯ ಅನ್ನಿಸಿಕೊಳ್ಳುವಂಥದು ಉಳಿದಿದ್ದರೆ ಅದು ಸಮಯಕ್ಕೆ ಬದ್ಧವಾಗಿಯೇ ಉಳಿದಿದೆ; ಸೃಷ್ಟಿಸಿದ ಮನುಷ್ಯನ ಹುಟ್ಟು ಮತ್ತು ಸಾವಿನ ನಡುವಿನ ಮೈಲಿಗಲ್ಲಾಗಿ ರೂಪುಗೊಂಡಿದೆ. ಆದ್ದರಿಂದ ಹೊರಡಬೇಕಾದ್ದು ಕಾಲಕ್ಕೆ ಬದ್ಧರಾಗಿಯೇ; ಮೂಡಿಮುಳುಗುವ ಸೂರ್ಯ ಚಂದ್ರರ ನೇರ ಗೆರೆಯ ಮೇಲೆ ಖಚಿತ ಗುರುತುಗಳ ಅಡ್ಡಗೆರೆಯನ್ನು ಎಳೆಯುವ ಮೂಲಕವೇ. ಆದ್ದರಿಂದ ನಾನು ಯಾವನೇ ಬುದ್ಧಿವಂತನ ಗಾಢವಿಚಾರಗಳನ್ನು ಅವುಗಳ ತೂಕಕ್ಕಾಗಿ ಗೌರವಿಸುವುದಿಲ್ಲ; ಕಾಲ, ದೇಶದಲ್ಲಿಟ್ಟು ನೋಡಿ ಮಾಪನ ಮಾಡುತ್ತೇನೆ. ಹಾಗೆಯೇ ಅದ್ಭುತ 'ಐಡಿಯಾ' 'ಉದ್ದೇಶ'ಗಳನ್ನಿಟ್ಟುಕೊಂಡ ಅಶಿಸ್ತಿನ ಜನರ ಐಡಿಯಾಗಳೆಲ್ಲ ವ್ಯರ್ಥವಾದವು. ಸಹಜ, ಸಾಮಾನ್ಯ ಉದ್ದೇಶಗಳಿಂದ ಹೊರಟ ಶಿಸ್ತಿನ, ಹೊಣೆಯರಿತ ಜನರ ಚಟುವಟಿಕೆಗಳು ಹೆಚ್ಚು ಅರ್ಥಪೂರ್ಣವಾಗುತ್ತವೆ. ಯಾಕೆಂದರೆ ನಿಯಮಬದ್ಧವಾಗಿ ಜನನ ಮರಣದ ನಡುವಿನ ಕಾಲದ ಮೂರ್ತ, ಅಮೂರ್ತ ರೂಪಗಳನ್ನೂ ಸಾಧ್ಯತೆಗಳನ್ನೂ ಮನುಷ್ಯನ ಬದುಕಿನ ವಿಪರ್ಯಾಸ, ದುರಂತಗಳನ್ನು ತಿಳಿದ ಮನುಷ್ಯರ ಶಿಸ್ತಿನ ಪುಟ್ಟ ಕೆಲಸ ಅರ್ಥವುಳ್ಳ ಬದುಕನ್ನು ರೂಪಿಸಲು ನೆರವಾಗುತ್ತದೆ.

ಈ ವೇಳೆಯ ಬಗೆಗಿನ ಕಾಳಜಿ ನಮ್ಮ ಆರೋಗ್ಯ ಪರಿಸರದ ನೈರ್ಮಲ್ಯ, ನಮ್ಮ ಜನರ ಸಹಬಾಳ್ವೆ, ಎಲ್ಲರೂ ಸೇರಿ ಮಾಡಬಹುದಾದ ಕೆಲಸಗಳು, ಶಿಕ್ಷಣ, ವಿಜ್ಞಾನ, ರಾಜಕೀಯ, ಸಂಸ್ಕೃತಿ-ಎಲ್ಲವನ್ನೂ ಒಳಗೊಳ್ಳುತ್ತದೆ ಎಂದು ನಾನು ಹೇಳುವಾಗ ಉತ್ಪ್ರೇಕ್ಷಿಸುತ್ತಿಲ್ಲ.

ರಕ್ತದೊತ್ತಡ, ಹೃದಯಾಘಾತಗಳು ವ್ಯಕ್ತಿಯನ್ನೊಳಗೊಂಡು ಇಡೀ ಸಮಾಜಕ್ಕೆ ತಗಲುವುದು ಇಲ್ಲಿ ಯಾವ ಕೆಲಸಕ್ಕೂ ಕಾಲ, ದೇಶದ ಪ್ರಜ್ಞೆ ಇಲ್ಲದಿರುವುದರಿಂದ.

ಸಂತತಿ ನಿಲ್ಲಲು ಕಾಂಡೋಮ್ ಇದೆ. ಭ್ರಷ್ಟಾಚಾರ ನಿಲ್ಲಲು...?



ಬಿ.ಚಂದ್ರೇಗೌಡ. ಬೆಂಗಳೂರು
ಅಲಂಕಾರ ಪ್ರಿಯತೆ ಹೆಂಗಸರಲ್ಲೇ ಹೆಚ್ಚು ಏಕೆ?
* ಬಹುಪಾಲು ಗಂಡಸರು ಪೆದ್ದರು, ಕೆಲವರು ಮಾತ್ರ ಕುರುಡರು ಅಂತಂದ್ರೆ ನಂಬ್ತಿರಾ.

ಮಂಚಾಲಿ ಗುರುರಾಜಚಾರು. ಬಳ್ಳಾರಿ
ಕುಮಾರಸ್ವಾಮಿಯವರು Airtel, ಯಡಿಯೂರಪ್ಪ Reliance, ಸಿದ್ಧರಾಮಯ್ಯ ಏನು?
* ಕರ್ನಾಟಕ ರಾಜಕೀಯಕ್ಕೆ 'ಸ್ಪೈಸು'.

ಪೂರ್ಣಿಮಾ. ಹಗರಿಬೊಮ್ಮನಹಳ್ಳಿ
ನಾಗ್ತಿಹಳ್ಳಿ ಬಂದೋದ್ಮೇಲೆ ನಮ್ಮಳ್ಳಿ ಮಲ್ಲಿಗೆಗಳು ಮಾತನಾಡ್ತ ಇಲ್ವಲ್ಲ?
* ಕಾಕಡ ನಾಗ್ತಿ ಸ್ಪರ್ಶಮಹಿಮೆ.


ಎಂ.ಕೆ. ರವಿಕಾಂತ. ಮರಳೂರು
ಶಿವಪೂಜೆಗೆ ಜಾರದ ಕತ್ತೆ ಹಾಲು ಚಿಕೂನ್‌ಗುನ್ಯ ರೋಗಕ್ಕೆ ಸಂಜೀವಿನಿಯಂತಲ್ಲ?
* ಹಾಗಂತ ಹಾಲು ಕರೆಯೋಕೆ ಹೋದಿಯಾ, ಕತ್ತೆ ಒದೆಯುತ್ತೆ ರವಿಕಾಂತೂ...

ಪ್ರಿಯಾ ಪೆಂಡ್‌ಕೂರ್. ಹೊಸಪೇಟೆ
ನಮ್ಮನ್ನು ನಾವು ನಿಜವಾಗಿ ಅರ್ಥ ಮಾಡಿಕೊಳ್ಳಲು ಏನು ಮಾಡಬೇಕು?
* ನಮಗೆ 'ಪ್ರಿಯ'ವಾದದ್ದನ್ನು ಬಿಟ್ಟು ನಿಷ್ಠುರವಾದದ್ದರ ಬಗ್ಗೆ ಚಿಂತಿಸಬೇಕು.

ಎಸ್. ಶಶಿಧರ. ಬೆಂಗಳೂರು
ಗಂಡನಿಗೇಕೆ 'ಧರ್ಮಪತಿ' ಅನ್ನುವುದಿಲ್ಲ?
* ಧರ್ಮ-ಪತಿ ಎಂಬುದು ಒಂದು oxy-moron ಆಗಿರುವುದರಿಂದ.

ಕವಿತಾ ಮಧುಸೂದನ್. ದಾವಣಗೆರೆ
ವಯಸ್ಸಿನಲ್ಲಿ ಗಂಡ ಕಿರಿಯನಾಗಿ ಹೆಂಡತಿ ಹೆಚ್ಚು ವಯಸ್ಕಳಾಗಿದ್ದರೆ ಪರಿಣಾಮ ಏನು?
* ರೆಡ್ಡಿ ಎಂಬ 150 ಕೋಟಿ ಕೂಸು!

ಕಾಳಿಹುಂಡಿ ಶಿವಕುಮಾರ್. ಮೈಸೂರು
ಅರಮನೆ, ಗುರುಮನೆ, ಗೌಡರಮನೆ- ಈ ಮೂರರಲ್ಲಿ ರಾಜಕಾರಣಿಗಳಿಗೆ ಇಷ್ಟವಾದ ಮನೆ ಯಾವುದು?
* ಮನೆ ಹಾಳು ಮಾಡುವವರಿಗೆ ಯಾವ ಮನೆ ಆದರೇನು?



ಕೆ.ಶ್ರೀನಿವಾಸ್. ಮಂಡ್ಯ
'ತುತ್ತೂರಿ' ಚಿತ್ರ ತೆಗೆದ ಜಯಮಾಲ, ಈಗ ಥತ್ತೇರಿ! ತೆಗೀತಾರಂತೆ?
* 'ತಂತ್ರಿಗಳ ಪಿತೂರಿ' ರಿಲೀಸ್ ಆಗಿದೆಯಲ್ಲಾ.


ಸ್ಫೂರ್ತಿ ಪೆಂಡ್‌ಕೂರ್. ಹೊಸಪೇಟೆ
ಕೋಪದ ಶತ್ರು ಸಹನೆ, ಸಹನೆಯ ಶತ್ರು?
* ಗೊತ್ತಿಲ್ಲ, ಆದರೆ ಹೇಡಿತನವಂತೂ ಮಿತ್ರ ಅಂತ ಗೊತ್ತು.

ಎಚ್.ಸಿ. ಭಾಗ್ಯಕುಮಾರ್. ಬೆಂಗಳೂರು
ದೇವೇಗೌಡರ ವರ್ತನೆ ನೋಡಿದರೆ Night soil son ಇರಬಹುದೇ ಎನಿಸುತ್ತದಲ್ಲ?
* ಅದನ್ನು ಬಯಲಿಗೆಳೆದ ನಾನೇ Knight soil son ಅಂತಿದ್ದಾನೆ ಜನಾರ್ಧನ.

ಬಹುಮಾನಿತ ಪ್ರಶ್ನೆ

ಎಂ. ಶಿವಕುಮಾರ್. ಕುಮಟಾ
ಸಂತತಿ ನಿಲ್ಲಲು ಕಾಂಡೋಮ್ ಇದೆ, ಭ್ರಷ್ಟಾಚಾರ ನಿಲ್ಲಲು...?
* ದಂಡಂ ದಶಗುಣಂ ಎಲ್ಲಾ, ಇಲ್ಲ.

ಧೀ ತುಂಟಿ!



ಬಿಸ್ ಸ್ಟ್ಯಾಂಡಿನ ಹತ್ತಿರ ಒಬ್ಬಳೇ ನಿಂತಿರುವ ಸುಂದರ ಯುವತಿಯನ್ನು ಕಂಡ ಯುವಕ ಆಕೆಯನ್ನು ಮಾತನಾಡಲಾರಂಭಿಸುತ್ತಾನೆ.

ಯುವಕ : ನಿಜವಾಗಲೂ ನೀವು ತುಂಬಾ ಸುಂದರವಾಗಿದ್ದೀರಿ.

ಯುವತಿ (ಸಂತೋಷಗೊಂಡು) : ಹೌದಾ? ಥ್ಯಾಂಕ್ ಯೂ

ಯುವಕ: ನನಗೊಂದು ಯೋಚನೆ ಬಂತು, ನಾನು ನಿಮಗೆ ಒಂದು ಲಕ್ಷ ರೂಪಾಯಿ ಕೊಟ್ಟರೆ ನೀವು ನನ್ನೊಂದಿಗೆ ಬರುತ್ತೀರಾ?

ಯುವತಿ : (ಸ್ವಲ್ಪ ಹೊತ್ತು ಯೋಚಿಸಿ) ಒಂದು ಲಕ್ಷ ಕೊಡ್ತೀರಾ? ಹಾಗಾದರೆ ಓಕೆ.

ಯುವಕ : ಹೌದಾ? ಹಾಗಾದರೆ ಐದು ರೂಪಾಯಿಗೆ?

ಯುವತಿ : (ಕೋಪಗೊಂಡು) ಏನು? ಐದು ರೂಪಾಯಿ? ನನ್ನನೇನೆಂದುಕೊಂಡೆ?

ಯುವಕ : ನೀನು ಏನು ಅಂತ ನಮ್ಮಿಬ್ಬರಿಗೂ ಆಗಲೇ ಗೊತ್ತಾಗಿದೆ. ಈಗ ದುಡ್ಡಿನ ಬಗ್ಗೆ ಮಾತ್ರ ಚೌಕಾಶಿ ಮಾಡೋಣ, ಸುಮ್ಮಿರು.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಈ ವಾರದ ಪ್ರಶ್ನೆ


'ರಾತ್ರಿ 10ರಿಂದ ಮುಂಜಾನೆ 5ರ ತನಕ ಸಿನಿಮಾ' ಮಾಡುವ 'ಸ್ತ್ರೀವಸ್ತ'ನಿಗೆ ಯಾವ ಅವಾರ್ಡು?

ಕಳೆದ ವಾರದ ಪ್ರಶ್ನೆ: ರೆಡ್ಡಿ-ಯಡ್ಡಿಗಳ ಚೆಡ್ಡಿ ಕಳೆದುಹೋಗಿದ್ದೆಲ್ಲಿ?
ಉತ್ತರ: ಸುಷ್ಮಾಸ್ವರಾಜ್-ವೆಂಕಯ್ಯ ನಾಯ್ಡು ಇಟ್ಟ "ಜಿಲೆಟಿನ್ ಕಡ್ಡಿ"ಯಲ್ಲಿ ಕಳೆದುಹೋಗಿವೆ.
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಸಿ. ಹಾಲಸ್ವಾಮಿ, ಗಾಂಧಿನಗರ, ಬೆಂಗಳೂರು

ಜೀವನ: ಎಲ್ಲಾ ವ್ಯರ್ಥ, ಎಲ್ಲಾ ವ್ಯರ್ಥ.

ಕಾವ್ಯ-ಕೋವಿಗಳ ಸಂಲಗ್ನ

ಕೋವಿ ಹಿಡಿದಿದ್ದ ನಕ್ಸಲೈಟ್ ರಮೇಶ್‌ರ ಅದೇ ಕೈಗಳು ಕಾವ್ಯವನ್ನೂ ಬರೆದಿವೆ. ಸಾಮಾನ್ಯವಾಗಿ ಬಹುಪಾಲು ನಕ್ಸಲೈಟ್ ಹೋರಾಟಗಾರರು ರಾಜಕೀಯ ಸಿದ್ಧಾಂತ, ಫಿಲಾಸಫಿ, ಮಿಲಿಟರಿ ಹಾಗೂ ಸಮಾಜವೊಂದರ ಸಾಮಾಜಿಕ ಆರ್ಥಿಕ ವಿಚಾರಗಳನ್ನು ಅರ್ಥೈಸಿಕೊಂಡು ವಿಶ್ಲೇಷಿಸುವಷ್ಟು ತರಬೇತಿ ಪಡೆದಿರುತ್ತಾರೆ. ಅವರಲ್ಲೇ ಕಾವ್ಯ-ಸಾಹಿತ್ಯದ ಒಲವಿರುವವರು ಅಸಂಖ್ಯಾತ.



ರಮೇಶ್ ಕೂಡ ಅವರಲ್ಲೊಬ್ಬರು. ಸ್ವತಃ ಹಾಡುಗಾರ ರಮೇಶ್ ಬರೆದಿರುವ ಎರಡು ಪದ್ಯಗಳ ಕೆಲ ಪ್ಯಾರಾಗಳನ್ನು ಇಲ್ಲಿ ಪ್ರಕಟಿಸಿದ್ದೇವೆ. 2001 ರ ಮೇ 2 ರಂದು ರಮೇಶ್ ಆಂಧ್ರದ ಗದ್ವಾಲ್ ಬಳಿ ಅರೆಸ್ಟಾದಾಗ ಪಾರ್ವತಿಯೊಂದಿಗೆ ಮದುವೆಯಾಗಿ ಕೇವಲ ಆರು ತಿಂಗಳಾಗಿತ್ತಷ್ಟೇ. ಭಾವುಕ ಮನಸ್ಸಿನ ಪಾರ್ವತಿ ಮಲೆ ನಾಡಿನ ಕಾಡುಗಳಲ್ಲಿ ಸಿಕ್ಕ ಹಕ್ಕಿಗರಿ, ಹೂಗಳನ್ನು ಜೈಲಿ ನಲ್ಲಿದ್ದ ರಮೇಶ್‌ಗೆ ಬರ್ತ್‌ಡೇ ದಿನದ ಶುಭಾಶಯ ತಿಳಿಸಿ ಕಳುಹಿಸಿದ್ದು ಈಗಲೂ ರಮೇಶ್ ಡೈರಿಯಲ್ಲಿದೆ. ಅದೇ ಡೈರಿಯ ಬೇರೆ ಪುಟಗಳಲ್ಲಿ 2003 ರ ನವೆಂಬರ್ 17ರಂದು ಪೊಲೀಸರಿಂದ ಈದುವಿನಲ್ಲಿ ಹತ್ಯೆಯಾದ ಪಾರ್ವತಿ-ಹಾಜಿಮಾರ ಬಗ್ಗೆ ಹಾಗೂ ಮಲೆನಾಡಿನ ಬಗ್ಗೆ ರಮೇಶ್ ಬರೆದಿಟ್ಟುಕೊಂಡಿರುವ ಪದ್ಯಗಳೂ ಇವೆ.

ನರಹಂತಕ ಪೋಲೀಸರ
ಗುಂಡಿಗೆ ಬಲಿಯಾಗಿ ಹೋದ॥
ಹಾಜಿಮಾ, ಪಾರ್ವತಿ ನಿಮಗೆ
ತುಂಬು ಹೃದಯದಾ ವಂದನೆ
-ಕಂದಮ್ಮಗಳಿರಾ॥

ಯಾವ ತಾಯಿ ಹೆತ್ತಾ ಮಕ್ಕಳು
ಯಾವ ತಂದೆ ಒಡಲಾ ಮಕ್ಕಳು॥
ಮುದ್ದಿನ ಅರಗಿಣಿಗಳಂತ
ಎಂಥಾ ಚಂದಾ ನಿಮ್ಮ ಗುಣ
ಏನು ಹಿತ ನಿಮ್ಮಾ ನುಡಿ॥



ಹೆಜ್ಜೆ ಸಪ್ಪಳ ಕೇಳಿದಾಗ
ಎಲೆಗಳ ಸದ್ದಾದಾಗ॥
ಸೊಪ್ಪು ಸೆದೆ ಕೊಯ್ಯುವಾಗ
ಅಡಿಕೆ ಸಿಪ್ಪೆ ಸುಲಿಯುವಾಗ॥
ತುತ್ತು ಅನ್ನ ತಿನ್ನುವಾಗ
ಕಂದಾ ಅಮ್ಮಾ ಅನ್ನುವಾಗ॥
ನಿಮ್ಮ ನೆನಪು ಬಂದು ಕರುಳು ಹಿಂಡಿತು
-ಕಂದಮ್ಮಗಳಿರಾ॥
ದುಃಖ ಉಕ್ಕಿ ತಾಳದಾಯಿತು

ತಲೆಗೆ ಎಣ್ಣೆ ಕೇಳಲಿಲ್ಲ
ಮುಡಿಗೆ ಹೂವು ಕೋರಲಿಲ್ಲ॥
ಅಂದ ಚಂದ ಬಟ್ಟೆಗಳ
ಬಯಸಿದ್ದಂತು ಕಾಣಲಿಲ್ಲ॥
ಒಡವೆ ತೊಡುವ ಬಯಕೆ
ನಿಮ್ಮ ಬಳಿ ಸುಳಿಯದ ಮಾತಾಯ್ತು॥
ಅದೆಷ್ಟು ಸರಳ ನಡತೆ ನಿಮ್ಮದೂ
-ಕಂದಮ್ಮಗಳಿರಾ॥


ಚಂದಾಮಾಮ ಕಥೆಗಳಂತೆ
ದೋಚುವವರ ಗುಟ್ಟು ಹೇಳಿ॥
ಮುದ್ದು ಮುದ್ದು ಮಾತಿನಿಂದ
ಬುದ್ಧಿ ಹೇಳಿ ಧೈರ್ಯ ಹೇಳಿ॥
ದಿಕ್ಕೆಟ್ಟ ನಮ್ಮ ಬದುಕಿನಲ್ಲಿ
ಹೊಸ ಆಸೆ ತುಂಬಿದಿರಿ
ಅದೇನು ಶಕ್ತಿ ನಿಮ್ಮ ಮಾತಲೀ
ಕೇಳೋ ಬಯಕೆ ತಡೆಯದಾಗಿದೆ
-ಕಂದಮ್ಮಗಳಿರಾ॥



ನಕ್ಸಲೈಟ್ಸು ಅಂದಾರೆ
ನಿಮ್ಮಂಥಾ ಮಕ್ಕಳೇನು॥
ಇಂಥಾ ಚಂದ ಗುಣದ ಮಕ್ಕಳ
ನಕ್ಸಲೈಟ್ರು ಅನ್ನೋದಾದ್ರೆ
ನಮ್ಮ ಹೊಟ್ಟೆಲುಟ್ಟೋ ಮಕ್ಕಳಿಗೆಲ್ಲಾ
-ಕಂದಮ್ಮಗಳಿರಾ॥
ನಕ್ಸಲೈಟು ಹೆಸರು ಇಡುವೆವು
-ಕಂದಮ್ಮಗಳಿರಾ॥

-ರಮೇಶ್





ನಕ್ಸಲ್ ರಮೇಶ್
ಎಲ್ಲಿಗೆ ಪಯಣ?

ಕರ್ನಾಟಕದ ಮಾವೋವಾದಿ ನಕ್ಸಲ್ ಮುಖಂಡ ರಮೇಶ್ ಜೈಲಿನಿಂದ ಹೊರಬಂದಿದ್ದಾರೆ. ಯಾವ ರಮೇಶ್‌ನ ಹೆಸರು ಕೇಳಿದರೆ ರಾಯಚೂರಿನ ಕ್ರೂರಿ ಭೂಮಾಲೀಕರು, ಖದೀಮರು ನಡುಗುತ್ತಿದ್ದರೋ, ಪೊಲೀಸರೂ ಹಿಂಜರಿಯುತ್ತಿದ್ದರೋ, ಮುಖವನ್ನೇ ನೋಡಿರದಿದ್ದರೂ ಪತ್ರಕರ್ತರು ಏನೇನೊ ಕಲ್ಪಿಸಿಕೊಂಡು ಬರೆಯುತ್ತಿದ್ದರೊ ಅಂತಾ ರಮೇಶ್ ಈಗ ಬಹಿರಂಗವಾಗೇ ಕಾಣಿಸಿಕೊಂಡಿದ್ದಾರೆ. ಜೂನ್ 22 ರ ಶನಿವಾರ ಜೈಲಿನಿಂದ ಬಿಡುಗಡೆಯಾಗಿ ಹೊರಬಂದ ತಕ್ಷಣ ರಾಯಚೂರಿನಲ್ಲೇ ಒಂದು ದೀರ್ಘ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ್ದಾರೆ.

ಸಾಧಾರಣ ಎತ್ತರ-ಮೈಕಟ್ಟಿನ, ಗುಂಗುರು ಕೂದಲಿನ ರಮೇಶ್ ಸದಾ ಹಸನ್ಮುಖಿ. ಸ್ವಚ್ಛನಗು. ಆದರೆ ರಾಜಕೀಯ, ಸಿದ್ಧಾಂತಗಳ ಪ್ರಶ್ನೆ ಬಂದರೆ ಅಷ್ಟೇ ಹರಿತ ಮಾತುಗಾರ. ಯಾವ ಪೊಲೀಸರು 'ಕೈಗೆ ಸಿಕ್ಕ ಕೂಡಲೇ ಗುಂಡಿಕ್ಕಬೇಕೆಂದು' ಹುಡುಕುತ್ತಿದ್ದರೋ ಅದೇ ನಕ್ಸಲೈಟ್ ರಮೇಶ್ ರಾಯಚೂರಿನ ಬಡ ರೈತರ, ಮುಗ್ಧ ಮಕ್ಕಳ ಪಾಲಿಗೆ ರಮೇಶಣ್ಣ ಆಗಿದ್ದವರು.

ನಿನ್ನೆಯ ಪತ್ರಿಕಾಗೋಷ್ಠಿಯಲ್ಲಿ ಎಲ್ಲರೂ ರಮೇಶರನ್ನು ಕೇಳಿದ್ದು ಒಂದೇ ಮುಖ್ಯ ಪ್ರಶ್ನೆ "ಮುಂದೆ ನೀವೇನು ಮಾಡುತ್ತೀರಿ?"

ರಮೇಶ್ ಮತ್ತೆ ಕೋವಿ ಕೈಗೆ ತಗೊಂಡು ಮಲೆನಾಡಿನ ಕಾಡಿಗೆ ನಡೆದು ತನ್ನ ಇತರ ಸಂಗಾತಿಗಳನ್ನು ಸೇರಿಕೊಳ್ಳುತ್ತಾರಾ, ಅಥವಾ ಸುಮ್ಮನಿದ್ದು ಬಿಡುತ್ತಾರಾ, ಇಲ್ಲಾ ಮುಖ್ಯ ವಾಹಿನಿಯಲ್ಲಿದ್ದುಕೊಂಡೇ ಕ್ರಾಂತಿಕಾರಿ ರಾಜಕೀಯ ಚಟುವಟಿಕೆ ನಡೆಸಲಿದ್ದಾರಾ ಎಂಬುದೇ ಬಹುತೇಕರಿಗಿರುವ ಕುತೂಹಲ.



ಪೊಲೀಸರೂ ಇದಕ್ಕೆ ಹೊರತಲ್ಲ, ರಾಯಚೂರು ಪೊಲೀಸರು ರಮೇಶ್ ಮತ್ತು ಮಾವೋವಾದಿ ಚಳವಳಿ ಬಗ್ಗೆ ಎಷ್ಟು ಭಯಭೀತರಾಗಿದ್ದಾರೆಂದರೆ ಜೈಲಿಂದ ಹೊರಬಂದ ರಮೇಶರನ್ನು ಗ್ರಾಮಾಂತರ ಠಾಣೆಗೆ ಕರೆಸಿ "ನೀವು ಮತ್ತೆ ರಾಯಚೂರಿಗೆ ಮಾತ್ರ ಬರಬೇಡಿ, ಬೇಕಿದ್ದರೆ ಮಲೆನಾಡಿಗೆ ಹೋಗಿಬಿಡಿ" ಎಂದು ಪುಕ್ಕಟ್ಟೆ ಸಲಹೆ ಕೊಟ್ಟಿದ್ದಾರೆ ಡಿವೈಎಸ್‌ಪಿ ಯಂಕಪ್ಪ! ಅದೂ ಎಸ್ಪಿ ಹಿತೇಂದ್ರರವರ ಸಮ್ಮುಖದಲ್ಲೇ! ನಂತರ ಹಿತೇಂದ್ರ "ಯಾವ ಹೋರಾಟನೇ ಆಗಲಿ, ಯಾಕ್ರಿ ಮಾಡಬೇಕು?" ಅಂದಿದ್ದಾರೆ. ಇದು ನಮ್ಮ ಪೊಲೀಸಿನವರ ಮೆಂಟಾಲಿಟಿ.

ಅದು ಹೋಗಲಿ, ಈಗಲಾದರೂ ರಾಯಚೂರಿನಲ್ಲಾಗಲಿ ಅಥವಾ ಮಲೆನಾಡಿನಲ್ಲಾಗಲಿ ಸದ್ಯದ ಪರಿಸ್ಥಿತಿಯಲ್ಲಿ ಜನರ ಬದುಕಿನಲ್ಲಿ ಏನಾದರೂ ಬದಲಾವಣೆ ಕಂಡುಬಂದಿದೆಯಾ

"ಹಸಿವಿನ ಸಂಕಟ ಏನಂತ ನನಗೆ ಗೊತ್ತು"

ಸಂದರ್ಶನ

ಲಂಕೇಶ್: ಮತ್ತೆ ಕರ್ನಾಟಕದ ಹೋರಾಟದ ರಾಜಕೀಯಕ್ಕೆ ಮರಳುವುದಾಗಿ ಘೋಷಿಸಿದ್ದೀರಿ?

ರಮೇಶ: (ನಿಧಾನವಾಗಿ) ಹೋರಾಟಗಳು ಬಹಳ ಆಗಿವೆ. ಈಗಲೂ ಬಹಳ ಜನ ಹೋರಾಟಗಳ ಬಗ್ಗೆ ಮಾತಾಡ್ತಿದ್ದಾರೆ. ನಾನು ಹೇಳಿದ್ದು ಈ ತರದ ಹೋರಾಟ ಅಲ್ಲ, ಕ್ರಾಂತಿಕಾರಿ ಹೋರಾಟದ ಬಗ್ಗೆ. ಅಂತಾ ಹೋರಾಟಕ್ಕೆ ಇನ್ನೊಂದು ಪರ್ಯಾಯ ಪದ ಇದೆ, ಗೊತ್ತಾ?

ಪ್ರಶ್ನೆ: ನೀವೇ ಹೇಳಿ....

ರಮೇಶ್: ಅದು ನಕ್ಸಲೈಟ್ ಹೋರಾಟ.. ಇವತ್ತು ಅನ್ಯಾಯ, ಅತ್ಯಾಚಾರ ಎದುರಿಸಿ ಹೋರಾಡೋದು ನಕ್ಸಲೈಟರು ಮಾತ್ರ. ನಾನು ಚಳವಳಿಯ ಭಾಗವಾಗೇ ಬೆಳೆದವನು. ಆ ಕಾರಣಕ್ಕಾಗೇ ಅರೆಸ್ಟ್ ಆಗಿ ಜೈಲಿನಲ್ಲಿದ್ದವನು. ಮುಂದೆ ಸಹ ನಾನು ಕರ್ನಾಟಕದ ಜನರ ಪರವಾಗಿ ದನಿ ಎತ್ತುತ್ತೇನೆ.

ಪ್ರಶ್ನೆ: ಬಳ್ಳಾರಿ ಗಣಿ ಮಾಲೀಕರಿಂದ ನಕ್ಸಲರು ಹಣ ವಸೂಲಿ ಮಾಡಿದ್ದಾರೆಂದು ದಳ-ಬಿಜೆಪಿಗಳು ಆರೋಪಿಸಿದ್ದಾರಲ್ಲ?

ರಮೇಶ್: ಇದು ಸುಳ್ಳು, ಕರ್ನಾಟಕವನ್ನು ಲೂಟಿ ಹೊಡೆಯುತ್ತಿರುವ ಅವರೇ ಹಣ-ಹೆಂಡದ ರಾಜಕೀಯ ಮಾಡಲು, ಹಣ ಮಾಡಿಕೊಳ್ಳಲು ವಸೂಲಿ ಮಾಡುತ್ತಿದ್ದಾರೆ. ನಕ್ಸಲೈಟರೂ ಅವರ ಪ್ರಭಾವವಿರುವೆಡೆ ಲೆವಿ (ತೆರಿಗೆ) ಸಂಗ್ರಹಿಸುತ್ತಾರೆ ನಿಜ. ಆದರೆ ಬಳ್ಳಾರಿಯಲ್ಲಿ ಮಾವೋವಾದಿ ಚಳವಳಿ ಇಲ್ಲ, ಅಷ್ಟೇ ಅಲ್ಲ ನಮ್ಮದು ನಿಷೇಧಿತ ರಾಜಕೀಯ ಪಕ್ಷವಾಗಿರುವುದರಿಂದ ನಮಗೆ ಲೆವಿ ಕೊಟ್ಟವರು ಯಾವತ್ತೂ ಹೇಳಿಕೊಳ್ಳುವುದಿಲ್ಲ, ಹಾಗೆ ಹೇಳಿದರೆ ಪೊಲೀಸರು ಬಿಡುತ್ತಾರಾ? ನಮಗೆ ಸಿಂಫಥೈಸರ್‌ಗಳು ಹಣ ಕೊಡುತ್ತಾರೆ ಅಷ್ಟೆ.

ಪ್ರಶ್ನೆ: ನೀವು ಜೈಲಿನಲ್ಲಿರಬೇಕಾದ ವ್ಯಕ್ತಿ ಎಂದು ಕರ್ನಾಟಕ ಸರ್ಕಾರ ನಿರ್ಧರಿಸಿದ್ದು ಯಾಕೆ?

ರಮೇಶ್: ಅದು ಅಷ್ಟು ಸತ್ಯ ಅಲ್ಲ!

ಪ್ರಶ್ನೆ: ಅಂದರೆ?

ರಮೇಶ್: ಸರ್ಕಾರಕ್ಕೆ ನಮ್ಮನ್ನು ಅರೆಸ್ಟ್ ಅಲ್ಲ, ಕೊಲೆ ಮಾಡಿಸುವ ಉದ್ದೇಶವಿತ್ತು, ರಾಯಚೂರು ಪೊಲೀಸರು ಎಸ್‌ಎಲ್‌ಆರ್ ಸ್ಟೆನ್‌ಗನ್ ಹಿಡಿದುಕೊಂಡೇ ನಮ್ಮನ್ನು ಹುಡುಕುತ್ತಿದ್ದರು. ಸಿಕ್ಕಿಬಿದ್ದರೆ ಕೊಲೆಗೀಡಾಗುತ್ತೀರೆಂದೂ ನಮ್ಮ ಪಾರ್ಟಿ ಎಚ್ಚರಿಕೆ ಸಹ ನೀಡಿತ್ತು. ಆದರೆ ಆಕಸ್ಮಾತಾಗಿ ಗಡಿ ಪ್ರದೇಶದಲ್ಲಿ ಆಂಧ್ರ ಪೊಲೀಸರಿಗೆ ನಾವು ಸಿಕ್ಕಿದೆವು. ಅವರಿಗೆ ನಮ್ಮ ಬಗ್ಗೆ ಗೊತ್ತಾಗುವ ಮೊದಲೇ ಅರೆಸ್ಟ್ ವಿಚಾರ ಪೇಪರುಗಳಲ್ಲಿ ಬಂತು. ಹಾಗಾಗಿ ಪೊಲೀಸರಿಗೆ ನಮ್ಮನ್ನು ಗುಂಡಿಕ್ಕಿ ಕೊಲ್ಲಲು ಅವಕಾಶ ಸಿಗಲಿಲ್ಲ.

ಕರ್ನಾಟಕದಲ್ಲಿ ಅದರಲ್ಲೂ ಉತ್ತರ ಕರ್ನಾಟಕದ ರಾಯಚೂರಿನಲ್ಲಿ ನಮ್ಮ ಪಕ್ಷ ಜನರಲ್ಲಿ ಕ್ರಾಂತಿಕಾರಿ ರಾಜಕೀಯ ಪ್ರಜ್ಞೆ ಬೆಳೆಸುತ್ತಿದ್ದುದನ್ನು ಒಂದು ಅಪಾಯಕಾರಿ ಬೆಳವಣಿಗೆ ಎಂದು ಭಾವಿಸಿ ಪೊಲೀಸರು ನಮ್ಮ ಚಂದ್ರಬಂಡಾ ದಳವನ್ನು ಮುಗಿಸಲು ಹೊರಟಿದ್ದರು.

ಜನರಲ್ಲಿ ಹೋರಾಟದ ರಾಜಕೀಯ ಪ್ರಜ್ಞೆ ಬೆಳೆಸುವವರ ಬಗ್ಗೆ ಸರ್ಕಾರಗಳಿಗೆ ಅಸಹನೆ ಇರುತ್ತದೆ. ಆ ಕಾರಣಕ್ಕಾಗೇ ನಾನು ಜೈಲಿಗೆ ಹೋಗಬೇಕಾಯಿತು.

ಪ್ರಶ್ನೆ: ಕರ್ನಾಟಕದ ಜೈಲುಗಳು ಹೇಗಿವೆ?

ರಮೇಶ್: ನಾನು 3 ವರ್ಷ ಆಂಧ್ರದ ಜೈಲಿನಲ್ಲಿದ್ದೆ. ಅಲ್ಲಿ ರಾಜಕೀಯ ಖೈದಿಗಳಿಗೆ ಪ್ರತ್ಯೇಕ ಬ್ಯಾರಕ್ಕುಗಳಿವೆ. ಊಟ, ನೀರು, ಸ್ನಾನ ಮುಂತಾದ ಕನಿಷ್ಟ ಸೌಲಭ್ಯಗಳಿದ್ದವು. ಆದರೆ ಕರ್ನಾಟಕದ ಜೈಲಿಗೆ ಬಂದ ಮೇಲೆ ನರಕ ಸದೃಶ ಅನುಭವವಾಯಿತು. ಊಟ; ನೀರು, ಬೆಳಕು, ಶುಚಿತ್ವ ಒಂದೂ ಇರಲಿಲ್ಲ, ಕೇಳಿದರೆ 'ನೋಡು ಜಾಸ್ತಿ ಮಾತಾಡಿದ್ರೆ ಖಾಕಿ ಪವರ್ ಏನಂತ ತೋರಿಸಬೇಕಾಗುತ್ತೆ' ಅಂತಾ ಬೆದರಿಸುತ್ತಿದ್ದರು. ಜೈಲು ಕಮಿಟಿ ಮೆಂಬರ್ ಆಗಿದ್ದ ಡಿಸಿಯೊಬ್ಬ "ಏನ್ರಿ ಖೈದಿಗಳಿಗೆ ಊಟಕ್ಕೆ ಕಾರದಪುಡಿ, ತರಕಾರಿ, ಉಪ್ಪು ಎಲ್ಲಾ ಕೊಡ್ತೀರಲ್ರಿ. ಅದಕ್ಕೆ ಇವರಿಗೆ ಜೈಲಿಂದ ಆಚೆ ಹೋಗೋಕೆ ಇಷ್ಟ ಇಲ್ಲ ಅಂತಾ ಕಾಣುತ್ತೆ" ಎಂದಿದ್ದ. ಅಧಿಕಾರಿಗಳ ಕ್ರೌರ್ಯಕ್ಕೆ ಇಂತಾ ನೂರು ಉದಾಹರಣೆ ಕೊಡಬಲ್ಲೆ, ಕುಮಾರ್ ಸಮತಳ, ಉಜ್ಜನಿಗೌಡ, ಮನೋಹರ್, ನಾನು, ಗೋಪಾಲ್ ಇನ್ನಿತರ ಖೈದಿಗಳು ಜೈಲ್ ಮ್ಯಾನ್ಯುಯಲ್ ಪ್ರಕಾರ ಸವಲತ್ತು ಕೇಳಿ ಅನೇಕ ಹೋರಾಟ ನಡೆಸಿ ದೌರ್ಜನ್ಯ ಎದುರಿಸಿದ್ದರಿಂದಾಗಿ ಇವತ್ತು ರಾಯಚೂರು, ಗುಲ್ಬರ್ಗಾ, ಬೆಳಗಾಂ ಜೈಲುಗಳಲ್ಲಿ ಖೈದಿಗಳಿಗೆ ಲೈಟು, ನೀರು, ತಕ್ಕಮಟ್ಟಿನ ಊಟ ಸಿಗುವಂತಾಗಿದೆ.

ಪ್ರಶ್ನೆ: ರಾಯಚೂರು ಪೊಲೀಸರು ಗುಂಡಿಟ್ಟು ಕೊಂದ ಭಾಸ್ಕರ ಯಾರು? ಅವರನ್ನು ಏಕೆ ಕೊಲ್ಲಲಾಯಿತು?

ರಮೇಶ್: ಭಾಸ್ಕರ ಚಂದ್ರಬಂಡಾ ದಳಂನ ಓರ್ವ ಮೆಂಬರ್ ಆಗಿದ್ದರು. ಪತ್ನಿ ಸುಮಕ್ಕರೊಂದಿಗೆ ಅವರೂ ನಮ್ಮ ಕ್ರಾಂತಿಕಾರಿ ಹೋರಾಟದಲ್ಲಿ ಭಾಗವಹಿಸಿದ್ದರು. ಆ ಕಾರಣಕ್ಕಾಗೇ ಅವರನ್ನು ಸರ್ಕಾರ ಕೊಲೆ ಮಾಡಿಸಿತು.

ಪ್ರಶ್ನೆ: ನಿಮ್ಮ ಹೋರಾಟದ ಗುರಿ ಏನು?

ರಮೇಶ್: ಭಾರತದಲ್ಲಿ **New Democratic Revolution** ಆಗಬೇಕೆಂಬುದೇ ಮಾವೋವಾದಿಗಳ ಆಶಯ. ನಮ್ಮ ಜನರನ್ನು ಶೋಷಿಸುತ್ತಿರುವ ಅರೆ ಊಳಿಗಮಾನ್ಯತೆ, ಅರೆ ವಸಾಹತುಶಾಹಿಯನ್ನು ನಿರ್ಮೂಲನೆಗೊಳಿಸಿ ನೈಜ ಪ್ರಜಾಪ್ರಭುತ್ವ ತರಬೇಕು. ಉತ್ತರ ಕರ್ನಾಟಕದಲ್ಲಂತೂ ಜಮೀನ್ದಾರಿ ಶೋಷಣೆಯಿಂದ ಜನ ತತ್ತರಿಸುತ್ತಿದ್ದಾರೆ. ಹಾಗಾಗಿ ನಾವು ಅಲ್ಲಿ ಹೋರಾಟ ಶುರುಮಾಡಿದ್ದೆವು.

ಪ್ರಶ್ನೆ: ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸರ್ಕಾರ ಸಾವಿರಾರು ಕೋಟಿ ಖರ್ಚು ಮಾಡುತ್ತಿದೆಯಲ್ಲ!

ರಮೇಶ್: ಇದು ನಿಜ. ಆದರೆ ಎಲ್ಲಾ ಹಣ ಅವರಲ್ಲೇ ಹಂಚಿಕೆ ಆಗುತ್ತಿದೆ. ಜನರಿಗೇನು ಸಿಕ್ಕಿದೆ ಹೇಳುತ್ತೀರಾ? ಪತ್ರಿಕೆಗಳು .... ನೀವೇ ಅಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಬೇಕಾದಷ್ಟು ಬರೆದಿದ್ದೀರಲ್ಲವಾ....

ಪ್ರಶ್ನೆ: ಮುಂದೆ ಏನು ಮಾಡ್ತೀರಿ?

ರಮೇಶ್: ನಾನು ಕ್ರಾಂತಿಕಾರಿ ರಾಜಕೀಯ ಹೋರಾಟ ಮಾಡಿಕೊಂಡೇ ಬೆಳೆದವನು. ಬಡವರ ಜೊತೆಗೇ ಇದ್ದವನು. ಹಸಿವಿನ ಸಂಕಟ ಏನೂಂತ ನನಗೆ ಗೊತ್ತು. ಇವೆಲ್ಲಾ ಪರಸ್ಪರ ಜೊತೆಗಿರುವಂತವು. ನಾನು ಇದರಿಂದ ದೂರ ಇರಲಾರೆ.... ■

ಜೀವಿಸುವುದು ಮತ್ತು ದೇವರನ್ನು ಅರಿಯುವುದು ಒಂದೇ.

ಜೈಲರ್ ಲಕ್ಷ್ಮೀನಾರಾಯಣನ ರ್‍ಯಾಡಿಸಂ

ಗುಲ್ಬರ್ಗಾ ಜೈಲಿನಲ್ಲಿ ಖೈದಿಗಳ ಸಾವು, ಹಲ್ಲೆ ದೌರ್ಜನ್ಯಗಳದ್ದು ನಿತ್ಯ ಪರಿಪಾಟ. ಅಲ್ಲಿನ ಜೈಲರ್ ಆಗಿ ಲಕ್ಷ್ಮೀನಾರಾಯಣ ಬಂದ ಮೇಲೆ ಇದು ಜಾಸ್ತಿಯಾಗಿದೆ.




ಕಳೆದ ವರ್ಷದ ಡಿಸೆಂಬರ್‌ನಲ್ಲಿ ಅದೇ ಜೈಲಿನಲ್ಲಿದ್ದ ಕೊಲೆ ಆರೋಪಿ ಸಿದ್ದಪ್ಪ ಎಂಬುವನನ್ನು ಜೈಲಿನೊಳಗೇ ಕೊಲೆ ಮಾಡಲಾಗಿತ್ತು. ಸಹಖೈದಿಗಳಾದ ರವಿಗೌಡ ಹಾಗೂ ಮುಷ್ಕಿ ಮಲ್ಲಪ್ಪ ಎಂಬುವವರು 1 ಲಕ್ಷ ರೂ.ಗೆ ಸುಪಾರಿ ಪಡೆದು ಸಿದ್ದಪ್ಪನನ್ನು ಜೈಲಿನ ದನದ ಕೊಟ್ಟಿಗೆಯಲ್ಲೇ ಬಡಿದು ಕೊಂದು ಹಾಕಿದ್ದರು. ಜೈಲು ಸಿಬ್ಬಂದಿ-ಡಾಕ್ಟರ್‌ಗಳು ಈ ಸತ್ಯ ಗೊತ್ತಾದ ಮೇಲೂ ತುಟಿಪಿಟಿಕ್ ಎಂದಿಲ್ಲ.

ಇದು ಗುಲ್ಬರ್ಗಾ ಜೈಲಿನಲ್ಲಿರುವ ಸ್ಥಿತಿ. ಈ ಲಕ್ಷ್ಮೀನಾರಾಯಣ ಎಂಬ ಸ್ಯಾಡಿಸ್ಟ್ ಜೈಲರ್ ಆಗಿ ಬಂದಮೇಲೆ ಮೊನ್ನೆ ಮೇ ತಿಂಗಳಲ್ಲಿ ಲಿಂಗಪ್ಪ ಎಂಬ ಖೈದಿಗೆ ಭೀಕರವಾಗಿ ಹೊಡೆದು ಕೈ ಮುರಿಯಲಾಗಿದೆ. ಕೇವಲ 15 ದಿನಗಳ ಹಿಂದೆ ಇನ್ನೊಬ್ಬ ಮಾನಸಿಕ ಅಸ್ವಸ್ಥ ಖೈದಿಯ ಕೈಯನ್ನು ಹೊಡೆದು ಮುರಿದು ಹಾಕಿದ್ದಾರೆ ಜೈಲು ಸಿಬ್ಬಂದಿ. ಜೈಲರ್ ಲಕ್ಷ್ಮೀನಾರಾಯಣನ ಈ ಗೂಂಡಾಗಿರಿ ಅಪರಾಧ ಎನಿಸಿಕೊಳ್ಳುವುದೇ ಇಲ್ಲವೆ? ಇದು ತನಿಖೆಗೆ ಯೋಗ್ಯವಾದ ವಿಚಾರವಲ್ಲವೆ ಎಂಬುದು ಗುಲ್ಬರ್ಗಾ ಜೈಲಿನ ಖೈದಿಗಳು ಮನವಿ. ಲಕ್ಷ್ಮೀನಾರಾಯಣನ ಗಾಂಚಲಿಗಳು ಹೀಗೇ ಮುಂದುವರೆದರೆ ಸದ್ಯದಲ್ಲೇ ಗುಲ್ಬರ್ಗಾ ಜೈಲಿನಲ್ಲಿ ಖೈದಿಗಳ ಬಂಡಾಯ ಏಳುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ನಕ್ಸಲೈಟ್ ರಮೇಶ್ ಈ ದೌರ್ಜನ್ಯಗಳನ್ನು ಖಂಡಿಸಿ ಉಪವಾಸ ಮುಷ್ಕರ ನಡೆಸಿದ್ದರು.

ಪಂಚಾಯ್ತಿ ಕಿತ್ತಾಟ: ಹೆಣವಾದ ಜವರಪ್ಪ!

ಸಿದ್ಧರಾಮಯ್ಯರ ಕ್ಷೇತ್ರದಲ್ಲಿ ಹೆಣವೊಂದು ಬಿದ್ದಿದೆ. ಅದು ಗ್ರಾಮ ಪಂಚಾಯ್ತಿ ಅಧ್ಯಕ್ಷ ಜವರಪ್ಪನ ಹೆಣ. ಈತ ಜೆಡಿಎಸ್‌ಗೆ ಸೇರಿದ ಪುಂಡ ರಾಜಕಾರಣಿ. ಶುಕ್ರವಾರ ಮಧ್ಯರಾತ್ರಿ ಮಚ್ಚು ದೊಣ್ಣೆಗಳಿಗೆ ಬಲಿಯಾಗಿ



ಹೋದ ಈತನನ್ನು ಕೊಂದಿರುವ ಆರೋಪ ರವಿ ಎಂಬ ಗ್ರಾಮ ಪಂಚಾಯ್ತಿ ಸದಸ್ಯನ ಮೇಲಿದೆ. ಅದಕ್ಕೆ ಪುಷ್ಟಿ ಎಂಬಂತೆ ಈ ರವಿ ಗಾಯಬ್ ಆಗಿದ್ದಾನೆ. ಈತ ಎಬಿಪಿಜೆಡಿಯ ಸದಸ್ಯ, ಸಿದ್ಧರಾಮಯ್ಯನವರ ಭಂಟ.

ಮೈಸೂರಿನಿಂದ 14 ಕಿ.ಮೀ. ದೂರದ ಕಡಕೊಳ ಗ್ರಾಮದಲ್ಲಿ ನಡೆದ ಈ ಭೀಕರ ಕೊಲೆಗೆ ಕ್ಷುಲ್ಲಕ ಪಂಚಾಯ್ತಿ ರಾಜಕಾರಣವೇ ಕಾರಣ ಎಂಬುದು ನೂರಕ್ಕೆ ನೂರರಷ್ಟು ಸತ್ಯವಾಗಿದೆ. ಮೊನ್ನೆ ಶುಕ್ರವಾರ (21 ರಂದು) 'ಯಾರೋ' ನಾಲ್ಕು ಜನ ಬಂದು, "ಸ್ವಲ್ಪ ಮಾತಾಡೋದಿದೆ" ಎಂದು ಜವರಪ್ಪನನ್ನು ಕರೆದು ಕೊಂಡು ಹೋಗಿದ್ದಾರೆ. ಮರುದಿನ ಮುಂಜಾನೆ ಶನಿವಾರ ಯೋಜಿತ ಹೊಸ ಬಡಾವಣೆಯ ಜಾಗದಲ್ಲಿ ಜವರಪ್ಪ ರಕ್ತದ ಮಡುವಿನಲ್ಲಿ ಮಲಗಿದ್ದ.

ಮೈಸೂರು


ಹಿನ್ನೆಲೆ!

ಸರಗಳ್ಳತನ, ಕೊಲೆ ಬೆದರಿಕೆ ಹೀಗೆ 11 ಕೇಸುಗಳು ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಜವರಪ್ಪನ ವಿರುದ್ಧ ದಾಖಲಾಗಿದ್ದವು. ಕಳೆದ ಎಲೆಕ್ಷನ್‌ನಲ್ಲಿ ಅಚಾನಕ್ ಆಗಿ ಜೆಡಿಎಸ್‌ನಿಂದ ಈ ಜವರಪ್ಪ ಗೆದ್ದುಬಿಟ್ಟ. ಎಬಿಪಿಜೆಡಿಯ ಬಹುಮತವಿದ್ದಾಗ್ಯೂ ಈ ಜವರಪ್ಪ ಹೇಗೋ ಅಧ್ಯಕ್ಷನಾಗಿಬಿಟ್ಟ ನೋಡಿ, ಆವಾಗಲೇ ಈತನ ದೌಲತ್ತು ಡಬಲ್ ಆಯ್ತು.

ಈತನದೇ ನಾಯ್ಕ ಜಾತಿಗೆ ಸೇರಿದ ಎಬಿಪಿಜೆಡಿಯ ರವಿಯೇ ಒಂದಿಷ್ಟು ವಿರೋಧ ಮಾಡುತ್ತಿದ್ದುದು ಬಿಟ್ಟರೆ, ಇನ್ಯಾರೂ ಜವರಪ್ಪನ ತಂಟೆಗೆ ಹೋಗುತ್ತಿರಲಿಲ್ಲ.

ಕಳೆದ ತಿಂಗಳು ನಡೆದ ಗ್ರಾಮಸಭೆಯಲ್ಲಿಯೇ ಈ ಕೊಲೆಯ ಮುನ್ಸೂಚನೆ ದೊರೆತಂತಾಗಿತ್ತು. ಕಡಕೊಳ ಗ್ರಾಮದ ಬಳಿ ನಿರ್ಮಿಸಬೇಕೆಂದಿದ್ದ ಹೊಸ ಬಡಾವಣೆಯ ಗುತ್ತಿಗೆಯನ್ನು ಖಾಸಗಿಯವರಿಗೆ ಕೊಡುವ ಪ್ರಸ್ತಾವನೆಯನ್ನು ಗ್ರಾ.ಪಂ. ಅಧ್ಯಕ್ಷ ಜವರಪ್ಪ ಮಂಡಿಸಿದ. ರವಿ ನೇತೃತ್ವದ ಎಬಿಪಿಜೆಡಿ ಸದಸ್ಯರು ಅದನ್ನು ವಿರೋಧಿಸಿ ಜವರಪ್ಪನಿಗೆ ಮುಖಭಂಗ ಮಾಡಿದರು.

ಮೊದಲೇ ಜವರಪ್ಪ ಹುಂಬ ಪುಡಾರಿ. ಪರಿಣಾಮವೆಂಬಂತೆ ರವಿಯ ಮೇಲೆ ಹಲ್ಲೆಯಾಯ್ತು. ರವಿಯ ಮನೆ ಮೇಲೆ ಕಲ್ಲು ತೂರಿ ಗಲಾಟೆ ಮಾಡಲಾಯ್ತು. ಯಾರೂ ಏನೂ ಮಾಡುವುದಿಲ್ಲವೆಂದೇ ಜವರಪ್ಪ ತಿಳಿದಿದ್ದ. ಆದರೆ ಎಬಿಪಿಜೆಡಿಯವರು ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರು. ಮೈಸೂರು ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷ ಮರಿಗೌಡ, ಮೈಸೂರು ಅಹಿಂದ ಯುವ ಘಟಕದ ಅಧ್ಯಕ್ಷ ಅಪ್ಪಣ್ಣರ ನೇತೃತ್ವದಲ್ಲಿ ಮೈಸೂರು ಎಸ್ಪಿ ಕಚೇರಿ ಮುಂದೆ ಪ್ರತಿಭಟನೆಯನ್ನು ನಡೆಸಲಾಯ್ತು. ಅಷ್ಟೊತ್ತಿಗೆ ಗಾಬರಿಯಾದ ಜವರಪ್ಪ ಎಲ್ಲೋ ಓಡಿಹೋಗಿಬಿಟ್ಟ. ಇತ್ತ ಕಡಕೊಳ ಗ್ರಾಮ ಪಂಚಾಯ್ತಿಯಲ್ಲಿ ಇದೇ 28 ರಂದು ಜವರಪ್ಪನ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡನೆ ಮಾಡಲು ನಿರ್ಧರಿಸಿದರು. ವಿಷಯ ತಿಳಿದ ಜವರಪ್ಪ ಶುಕ್ರವಾರ (21.7.06) ರಂದು ಕಡಕೊಳದಲ್ಲಿ



ಪ್ರತ್ಯಕ್ಷನಾದ. ಹಿಂದೆ ಅವಮಾನಿತನಾದ ರವಿಗೆ ಸಿಟ್ಟು ನೆತ್ತಿಗೇರಿತ್ತೇನೊ? ಶನಿವಾರ ಮುಂಜಾನೆ ಜವರಪ್ಪನ ಕೊಲೆಯಾಗಿ ಹೋಗಿತ್ತು.

ಈಗ ರವಿ ನಾಪತ್ತೆ!

ಕ್ಷುಲ್ಲಕ ರಾಜಕೀಯ ಜಗಳವೊಂದು ಗ್ರಾಮವೊಂದನ್ನು ರಕ್ತಪಾತದ ಅಂಚಿಗೆ ಹೇಗೆ ಒಯ್ಯುತ್ತದೆ ಎನ್ನುವುದಕ್ಕೆ ಇದು ನಿದರ್ಶನ. ಜಿ.ಟಿ. ದೇವೇಗೌಡ ಮಂತ್ರಿಗಿರಿ ಸಿಗದ ಬೇಜಾರಿನಲ್ಲಿ ಮಲಗಿಯೇ ಇರುತ್ತಾರೆ. ಎಬಿಪಿಜೆಡಿ ಕಟ್ಟುತ್ತೇನೆಂದು ಹೇಳಿ, ಪಾರ್ಟಿ ಕಾರ್ಯಕರ್ತರನ್ನು ಗೊಂದಲಕ್ಕೆ ದೂಡಿದ ಸಿದ್ಧರಾಮಯ್ಯ ಶನಿವಾರ ದೆಹಲಿಯಲ್ಲಿ ಕಾಂಗ್ರೆಸ್ ಸೇರುತ್ತಾರೆ. ಬೇರು ಮಟ್ಟದ ಕಾರ್ಯಕರ್ತರು ಬಡಿದಾಡಿಕೊಂಡು ಸಾಯುತ್ತಲೇ ಇರುತ್ತಾರೆ. ■

ಎಂದು ನೋಡಿದರೆ ತಾನೆ 'ಯಾರೇ ಆಗಲಿ, ಎಲ್ಲೇ ಆಗಲಿ ಯಾಕ್ರಿ ಹೋರಾಟ ಮಾಡಬೇಕು' ಎಂಬ ಎಸ್ಪಿ ಹಿತೇಂದ್ರರ ಪ್ರಶ್ನೆಗೆ ಉತ್ತರ ಸಿಗುವುದು.



ಮಲ್ಲಿಕಾ

ರಾಯಚೂರು ಬದಲಾಗಿಲ್ಲ

1984 ರಲ್ಲಿ ರಚನೆಯಾದ ಕರ್ನಾಟಕ ನಕ್ಸಲೈಟ್ ಪಾರ್ಟಿ ಘಟಕ ತೊಂಬತ್ತರ ದಶಕದಲ್ಲಿ ಬೀದರಿನ ಔರಾದ್, ಗುಲ್ಬರ್ಗಾ ಹಾಗೂ ರಾಯಚೂರಿನಲ್ಲಿ ತನ್ನ ರಾಜಕೀಯ ಹೋರಾಟ ಆರಂಭಿಸಿತ್ತು. ಭೂಮಾಲೀಕರ ಕ್ರೌರ್ಯ, ಶೋಷಣೆಗಳಡಿ ತತ್ತರಿಸುತ್ತಿದ್ದ ಬಡ ರೈತರು, ನಕ್ಸಲೀಯರನ್ನು ಬರಮಾಡಿಕೊಂಡು ಆಶ್ರಯ ಕೊಟ್ಟರೆಂಬುದೇ ಅವರ ಬದುಕಿನ ಸ್ಥಿತಿಯ ಕಷ್ಟಗಳನ್ನು ಹೇಳುತ್ತವೆ. ಪೊಲೀಸರ ಬೆದರಿಕೆ, ಬಂದೂಕು, ಕೇಸ್

ಬಿಳಿದಾಳಿ ಈಶ

ಗಳಿಗೂ ಹೆದರದೆ ಈ ಹಳ್ಳಿಗಳ ಜನ ರಮೇಶ್, ಮನೋಹರ್, ಗೋಪಾಲ್, ಪಾರ್ವತಿ, ಭಾಸ್ಕರ್, ಸುಮಕ್ಕ ಮುಂತಾದವರಿಗೆ ವರ್ಷಾನುಗಟ್ಟಲೆ ಊಟ-ಆಶ್ರಯ ನೀಡಿ ರಕ್ಷಿಸಿಕೊಂಡಿದ್ದರು. ಈ ಬಡ ಭೂಹೀನ ರೈತರ ಪರವಾಗಿಯೇ ಮಾವೋವಾದಿಗಳು ಜೇಗರಕಲ್, ಯಾಪಲದಿನ್ನಿ, ವಡ್ಡೆಪಲ್ಲಿಗಳಲ್ಲಿ ಭೂ ಹೋರಾಟ ನಡೆಸಿ ಜಮೀನು ದಕ್ಕುವಂತೆ ಮಾಡಿದ್ದರು. ಕ್ರೂರ ಭೂಮಾಲೀಕರಾಗಿದ್ದ ವಕ್ಕಪಲ್ಲಿ ಸುದರ್ಶನ ರೆಡ್ಡಿ, ಆತ್ಕೂರು ಸಿದ್ದನಗೌಡ ಮುಂತಾದವರಿಗೆ ಏಟು ಕೊಟ್ಟು ಹುಟ್ಟಡಗಿಸಿದ್ದರು.

ಈಗ ಸರ್ಕಾರದ ದಮನಗಳಿಂದಾಗಿ ಹಾಗೂ ಸ್ವತಃ ನಕ್ಸಲರೇ ಮಲೆನಾಡಿಗೆ ಶಿಫ್ಟ್ ಆಗಿರುವುದರಿಂದ ರಾಯಚೂರು ಭಾಗದಲ್ಲಿ ಮೊದಲಿನಷ್ಟು ನಕ್ಸಲ್ ಚಟುವಟಿಕೆ ಇಲ್ಲವಾಗಿದೆ. ಆದರೆ ವಿಪರ್ಯಾಸ ಏನು ಗೊತ್ತೆ?

ನಕ್ಸಲರಿದ್ದಷ್ಟು ದಿನ ಆಸ್ಪತ್ರೆ, ಶಾಲೆ, ರಸ್ತೆ ಸೇತುವೆ ಎಂದು ಅಭಿವೃದ್ಧಿಯ ಮಾತಾಡುತ್ತಿದ್ದ ಸರ್ಕಾರ ಈಗ ಸುಮ್ಮನಾಗಿಬಿಟ್ಟಿದೆ. ಅದೇ ಮಾತುಗಳೀಗ ಮಲೆನಾಡಿನಲ್ಲಿ ಕೇಳಿಬರುತ್ತಿವೆ. ಇದರಿಂದಾಗಿ ಅಭಿವೃದ್ಧಿ ಕೆಲಸ ಆಗಬೇಕೆಂದರೆ ಅಲ್ಲಿಗೆ ನಕ್ಸಲರು ಬರಬೇಕೆಂಬ ಅರ್ಥ ಬಂತು ತಾನೆ?

ರಾಯಚೂರು, ಗುಲ್ಬರ್ಗಾ, ಬೀದರ್‌ಗಳಲ್ಲಿ ಮೊದಲಿಂದಲೂ ಪ್ರಜಾಸತ್ತಾತ್ಮಕ ಸರ್ಕಾರವೆಂಬುದು ಅಸ್ತಿತ್ವದಲ್ಲಿರಲಿಲ್ಲ. ಈಗ ನಕ್ಸಲರೂ ಇಲ್ಲವಾದ ಕಾರಣ ಲಕ್ಷಾಂತರ ಬಡಜನ ಈಗ ಬೆಂಗಳೂರಿಗೆ ಗುಳೆ ಹೋಗುತ್ತಿದ್ದಾರೆ.

ಇದು ಕಹಿ ಎನಿಸಿದರೂ ಸತ್ಯ.

ಮಲೆನಾಡಿನಲ್ಲಿ ಮಾವೋವಾದಿಗಳು

ಸರ್ಕಾರದ ನೆರವು ಸಿಗದಿದ್ದಾಗಲೂ ತಮ್ಮ ಪಾಡಿಗೆ ಬಡತನದ ಜೀವನ ನಡೆಸಿಕೊಂಡಿದ್ದ ಮಲೆನಾಡಿನ ಅಮಾಯಕ ಅಸಹಾಯಕ ಆದಿವಾಸಿಗಳನ್ನು ಅರಣ್ಯನಾಶಕ್ಕೆ ಅವರೇ ಕಾರಣ ಎಂದು ಸರ್ಕಾರ ಅರಣ್ಯಾಧಿಕಾರಿಗಳನ್ನು ಭೂ ಬಿಟ್ಟು ಹೊರದಬ್ಬಲು ಹೊರಟಾಗ ಆದಿವಾಸಿಗಳ ನೆರವಿಗೆ ಬಂದವರೇ ಮಾವೋವಾದಿ ಪಾರ್ಟಿ ಕಾರ್ಯಕರ್ತರು. ಇವರ ಕೈಲಿ ಬಂದೂಕಿದ್ದವಾದ್ದರಿಂದ ಅಧಿಕಾರಿಗಳೂ ಹೆದರಿದರು. ಆದರೆ ಪೊಲೀಸರು ಹೊಂಚು ಹಾಕಿ ಕಾದು ಮೊದಲು ಪಾರ್ವತಿ-ಹಾಜಿಮಾರನ್ನು ಕೊಂದರು. ನಂತರ ಶಿವಲಿಂಗು ಮತ್ತು ನಕ್ಸಲ್ ನಾಯಕ ಸಾಕೇತ್ ರಾಜನ್‌ರನ್ನು ಮುಗಿಸಲಾಯಿತು. ಇತ್ತೀಚೆಗೆ ಉಮೇಶ್, ಅಜಿತ್‌ರ ಹತ್ಯೆ ಮಾಡಲಾಯ್ತು. ಮಲ್ಲಿಕಾ ಅರೆಸ್ಟಾದರು. ಆದರೂ ನಕ್ಸಲೀಯರ ದನಿ ಪೂರ್ತಿ ಅಡಗಿಸಲಾಗಲಿಲ್ಲ. ಜನ ನಕ್ಸಲರಿಗೆ ಅನ್ನ ಆಶ್ರಯ ಕೊಡುವುದನ್ನು ಪೊಲೀಸರಿಗೆ ತಪ್ಪಿಸಲಾಗಿಲ್ಲ. ಬದಲಾಗಿ ನಕ್ಸಲರೇ ಕೆಲವು ದುಷ್ಟರನ್ನು ಹಿಡಿದು, ಬಡಿದು ಬುದ್ಧಿ ಕಲಿಸಿದ್ದಾರೆ. ಪೊಲೀಸರು ಕಾಡೊಳಗೆ ಎಲ್ಲೆಂದರಲ್ಲಿ ನುಗ್ಗಿ ಸುತ್ತಾಡದಂತೆ ಬೆದರಿಸಲು ಒಮ್ಮೆ ಜೀಪಿಗೇ ಲ್ಯಾಂಡ್ ಮೈನ್ ಇಟ್ಟು ಸ್ಫೋಟಿಸಿದ್ದಾರೆ. ಇದೇ ವೇಳೆ ಮಲೆನಾಡಿನ ಕಾಫಿ, ಏಲಕ್ಕಿ, ಅಡಿಕೆ ಬೆಳೆಗಾರರ ಸ್ಥಿತಿ ಪೂರಾ ಹದಗೆಡುತ್ತಿದೆ. ಜಾಗತೀಕರಣ, ದಲ್ಲಾಳಿ ವ್ಯಾಪಾರಿಗಳ ಸುಲಿಗೆಗೆ ಸಿಕ್ಕು ಸಣ್ಣ ಬೆಳೆಗಾರರು ಪಾಪರ್‌ಗಳಾಗುತ್ತಿದ್ದಾರೆ. ಮತ್ತೊಂದೆಡೆ ಬಡವರ, ಕೂಲಿಕಾರರ ಬವಣೆ, ಶೋಷಣೆಗಳೂ ಕೊನೆಯಿರದಂತೆ ಸಾಗಿವೆ. ಕರಾವಳಿ ಹಾಗೂ ಮಲೆನಾಡಿನಲ್ಲಿ ಮುಸ್ಲಿಮರನ್ನು ಅಟ್ಟಾಡಿಸಿಕೊಂಡು ಬಡಿಯಲಾಗುತ್ತಿದೆ.

ಇವರೆಲ್ಲಾ ನಕ್ಸಲೀಯರನ್ನು ಬೆಂಬಲಿಸುವಂತಾ ವಾತಾವರಣವನ್ನು ಸ್ವತಃ ನಮ್ಮ ಸರ್ಕಾರ ಹಾಗೂ ಪೊಲೀಸರೇ ನಿರ್ಮಿಸುತ್ತಿದ್ದಾರೆ. ಇಂತಾ ಪರಿಸ್ಥಿತಿಯಲ್ಲಿ ನಕ್ಸಲ್ ರಮೇಶರನ್ನು 'ನೀವು ಮುಂದೇನು ಮಾಡುತ್ತೀರಿ' ಎಂದು ಕೇಳುವ ಬದಲಾಗಿ ನಮ್ಮ ಜನ, ಪತ್ರಕರ್ತರು, ಈವನ್ ಪೊಲೀಸರೂ ಕೂಡ: "ನೀವು ಮುಂದೇನು ಮಾಡಬೇಕೆಂದಿದ್ದೀರಿ" ಎಂದು ಪ್ರಶ್ನಿಸಬೇಕಿದೆ.... ಸರ್ಕಾರವನ್ನು! ■



ಜೈಲಿನಲ್ಲಿ ರಮೇಶ್ ತಂಡ ಪ್ರದರ್ಶಿಸಿದ ಅಂಬೇಡ್ಕರ್ ನಾಟಕ



ಈ ಚಿತ್ರಗಳು. ಅಂದಹಾಗೆ, ಭೀಕರ, ಭಯಂಕರ ಎಂದೇ ಪೊಲೀಸರಿಂದ ಬಿಂಬಿಸಲ್ಪಟ್ಟಿರುವ ನಕ್ಸಲೈಟ್ ರಮೇಶ್‌ರ ಸಂಗ್ರಹದಲ್ಲಿದ್ದ ಫೋಟೋಗಳಿವು.

ಹಿಂಸೆ ಹುಟ್ಟುವುದೆಲ್ಲಿಂದ?


ಈ ಫೋಟೋಗಳನ್ನೊಮ್ಮೆ ಗಮನಿಸಿ. ಮೂವರು ಪೊಲೀಸರು ರೈತನೊಬ್ಬನನ್ನು ಬಡಿದು ಕಾಲಿಂದ ಒದ್ದು ತುಳಿದು ಹಾಕುತ್ತಿದ್ದಾರೆ. ಅವರ ಬೆನ್ನ ಹಿಂದೆಯೇ ಆತನ ಪತ್ನಿ ಕೊಡಲಿ ಹಿಡಿದು ಪೊಲೀಸರತ್ತ ಬೀಸಲು ಸಜ್ಜಾಗಿದ್ದಾಳೆ. ಮತ್ತೊಮ್ಮೆ ಗಮನಿಸಿ ಅವಳ ಕೈಯಲ್ಲಿರುವ ಕೊಡಲಿ ಹಿಂದುಮುಂದಾಗಿದೆ. ಪ್ರತಿಭಟನೆಯ ಹೊರತ ಕೊಡುವ ರೋಷ ಅವಳಲ್ಲಿದೆಯೇ ವಿನಃ ಕೊಚ್ಚಿ ಹಾಕುವುದಲ್ಲ.

ಇದು ಒರಿಸ್ಸಾ ನಕ್ಸಲ್-ಪೊಲೀಸ್ ಸಂಘರ್ಷದ ಒಂದು ದೃಶ್ಯ. ಇನ್ನೊಂದು ಚಿತ್ರ. ಹೊಲ ಉಳಲು ಎತ್ತುಗಳಿಲ್ಲದ ರೈತ ಕುಟುಂಬ ಪ್ರೊಂಬರ ಮಕ್ಕಳು ತಾವೇ ದನಗಳಂತೆ ಕತ್ತಿಗೆ ನೊಗ ಕಟ್ಟಿಕೊಂಡು ಎಳೆಯುತ್ತಿದ್ದಾರೆ. ಇವು ಭಾರತದ ಹಳ್ಳಿಗಳ ವಾಸ್ತವ ಪರಿಸ್ಥಿತಿ. ಹಿಂಸೆ-ಪ್ರತಿಹಿಂಸೆ ಹುಟ್ಟುವುದೆಲ್ಲಿಂದ ಎಂಬುದಕ್ಕೆ ಸಾಕ್ಷಿಯಾಗಿವೆ

ಮುಸ್ಲಿಂ-ನಕ್ಸಲ್ ನಂಟು ನಿಜವೆ?

"ಇದೇ ನಾಡಿನ ಧಾರ್ಮಿಕ ಅಲ್ಪಸಂಖ್ಯಾತರಾದ ಮುಸ್ಲಿಮರಿಗೆ ನಿಜವಾಗಲೂ ಸಂಪೂರ್ಣ ರಕ್ಷಣೆ ಅಂತಾ ಸಿಕ್ಕಿರುವುದು ಕಾಂಗ್ರೆಸ್, ದಳ ಅಥವಾ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಲ್ಲ, ಬದಲಾಗಿ ಮಾವೋವಾದಿ ನಕ್ಸಲೀಯರ ಹಿಡಿತವಿರುವ ಪ್ರದೇಶಗಳಲ್ಲಿ ಮಾತ್ರ. ನಮ್ಮ ಪಕ್ಷವಿರುವ ಕಡೆ ಬಿಜೆಪಿ, ಭಜರಂಗ ದಳ ಅಥವಾ ಆರ್‌ಎಸ್‌ಎಸ್‌ನವರು ಮುಸ್ಲಿಮರ ಮೇಲಾಗಲಿ, ದಲಿತರ ಮೇಲಾಗಲಿ ದೌರ್ಜನ್ಯ ನಡೆಸಿದರೆ ಶಿಕ್ಷೆ ಗ್ಯಾರಂಟಿ. ಹಾಗಾಗಿ ಈ ದಮನಿತ ಸಮುದಾಯದವರಿಗೆ ನಕ್ಸಲರ ಬಗ್ಗೆ ನಂಬಿಕೆ ಹುಟ್ಟಿದ್ದರೆ ಅದಕ್ಕೆ ಇವತ್ತಿನ ಕೋಮುವಾದಿ ಫ್ಯಾಸಿಸ್ಟ್ ರಾಜಕೀಯ ಪರಿಸ್ಥಿತಿಗಳೇ ಕಾರಣ" ಎನ್ನುತ್ತಾರೆ ರಮೇಶ್.

ಕರ್ನಾಟಕದಲ್ಲೂ ಇವತ್ತಿನ ದಳ-ಬಿಜೆಪಿ ಸರ್ಕಾರಗಳು ಕರಾವಳಿಯಲ್ಲಿ ಪ್ರತಿನಿತ್ಯ ಮುಸ್ಲಿಮರ ಮೇಲೆ ದಾಳಿ ನಡೆಸುತ್ತಾ ಕೊಲೆಗೈಯುತ್ತಿವೆ. ಹಾಗಾಗಿ ರೋಸಿ ಹೋಗಿರುವ ಮುಸ್ಲಿಮರು ಸಂಘಟಿತರಾಗುತ್ತಾ ಕೋಮುವಾದಿ ವಿರೋಧಿ ಗುಂಪುಗಳೊಂದಿಗೆ ಸೇರುತ್ತಿದ್ದಾರೆ. ಅದೇ ರೀತಿ ನಕ್ಸಲರು ಪ್ರಜಾತಂತ್ರವಾದಿಗಳೆಂದೂ, ಮುಸ್ಲಿಮರ ರಕ್ಷಣೆಗೆ ನಿಲ್ಲುತ್ತಾರೆಂಬುದೂ ಅವರಿಗೆ ಗೊತ್ತಿದೆ ಎಂಬುದು ರಮೇಶ್ ಅಭಿಪ್ರಾಯ.



◆ ಮೈನಿಂಗ್‌ನಲ್ಲಿ ಗೌಡರ ಕುಟುಂಬ
◆ ವಸೂಲಿ ಮಾಡಿದ್ದು BSK ಕಂಪನಿ
◆ ಮಾಲೀಕರು ಬಾಲಕೃಷ್ಣ-ರಮೇಶ್

ಸರ್ಕಾರ ಫಿನಿಶ್!

ದೇವೇಗೌಡರ ಅಧಿಕಾರ ಲಾಲಸೆ, ಪುತ್ರ ಪ್ರೇಮ, ಜಾತ್ಯತೀತ ಆಶಯುಗಳಿಗೆ ಬಗೆದ ದ್ರೋಹ ಎಲ್ಲಕ್ಕೂ ದಂಡ ತೆರುವ ಕಾಲ ಬೇಗನೆ ಬರುವಂತೆ ಕಾಣುತ್ತಿದೆ.

ಸೌಜನ್ಯಮೂರ್ತಿಯಂತೆ ಸದಾ ಪೋಜು ಕೊಡುತ್ತಿದ್ದ ಮುಖ್ಯಮಂತ್ರಿ ಕುಮಾರಸ್ವಾಮಿ 'ಮಾನನಷ್ಟ ಕೇಸ್ ಹಾಕುತ್ತೀನಿ' ಎಂದು ಗರ್ಜಿಸಿದರೂ ನಡುಬೀದಿಯಲ್ಲಿ ಮರ್ಯಾದೆ ಕಳೆದುಕೊಳ್ಳುವ ಹಂತ ತಲುಪಿದ್ದಾರೆ.

ಬಜೆಪಿ ಶಾಸಕ ಜನಾರ್ಧನ ರೆಡ್ಡಿ ಸ್ಫೋಟಿಸಿರುವ 150 ಕೋಟಿಯ ಗಣಿ ಲಂಚ ಪ್ರಕರಣದ ಪರಿಣಾಮ ಇದು. ಅಷ್ಟೇ ಅಲ್ಲ ಈ ವಿವಾದವೇ ಹಾಲಿ ಕೋ-ಜಾ ಸರ್ಕಾರವನ್ನು ಉರುಳಿಸಿದರೂ ಆಶ್ಚರ್ಯವಿಲ್ಲ.

ಕೋರ್ಟ್‌ನಲ್ಲಿ ನಿಲ್ಲಬೇಕು ಕುಮಾರಣ್ಣ

ಈ ಭಾನುವಾರ ಬೆಳಗ್ಗೆ ಆಂಧ್ರದ ಶ್ರೀಶೈಲದಲ್ಲಿದ್ದ ಜನಾರ್ಧನ ರೆಡ್ಡಿ ಅಲ್ಲಿಂದ ನೇರ ಬಳ್ಳಾರಿಗೆ ಬಂದು ಸೋಮವಾರ ಬೆಳಗ್ಗೆ ಕುಮಾರ



ಬಳಿದಾಳೆ ಈತ

ಸ್ವಾಮಿ, ಎಂ.ಪಿ. ಪ್ರಕಾಶ್ ಹಾಗೂ ಚೆನ್ನಿಗಪ್ಪ ವಿರುದ್ಧ ಕ್ರಿಮಿನಲ್, ಸಿವಿಲ್ ಹಾಗೂ ಮಾನನಷ್ಟ ಈ ಮೂರು ಕೇಸ್‌ಗಳನ್ನು ಹಾಕುತ್ತಿದ್ದಾರೆ. ತಮ್ಮ ಮಾನನಷ್ಟ ಮಾಡಿದ್ದಕ್ಕೆ ನ್ಯಾಯಾಲಯದ ಮುಂದೆ ಕೋಟ್ಯಾಂತರ ರೂಪಾಯಿಗಳ ಪರಿಹಾರ ಕೇಳುತ್ತಿದ್ದಾರೆ ರೆಡ್ಡಿ. ಮುಖ್ಯಮಂತ್ರಿಯಾಗಿ ಕುಮಾರಸ್ವಾಮಿಯೇ ಕೋರ್ಟಿಗೆ ಬಂದು ಕೈಕಟ್ಟಿ ನಿಲ್ಲಬೇಕಾದ ಸ್ಥಿತಿ ತಂದಿರುವ ರೆಡ್ಡಿ 'ನಾನು ಈ ಕೇಸಿನಲ್ಲಿ ಗೆಲ್ಲುವುದು 201 ಪರ್ಸೆಂಟ್ ಗ್ಯಾರಂಟಿ' ಎನ್ನುತ್ತಿದ್ದಾರೆ. ಚೆಲ್ರೆ ಮಂತ್ರಿ ಚೆನ್ನಿಗಪ್ಪ ರೆಡ್ಡಿಯ ಮಾವನ ಮನೆಗೆ ಹೋಗಿ ತಿಂದು-ಕುಡಿದು ವಸೂಲಿ ವಿಚಾರ ಮಾತಾಡಿದ್ದನ್ನೆಲ್ಲಾ ವಿಡಿಯೋ ರೆಕಾರ್ಡ್ ಮಾಡಿಟ್ಟುಕೊಂಡಿದ್ದಾರೆ ಜನಾರ್ಧನ ರೆಡ್ಡಿ. ಜೊತೆಗೆ ರೋಲ್‌ಕಾಲ್ ದುಡ್ಡಿನ ದೊಡ್ಡ ಮೊತ್ತ ಬ್ಯಾಂಕ್ ಚೆಕ್‌ಗಳ ಮೂಲಕವೇ ಗೌಡರ ಸುಪುತ್ರರಾದ ಬಾಲಕೃಷ್ಣೇಗೌಡ ಹಾಗೂ ರಮೇಶ್ ದಂಪತಿಗಳ ಹೆಸರಿನಲ್ಲಿ ಮತ್ತವರ ಬಿಎಸ್‌ಕೆ ಮೈನಿಂಗ್ ಕಂಪನಿ ಲೆಕ್ಕಕ್ಕೂ ಜಮಾ ಆಗಿದೆ.

ರೆಡ್ಡಿ ಬಳಿ ಇವೆಲ್ಲಾ ಎವಿಡೆನ್ಸುಗಳಿವೆ. ಈ ಸರ್ಕಾರದ ಕತೆ ಮುಗಿಸಲು ಇಷ್ಟು ಸಾಲದೆ?

ದೇವೇಗೌಡ ಮೌನ

ನೈಸ್ ಕಂಪನಿ ಗಲಾಟೆಯಿದ್ದಾಗ ದಿನನಿತ್ಯ ಪತ್ರಿಕಾ ಹೇಳಿಕೆ ಕೊಡುತ್ತಾ ಶ್ಯಾನುಭೋಗರಂತೆ ಕಡತಗಳ ರಾಶಿ ಹಾಕಿಕೊಂಡು ಟಿವಿ ಸಂದರ್ಶನ ಕೊಟ್ಟಿದ್ದ ದೇವೇಗೌಡ ಅದೇ ಗಣಿ ಲಂಚದ ಗಲಾಟೆಯಲ್ಲಿ ಒಂದು ಮಾತೂ ಆಡುತ್ತಿಲ್ಲ ಏಕೆ?



ಬೇರೆ ಯಾರಾದರೂ ರೋಲ್‌ಕಾಲ್ ಮಾಡಿದಿದ್ದರೆ ಇಷ್ಟು ಹೊತ್ತಿಗೆ ಹಾದಿ ರಂಪ ಬೀದಿರಂಪ ಮಾಡಿರುತ್ತಿದ್ದ ಗೌಡರು ಈಗ ಸ್ವತಃ ತಮ್ಮ ಬಕಾಸುರ ಮಕ್ಕಳೇ ಸಗಣಿ ತಿಂದು ಬಂದಿರುವುದರಿಂದ ಮಾತಾಡುತ್ತಾರಾದರೂ ಹೇಗೆ? ಪ್ರತಿಭಟಿಸುವುದಾದರೂ ಯಾರ ವಿರುದ್ಧ?

ರೆಡ್ಡಿಯವರ ಬಾಯಿ ಮುಚ್ಚಿಸಲು ಇನ್ನಿಲ್ಲದಂತೆ ಹೆಣಗಿದ ಗೌಡರು ಕೊನೆಗೆ ಪ್ಯಾದೆ ಚೆನ್ನಿಗಪ್ಪನನ್ನಾದರೂ ಬಲಿ ಕೊಟ್ಟು ಕುಮಾರಸ್ವಾಮಿಯನ್ನು ಉಳಿಸಲು ಯೋಚಿಸಿದ್ದರು. ಆದರೆ ಬಳ್ಳಾರಿಯಿಂದ ಹೊರಬರುತ್ತಿರುವ ಸತ್ಯಗಳು ಈಗ ಚೆನ್ನಿಗಪ್ಪನನ್ನು ಬಿಟ್ಟು ಗೌಡರ ಕುಟುಂಬವನ್ನೇ ಬೆನ್ನಟ್ಟಿವೆ..



ಕಾಂಗ್ರೆಸ್ ಈ ಅವಕಾಶವನ್ನು ಕಳೆದುಕೊಳ್ಳುವುದಿಲ್ಲ. ಖರ್ಗೆ ಈಗಾಗಲೇ ರಾಜ್ಯಪಾಲರಿಗೆ ಮನವಿ ನೀಡಿ ತನಿಖೆಗೆ ಆದೇಶಿಸುವಂತೆ ಕೋರಿದ್ದಾರೆ, ಇದರ ಹಿಂದೆಯೇ ಚತುರ್ವೇದಿ ವಿವರಣೆ ನೀಡುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಈ ಮಧ್ಯೆ ತಮ್ಮ ಪಕ್ಷದ ಧರಂಸಿಂಗ್ ಸರ್ಕಾರವನ್ನು ಉರುಳಿಸಿದ್ದಕ್ಕೆ ಸೋನಿಯಾ ಮೇಡಂ ದೇವೇಗೌಡರನ್ನು ಕ್ಷಮಿಸಿಲ್ಲ. ಅವಕಾಶ ಸಿಕ್ಕರೆ ಅವರು ಈ ಕೋ-ಜಾ ಸರ್ಕಾರವನ್ನು ಉರುಳಿಸಿ ಮಧ್ಯಂತರ ಚುನಾವಣೆ ಎದುರಿಸಲು ಸಿದ್ಧ. ಈಗ ರಾಜ್ಯವೊಂದರ ಮುಖ್ಯಮಂತ್ರಿಯೇ ನ್ಯಾಯಾಲಯದ ಕಟಕಟೆಯಲ್ಲಿ ನಿಂತರೆ ಕೇಂದ್ರ ಸರ್ಕಾರ ಸುಮ್ಮನಿರುತ್ತದೆಯಾ?

ಏನೆಂದು ಉತ್ತರಿಸುತ್ತಾರೆ ಕುಮಾರಸ್ವಾಮಿ!?

ಈ ಹಗರಣ ಬಗ್ಗೆ ತನಿಖೆ ನಡೆಯಲಿ ಎಂದರೆ ಮಾಲು ಸಮೇತ ಸಿಕ್ಕಿಬೀಳುತ್ತಾರೆ, ಬೇಡ ಅಂದರೆ ಜನ ಮನೆಗೆ ಕಳಿಸುತ್ತಾರೆ, ಈ ಗದ್ದಲದಲ್ಲೇ ಬಜೆಪಿಗಳು ಹೊಸ ಲೆಕ್ಕಾಚಾರ ಹಾಕಲು ಶುರುಮಾಡಿದ್ದಾರೆ.

ಗಣಿ ಲಂಚ ಆರೋಪ ಬಂದಿರುವುದು ಜೆಡಿಎಸ್‌ನವರ ಮೇಲಾದ್ದರಿಂದ ಮರ್ಯಾದೆ ಹೋದರೆ ಅವರದ್ದೇ ತಾನೆ ಹೋಗಲಿ ಬಿಡ್ರಿ ಎಂಬ ಮಾತು ಬಜೆಪಿ ಶಾಸಕರ ಬಾಯಲ್ಲಿ ಬರುತ್ತಿದೆ. ನಡೆದಷ್ಟು ದಿನ ಕೋ-ಜಾ ಸರ್ಕಾರದಲ್ಲಿದ್ದು ಕೊನೆಗೆ ಸರ್ಕಾರ ಬಿದ್ದು ಹೋದರೆ "ಜಾತ್ಯತೀತ ದಳದ ಭ್ರಷ್ಟಾಚಾರವನ್ನು ಬೆಳಕಿಗೆ ತಂದಿದ್ದೇ ನಮ್ಮ ಪಾರ್ಟಿ ಶಾಸಕ ಜನಾರ್ಧನ ರೆಡ್ಡಿ, ನಾವು ಭ್ರಷ್ಟಾಚಾರ ವಿರೋಧಿಗಳು" ಎಂದು ಹೇಳಿಕೊಂಡು ಮತ್ತೆ ಎಲೆಕ್ಷನ್‌ಗೆ ಹೋಗಬಹುದೆಂಬ ಚರ್ಚೆಗಳು ಬಜೆಪಿಯೊಳಗೆ ನಡೆದಿದೆ.

ಹೀಗೆ ಪರಸ್ಪರ ಪಿತೂರಿ, ಅವಕಾಶವಾದಗಳ ನೆಲೆಯಲ್ಲೇ ಅಧಿಕಾರ ಹಿಡಿದಿರುವ ಕೋ-ಜಾ ಸರ್ಕಾರ ಗಣಿ ಗಲಾಟೆಯಲ್ಲೇ ಫಿನಿಶ್. ಆದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ.

ಬಿಜೆಪಿಯ ಬಣ್ಣ ಬಯಲು

ಗಣಿ ಲಂಚದಲ್ಲಿ ಯಾರ ಬಣ್ಣ ಬಯಲಾಗುತ್ತೋ ಇಲ್ಲವೋ, ಆದರೆ ಬಜೆಪಿಯ ಮಾನವಂತೂ ಮೂರು ಕಾಸಿಗೆ ಹರಾಜಾಗಿದೆ.

"ಜನಾರ್ಧನ ರೆಡ್ಡಿಯ ಆರೋಪದಲ್ಲಿ ಅಂಥಾ ತಪ್ಪೇನಿದೆ? ಮುಖ್ಯಮಂತ್ರಿ ಹೆಸರಲ್ಲಿ ಯಾರಾದರೂ ಲಂಚ ಪಡೆದಿದ್ರೆ ಆ ಬಗ್ಗೆ ತನಿಖೆಯಾಗಲಿ ಬಿಡಿ" ಎಂದು ಬಹಿರಂಗವಾಗಿ ಡೈಲಾಗ್ ಹೊಡೆದಿದ್ದ ಬಜೆಪಿ ಅಧ್ಯಕ್ಷ ಸದಾನಂದಗೌಡಾದಿಯಾಗಿ ನಾಯಕ ಈಶ್ವರಪ್ಪನವರ ತನಕ ಪ್ರತಿಯೊಬ್ಬರೂ ಈಗ ಉಲ್ಟಾ ಹೊಡೆದಿದ್ದಾರೆ.

ಸದಾನಂದಗೌಡರ ಲೇಟೆಸ್ಟ್ ಹೇಳಿಕೆಯೇನೆಂದರೆ ಪಕ್ಷದಿಂದ ಜನಾರ್ಧನ ರೆಡ್ಡಿಯನ್ನು ಅಮಾನತು ಮಾಡಿದ್ದು ಗಣಿ ಲಂಚವನ್ನು ಬಯಲಿಗೆಳೆದದ್ದಕ್ಕಲ್ಲ; ಬದಲಾಗಿ ಪಕ್ಷದ ಶಿಸ್ತನ್ನು ಉಲ್ಲಂಘಿಸಿದ್ದಕ್ಕಾಗಿ! ಹಾಗಾದರೆ



ಪಕ್ಷದ ಶಿಸ್ತೆಂದರೆ ಏನು? ಹಗಲು ದರೋಡೆ ನಡೆದರೂ ಸುಮ್ಮನಿರುವುದೇ? ಭ್ರಷ್ಟಾಚಾರವನ್ನು ಕಂಡೂ ತೆಪ್ಪಗಿರುವುದೆ? ಪಕ್ಷದ ಶಿಸ್ತಿನ ಪ್ರಕಾರ ಹಗರಣವನ್ನು ಯಾರ ಗಮನಕ್ಕೆ ತರಬೇಕಿತ್ತು? ಈಗ ಬಹಿರಂಗ ಹೇಳಿಕೆ ಕೊಟ್ಟ ಮೇಲಾದರೂ ಅದು ಬಜೆಪಿಯ ಗಮನಕ್ಕೆ ಬಂತಲ್ಲ; ಅದರ ವಿರುದ್ಧ ಬಜೆಪಿ ಏನು ಕಡಿದು ಕಟ್ಟೆ ಹಾಕಿದೆ? ಇದು ಸಾಮಾನ್ಯ ಕಾರ್ಯಕರ್ತರ ಪ್ರಶ್ನೆ.

ಹಾಗೊಮ್ಮೆ ಬಜೆಪಿ ವಿರೋಧ ಪಕ್ಷವಾಗಿದ್ದರೆ ಆಗ ರೆಡ್ಡಿ ಇಂಥಾದೊಂದು ಹಗರಣವನ್ನು ಬಯಲಿಗೆಳೆದಿದ್ದರೆ ಅದ್ಯಾವುದೇ ಸರ್ಕಾರವಾಗಿದ್ದರೂ ಬಜೆಪಿ ಸುಮ್ಮನೆ ಬಿಡುತ್ತಿತ್ತಾ? ಈಗ ಅಧಿಕಾರ ಸಿಕ್ಕಿತೆಂದ ಮಾತ್ರಕ್ಕೆ ಸರ್ಕಾರ ಉಳಿಸಿಕೊಳ್ಳಲು ಭ್ರಷ್ಟಾಚಾರವನ್ನು ಬಯಲಿಗೆಳೆದವನನ್ನೇ ಬಲಿ ಹಾಕುವುದಾರೆ ಬಜೆಪಿಯ ಉದ್ದೇಶವೇನು?

ಇವತ್ತು ಪ್ರತಿಯೊಬ್ಬ ಬಜೆಪಿ ಕಾರ್ಯಕರ್ತನೂ ಜನರ ಇಂಥ ಪ್ರಶ್ನೆಗಳಿಗೆ ತಲೆ ಕೊಡಬೇಕಿದೆ. ಅಧ್ಯಕ್ಷ ಸದಾನಂದಗೌಡರಿಗೆ ಅನಿವಾರ್ಯವಾಗಿ ಸಮರ್ಥಿಸಿಕೊಳ್ಳಬೇಕಾದ ಧರ್ಮ. ಮಿಕ್ಕಂತೆ ಯಾರೇ ಬಜೆಪಿ ನಾಯಕನೂ ಈ ಬಗ್ಗೆ ಸೊಲ್ಲೆತ್ತದೆ ತೆಪ್ಪಗಿರಬೇಕಾದ ಕರ್ಮ. ಕಾಂಗ್ರೆಸ್ಸಿಗಿಂತ ತಾನು ಭಿನ್ನ ಎಂದೇ ಪೋಜು ಕೊಡುತ್ತಿದ್ದ ಬಜೆಪಿಯ ನಾಯಕ ಪ್ರಮೋದ್ ಮಹಾಜನ್ ತನ್ನ ನಾದಿನಿಯ ಸಂಗಕ್ಕೆ ಬಿದ್ದು ಹತನಾದದ್ದು, ಆತನ ಮಗ ಮಾದಕ ಡ್ರಗ್ ಸೇವಿಸಿ ಜೈಲು ಪಾಲಾದದ್ದು, ಈಗ ಭ್ರಷ್ಟಾಚಾರವನ್ನು ಬಯಲಿಗೆಳೆದವನನ್ನೇ ಪಕ್ಷದಿಂದ ಹೊರಹಾಕಿದ್ದು; ಬಜೆಪಿಯ ದುರಂತವಲ್ಲದೇ ಮತ್ತೇನು?

ರೆಡ್ಡಿ ತಲೆಹಿಡುಕ ಎಂದರು ದಳದವರು

ಗಣಿ ದಂಧೆಯ 150 ಕೋಟಿ ಲಂಚ ಪ್ರಕರಣದ ಬಾಂಬ್ ಸ್ಫೋಟಿಸಿರುವ ಬಜೆಪಿ ಶಾಸಕ ಜನಾರ್ಧನ ರೆಡ್ಡಿಯವರನ್ನು ನೈತಿಕವಾಗಿ ಎದುರಿಸಲಾಗದೆ ಜಾತ್ಯತೀತ ದಳದವರು ನೀಚ ಮಾರ್ಗ ಹಿಡಿಯುತ್ತಿದ್ದಾರೆ.

ಮೊನ್ನೆಯ ಶನಿವಾರದ 'ಸಂಜೆವಾಣಿ' ಹಾಗೂ 'ಈ ಸಂಜೆ'ಯಲ್ಲಿ ಪ್ರಕಟವಾಗಿರುವ ಪತ್ರಿಕಾ ಜಾಹಿರಾತುಗಳೇ ಇದಕ್ಕೆ ಸಾಕ್ಷಿ.

ಜಾತ್ಯತೀತ ದಳದ ಮುಖಂಡ ಎಂ.ಜಿ. ಮಣಿ ಹೆಗಡೆ ಎಂಬ ಯಡವಟ್ಟು ಗಿರಾಕಿ 'ಈ ಸಂಜೆ'ಯಲ್ಲಿ 'ಕಾಂಗ್ರೆಸ್ ತಲೆಹಿಡುಕ ರೆಡ್ಡಿಯ ಭೂತದಹನ-ಶವಯಾತ್ರೆ' ಎಂದು ಜಾಹೀರಾತು ಕೊಟ್ಟಿದ್ದಾನೆ.



ಮಣಿ ಹೆಗಡೆ

ಥರ್ಡ್ ರೇಟ್ ರಾಜಕೀಯ ಎಂದರೆ ಇದೇ ಇರಬೇಕು, ಏಕೆಂದರೆ ಗೌಡರ ಕುಟುಂಬದ ಅಕ್ರಮಗಳನ್ನು ಬಯಲಿಗೆಳೆದ ರೆಡ್ಡಿ ಗಣಿ ದಂಧೆ ನಡೆಸುತ್ತಿದ್ದಲ್ಲಿ ಅದನ್ನು ಬಯಲುಗೊಳಿಸುವುದು ತಪ್ಪೇನಲ್ಲ, ಆದರೆ ತಲೆಹಿಡುಕ ರೆಡ್ಡಿ ಎಂದರೆ ಏನರ್ಥ.

ಅಂದಹಾಗೆ 'ಸಂಜೆವಾಣಿ'ಯಲ್ಲೂ ಇದೇ ಜಾಹೀರಾತು ಪ್ರಕಟವಾಗಿದೆ. ಆದರೆ ಪತ್ರಿಕೋದ್ಯಮದ ನೀತಿ ಸಂಹಿತೆ ಗೊತ್ತಿರುವ 'ಸಂಜೆವಾಣಿ' ರೆಡ್ಡಿ ವಿರುದ್ಧದ ಈ ಅಸಹ್ಯ ಸಾಲುಗಳನ್ನು ಕತ್ತರಿಸಿ ಜಾಹೀರಾತು ಪ್ರಕಟಿಸಿದೆ.



'ಈ ಸಂಜೆ'ಯ ಜಾಹೀರಾತು



'ಸಂಜೆವಾಣಿ'ಯ ಜಾಹೀರಾತು

ಬ್ಯಾಂಕ್ ಚೆಕ್ ಮೂಲಕ ವಸೂಲಿ

ಅತ್ಯಂತ ಖಚಿತವಾದ ಸುದ್ದಿಯ ಪ್ರಕಾರ ಗಣಿ ಮಾಲೀಕರಿಂದ ವಸೂಲಾಗಿರುವ 150 ಕೋಟಿಯಷ್ಟು ಹಣದಲ್ಲಿ ಒಂದಷ್ಟು ಮೊತ್ತ ಕೈ ಬದಲಾಯಿಸಿರುವುದು ಬ್ಯಾಂಕ್ ಚೆಕ್‌ಗಳ ಮೂಲಕ...!

ಬಳ್ಳಾರಿ ಗಣಿ ಧಣಿಗಳ ಲೆಕ್ಕದಿಂದ ಹೊರಟ ಈ ರೊಕ್ಕ ಹರಿದು ತಲುಪಿದ್ದು ಎಲ್ಲಿಗೆ ಎಂಬುದು ಸಾಬೀತು ಮಾಡಲು ಈ ಬ್ಯಾಂಕ್ ಚೆಕ್‌ಗಳೇ ಸಾಕು ಎಂದು ಪಿಸುಗುಟ್ಟುತ್ತಿದೆ ಗಣಿ ಉದ್ಯಮ. ಈ ವ್ಯವಹಾರದಲ್ಲಿ ಗೌಡರ ಕುಟುಂಬದ 'ಬಿಎಸ್‌ಕೆ ಮೈನಿಂಗ್ ಕಂಪನಿ' ಹೆಸರು ಒಂದು ಕಡೆ ಕಾಣಿಸಿಕೊಂಡರೂ ಸಾಕಲ್ಲವೆ. ರೋಲ್‌ಕಾಲ್ ದುಡ್ಡು ಕೊನೆಗೆ ಯಾರ ಕೈ ಸೇರಿತೆಂಬ ಸತ್ಯ ಹೊರಬರಲು. ಈ ವಿಷಯ ಚೆನ್ನಾಗಿ ಗೊತ್ತಿರುವುದರಿಂದಲೇ ಕೋ-ಜಾ ಸರ್ಕಾರ 'ಸಿಬಿಐ ತನಿಖೆ ಬೇಡ' ಎಂದು ಭಂಡತನ ಮಾಡುತ್ತಿದೆ.

ಬಂದು ಮುಟ್ಟಿರುವ ಸ್ಥಿತಿಯೇ ಕೊನೆಯದಲ್ಲಾ.

ಬಿ.ಎಸ್.ಕೆ. ಟ್ರೇಡಿಂಗ್ ಕಂಪೆನಿಯ ಮರ್ಮ!

ಆವತ್ತು ಬಿಎಂಐಸಿಯ ವಿರುದ್ಧ ಧರ್ಮಸಿಂಗ್‌ಗೆ ಪತ್ರ ಬರೆದಿದ್ದ, ಖೇಣಿಯ ವಿರುದ್ಧ ಎಲ್ಲೆಂದರಲ್ಲಿ ದಾಖಲೆಯಿಟ್ಟು ಹಾರಾಡುತ್ತಿದ್ದ ದೇವೇಗೌಡರ ಪೌರುಷಕ್ಕೆ ಇವತ್ತೇನಾಗಿದೆ?

"ಬಳ್ಳಾರಿಯ ಜನಾರ್ಧನ್ ರೆಡ್ಡಿ ಅಕ್ರಮ ಗಣಿಗಾರಿಕೆ ಮಾಡುತ್ತಿರುವುದು, ಆತ ಕೋರ್ಟ್‌ಗೆ ದಂಡ ಕಟ್ಟಿದ್ದು, ಆತನಿಗೂ ಬಳ್ಳಾರಿಯ ಇತರೇ ಗಣಿಕಳ್ಳರಿಗೂ ಇರುವ ಸಂಬಂಧಗಳ ಬಗ್ಗೆ ಬಂಡಿಗಟ್ಟಲೇ ದಾಖಲೆಗಳಿವೆ" ಎಂದು ಜನತಾದಳದವರು ಆರೋಪಿಸುತ್ತಿದ್ದಾರೆ. ಅದು ನಿಜವೇ ಆಗಿದ್ದಲ್ಲಿ ಗೌಡರ ಪಕ್ಷದವರೇ ಆದ ಕುರುಗೋಡು ಶಾಸಕ ಸೂರ್ಯನಾರಾಯಣ ರೆಡ್ಡಿಗೋ, ಗೃಹಮಂತ್ರಿ ಎಂ.ಪಿ. ಪ್ರಕಾಶ್‌ಗೋ ಹೇಳಿದರೆ ಕ್ಷಣಾರ್ಧದಲ್ಲೇ ಅವೆಲ್ಲವನ್ನೂ ಗೌಡರ ಪಾದಕಮಲ ಕ್ಕರ್ಪಿಸುತ್ತಾರೆ. ಅಷ್ಟೇ ಏಕೆ ಇಡೀ ಬಳ್ಳಾರಿ ಗಣಿಗಾರಿಕೆಯ ನಖಶಿಖಾಂತ ದಾಖಲೆಗಳೆಲ್ಲ ಇವತ್ತಿಗೂ ಗೌಡರ ಕೈಯಲ್ಲಿ ಭದ್ರವಾಗೇ ಇವೆ. ಹಾಗಿದ್ದೂ ದೇವೇಗೌಡರೇಕೆ ಮೌನ ವಹಿಸಿದ್ದಾರೆ?


ಡಾ.ರಮೇಶ್

ಅಶೋಕ್ ಖೇಣಿಯ ವಿರುದ್ಧ ಘರ್ಜಿಸಿದಂತೆ ಬಳ್ಳಾರಿ ಗಣಿಕಳ್ಳರ ವಿರುದ್ಧ ಏಕೆ ಗೌಡ ಕೂಗಾಡುತ್ತಿಲ್ಲ? ಕನಿಷ್ಠ ತಮ್ಮದೇ ಪಕ್ಷದ ಹಿತಕ್ಕಾಗಿ, ತನ್ನ ಮಗನ ಸರಕಾರದ ಉಳಿವಿಗಾಗಿಯಾದರೂ ಅಕ್ರಮ ಗಣಿಗಾರಿಕೆಯ ವಿರುದ್ಧ ಗೌಡರು ಸೊಲ್ಲೆತ್ತಬೇಕಿತ್ತು.

ಮೌನದ ಮರ್ಮವೇನು ಗೊತ್ತೆ?

ಗೌಡರು ಬಾಯಿಬಿಟ್ಟಷ್ಟೂ ಬೆಂಕಿ ಅವರ ಬುಡಕ್ಕೇ ಸುಡುತ್ತದೆ. ಬಿಎಸ್‌ಕೆ ಟ್ರೇಡಿಂಗ್ ಕಂಪೆನಿ ಎಂಬುದು ಗೌಡರ ಫ್ಯಾಮಿಲಿಯ ಅಧಿಕೃತ ಮೈನ್ಸ್ ದಂಧೆಯ ಮತ್ತೊಂದು ರೂಪ. ಗೌಡರ ಹಿರಿಮಗ ಬಾಲಕೃಷ್ಣ ಗೌಡರೇ ಇದಕ್ಕೆ ಮ್ಯಾನೇಜಿಂಗ್ ಡೈರೆಕ್ಟರ್. ಕೊನೇ ಮಗ ಡಾ. ರಮೇಶ್ ಅದರ ಡೈರೆಕ್ಟರ್. ಕರ್ನಾಟಕದ ಗಣಿ ಸಂಪತ್ತಿನ ಮಹಾನ್ ಕೊಳ್ಳೆಗಾರ ರಾಹುಲ್ ಬಲ್ಡೋಟಾ ಒಂದಲ್ಲ ಹತ್ತು ಬಾರಿ ಬಾಲಕೃಷ್ಣ ಗೌಡರನ್ನು ಭೇಟಿಯಾಗಿದ್ದಕ್ಕೆ ದಾಖಲೆಗಳಿವೆ. ಆತ ಡಾ. ರಮೇಶ್ ಜೊತೆ ಎಂ.ಜಿ. ರಸ್ತೆಯ ಓಬೇರಾಯ್ ಹೋಟೆಲಲ್ಲಿ ಕೂತು ಡೀಲು ಕುದುರಿಸಿದ್ದಕ್ಕೂ ದಾಖಲೆಗಳಿವೆ. ಬಳ್ಳಾರಿಯ ಪ್ರಮುಖ ಗಣಿ ಕಳ್ಳರಾದ ಪೋದ್ದಾರ್, ದೀಪಕ್‌ಸಿಂಗ್, ಆನಂದ್‌ಸಿಂಗ್, ಮೋದಿ ಮುಂತಾದವರ ಜೊತೆ ಬಾಲಕೃಷ್ಣಗೌಡ ಡೀಲು ಕುದುರಿಸಿದ್ದಕ್ಕೆ, ಡಾ. ರಮೇಶ್ ಅವರೊಂದಿಗೆ ಓಬೇರಾಯ್ ಹೋಟೆಲಲ್ಲಿ ಕೂತು ಪಾರ್ಟಿ ಮಾಡಿದ್ದಕ್ಕೆ ಎಲ್ಲಕ್ಕೂ ದಾಖಲೆಗಳಿವೆ.

ಹಾಗೇ ಬಳ್ಳಾರಿ, ಹೊಸಪೇಟೆ, ಸಂಡೂರಿನ ಪ್ರಮುಖ ಅದಿರುಕಳ್ಳರನ್ನು ಬೆಂಗಳೂರಿಗೆ ಬಂದು ತನ್ನ ಜೊತೆ ಡೀಲು ಕುದುರಿಸುವಂತೆ ಪಳಗಿಸಿದ್ದೇ ಬಾಲಕೃಷ್ಣಗೌಡ. ಹಾಗೇ ಬಿ.ಎಸ್.ಕೆ. ಟ್ರೇಡಿಂಗ್ ಕಂಪನಿ ಎಂಬ ಗೌಡರ ಮೈನ್ಸ್ ಕಂಪೆನಿಯನ್ನು ಹುಟ್ಟುಹಾಕಿದ ಬಾಲಕೃಷ್ಣಗೌಡ ಮತ್ತು ಡಾ. ರಮೇಶ್ ಕೆಮ್ಮಣ್ಣುಗುಂಡಿಯ ರಾಷ್ಟ್ರೀಯ ರಕ್ಷಿತಾರಣ್ಯವನ್ನು ಬಿಡದೇ ಚಿಕ್ಕನಾಯಕನಹಳ್ಳಿ, ಹೊಸದುರ್ಗ, ಸಂಡೂರು, ಹೊಸಪೇಟೆ, ಬಳ್ಳಾರಿಯ ತನಕ ಅದಿರುಗಳ್ಳತನಕ್ಕೆ ಕೈಹಾಕಿದ್ದು ಕೂಡ ಸುಳ್ಳಲ್ಲ.

ಈಗ ದೇವೇಗೌಡ ಏಕೆ ಮೌನ ತಾಳಿದ್ದಾರೆಂದರೆ ಅವರು ಬಾಯಿಬಿಟ್ಟಷ್ಟೂ ಬಣ್ಣಗೇಡು. ಅವರೇ ಏಕೆ ಯಾರೇ ಗಣಿ ಹಗರಣವನ್ನು ಕೆದಕಿದರೂ ಕೊನೆಗದು ಗೌಡರ ಕುಟುಂಬದ ಬುಡಕ್ಕೇ ಬಂದು ನಿಲ್ಲುತ್ತದೆ. ಅದು ಶುರುವಾದದ್ದು ಧರ್ಮಸಿಂಗ್ ಸರ್ಕಾರದ ಕಾಲಕ್ಕೆ. ಅಲ್ಲಿಯತನಕ ಗಣಿ ಖಾತೆಗೆ ನಿರ್ದೇಶಕರಾಗಿದ್ದ ಉಪೇಂದ್ರ ತ್ರಿಪಾಠಿಯನ್ನು ಎತ್ತಂಗಡಿ ಮಾಡಿದ ಧರ್ಮಸಿಂಗ್ ಆ ಜಾಗಕ್ಕೆ ತಂದದ್ದು ಗಂಗರಾಮ್ ಬಡೇರಿಯಾ ಎಂಬ ತಿಂಡಿ ಪೋತನನ್ನು.

ರಾ. ಸೋಮನಾಥ್



ಪ್ರಾರಂಭದಲ್ಲಿ ಧರ್ಮಸಿಂಗ್‌ಗೆ ನಿಷ್ಠನಾಗೇ ಇದ್ದ ಬಡೇರಿಯಾ ಕೆಲವೇ ತಿಂಗಳಲ್ಲಿ ತನ್ನ ನಿಷ್ಠೆಯನ್ನು ದೇವೇಗೌಡರಿಗೆ ಬದಲಾಯಿಸಿಬಿಟ್ಟ. ಹಾಗೇ ಧರ್ಮಸಿಂಗ್ ತೆಕ್ಕೆಯಿಂದ ಬಡೇರಿಯಾನನ್ನು ಸೆಳೆದದ್ದು ಬಾಲಕೃಷ್ಣ ಗೌಡ. ಆ ಹೊತ್ತಿಗಾಗಲೇ ಚಿಕ್ಕನಾಯಕನ ಹಳ್ಳಿಯಲ್ಲಿ ಮಂತ್ರಿ ಚೆನ್ನಿಗಪ್ಪ ಬೇನಾಮಿ ಗಣಿಗಾರಿಕೆಗಿಳಿದಿದ್ದು, ಅರಣ್ಯ ಇಲಾಖೆಯ ಆಯಕಟ್ಟಿನ ಜಾಗಕ್ಕೆಲ್ಲ ಬಾಲಕೃಷ್ಣಗೌಡರ ಆಸಾಮಿಗಳೇ ಬಂದದ್ದು ಮತ್ತು ಅದೇ ಹೊತ್ತಿಗೆ ಬಿಎಸ್‌ಕೆ ಟ್ರೇಡಿಂಗ್ ಕಂಪೆನಿ ಹುಟ್ಟಿಕೊಂಡಿದ್ದು; ಗೌಡರ ಫ್ಯಾಮಿಲಿ ಅದಿರುಗಳ್ಳತನಕ್ಕೆ ಕೈಯಿಟ್ಟದ್ದಕ್ಕೆ ಸ್ಪಷ್ಟ ಸೂಚನೆಗಳಾಗಿದ್ದವು. ಇಷ್ಟಾಗುತ್ತಿದ್ದಂತೆ ಧರ್ಮಸಿಂಗ್ ಸರ್ಕಾರವೇ ಉರುಳಿ ಕುಮಾರಸ್ವಾಮಿಯೇ ಮುಖ್ಯಮಂತ್ರಿಯಾಗಿ ಗಣಿ ಇಲಾಖೆಯೇ ಚೆನ್ನಿಗಪ್ಪನವರ ತೆಕ್ಕೆಗೆ ಬಂತು.

ಪ್ರಾರಂಭದಲ್ಲಿ ಗಣಿಗಳ್ಳತನದ ವಿರುದ್ಧ ನಿಷ್ಠುರವಾಗೇ ಇದ್ದ ಚೆನ್ನಿಗಪ್ಪ ಎಲ್ಲೆಂದರಲ್ಲಿ ಅಧಿಕಾರಿಗಳನ್ನು ಬಿಟ್ಟು ರೇಡು ಮಾಡಿಸುತ್ತಿದ್ದರೆ, ಅದಕ್ಕೆ ಪ್ರತಿಯಾಗಿ ಬಾಲಕೃಷ್ಣಗೌಡ ಮತ್ತು ಡಾ. ರಮೇಶ್‌ರಿಂದ ಯಕ್ಕಾಮಕ್ಕಾ ಬಯ್ಗುಳ ಕೇಳಿ ಬಂತು. ಹಕೀಕತ್ತೇನೆಂದರೆ ಧರ್ಮಸಿಂಗ್ ಕಾಲಕ್ಕೆ ಬಡೇರಿಯಾ ಜಪ್ತಿ ಮಾಡಿದ್ದ ಪೋದ್ದಾರ್‌ನ ಏಳು ಲಕ್ಷ ಟನ್ ಬಿಸ್ಕೆಟ್ ಪಿಟ್ ಅದಿರಿನಲ್ಲಿ ಒಂದು ಲಕ್ಷ ಟನ್ ಮಾಯವಾಗಿತ್ತು. ಚೆನ್ನಿಗಪ್ಪ ಅದನ್ನು ಕೆದಕಿ ನೋಡಲಾಗಿ ಜಪ್ತಾಗಿದ್ದ ಒಂದು ಲಕ್ಷ ಟನ್ ಬಿಸ್ಕೆಟ್ ಪಿಟ್ ಅದಿರು ಪೂರ್ತಿ ಬಿಎಸ್‌ಕೆ ಟ್ರೇಡಿಂಗ್ ಕಂಪೆನಿಯ ಪಾಲಾಗಿತ್ತು. ಹೀಗೇ ಕಳ್ಳದಾರಿಯಲ್ಲಿ ಗೌಡರ ಕಂಪನಿ ಪಾಲಾದ ಒಂದು ಲಕ್ಷ ಟನ್ ಬಿಸ್ಕೆಟ್ ಪಿಟ್ ಅದಿರಿನ ಮಾರುಕಟ್ಟೆ ದರವೇ ಮೂವತ್ತು ಕೋಟಿ ರೂಪಾಯಿಗಳು!


ಬಾಲಕೃಷ್ಣಗೌಡ

ಕುಮಾರಸ್ವಾಮಿ ಮುಖ್ಯಮಂತ್ರಿಯಾದ ಮೇಲಂತೂ ಬಳ್ಳಾರಿಯಿಂದ ಸಾಗಾಣಿಕೆಯಾಗುವ ಪ್ರತಿ ಟನ್ ಕಳ್ಳ ಅದಿರಿಗೆ ನೂರು ರೂಪಾಯಿಯಂತೆ ವಸೂಲಿ ಮಾಡಿ ಅದನ್ನು ನಿಯತ್ತಾಗಿ ಬಾಲಕೃಷ್ಣ ಗೌಡರಿಗೆ ಬಡೇರಿಯಾ ಮುಟ್ಟಿಸುತ್ತಿದ್ದ. ಅರಣ್ಯ ಇಲಾಖೆ ಮತ್ತು ಸಾರಿಗೆ ಇಲಾಖೆಯ ಅಧಿಕಾರಿಗಳು ಕೂಡ ಟನ್ ಅದಿರಿಗೆ ನೂರು ರೂಪಾಯಿ ಸಂಗ್ರಹಿಸುವಲ್ಲಿ ಕೈಜೋಡಿಸಿದ್ದರು.

ಹೊಸಪೇಟೆಯಿಂದ ಧಾರವಾಡದ ಮಾರ್ಗವಾಗಿ ಗೋವಾ, ಕಾರವಾರಕ್ಕೆ ಮತ್ತು ಚಿತ್ರದುರ್ಗ, ಹಾಸನದ ಮಾರ್ಗವಾಗಿ ಮಂಗಳೂರು ಬಂದರಿಗೆ ಪ್ರತಿನಿತ್ಯ ಸರಿಸುಮಾರು ಹದಿನೈದು ಸಾವಿರ ಲಾರಿಗಳಲ್ಲಿ ಓವರ್‌ಲೋಡ್ ತುಂಬಿಸಿಕೊಂಡು ಅದಿರು ಸ್ಮಗ್ಲಿಂಗ್ ಮಾಡಲೆಂದೇ ಟ್ರಾನ್ಸ್‌ಪೋರ್ಟ್ ಕಂಪೆನಿಗಳ ಮಾಫಿಯಾ ತಲೆ ಎತ್ತಿತ್ತು, ಅವುಗಳನ್ನು ನಿಭಾಯಿಸಲೆಂದೇ ಸಾರಿಗೆ ಇಲಾಖೆಯ ನಟೋರಿಯಸ್ ಆರ್.ಟಿ.ಓ.ಗಳಾದ ಮಂಜೇಗೌಡ ಮತ್ತು ಮಳ್ಳಗೇರಿಯ ನೇತೃತ್ವದ ದುಷ್ಟಕೂಟ ಹುಟ್ಟಿಕೊಂಡಿತು. ಲಾರಿಗಳ ಓವರ್‌ಲೋಡ್ ರೂಪದಲ್ಲಿ ಸಂಬಂಧಪಟ್ಟ ಅಷ್ಟೂ ಆರ್.ಟಿ.ಓ. ಚೆಕ್‌ಪೋಸ್ಟುಗಳಿಂದ ದಿನವೊಂದಕ್ಕೆ ಮಳ್ಳಗೇರಿ ಸಂಗ್ರಹಿಸುವ ಮೊತ್ತವೇ ಎರಡು ಕೋಟಿ. ಇದನ್ನು ಸಾರಿಗೆ ಕಮೀಷನರ್ ಓಂಪ್ರಕಾಶ್ ಸಂಗ್ರಹಿಸಿ ತಮಗೊಪ್ಪಿಸದೇ ಚೆಲುವರಾಯಸ್ವಾಮಿ ತಿನ್ನಲು ದಾರಿ ಮಾಡಿಕೊಡುತ್ತಿದ್ದಾರೆಂದು ಬಾಲಕೃಷ್ಣಗೌಡರು ಆ ಜಾಗಕ್ಕೆ ನಾರಾಯಣಗೌಡರನ್ನು ತಂದರು.

ಹೀಗೆ ಏಕಾಏಕಿ ತೊಂದರೆಗೀಡಾದ ಗಣಿಕಳ್ಳರ ಪೈಕಿ ಬಹುತೇಕರು ಕಾಂಗ್ರೆಸ್ಸಿಗರು. ಈ ಪೈಕಿ ಹೊಸಪೇಟೆ ಕಾಂಗ್ರೆಸ್ ಶಾಸಕ ಎಚ್.ಆರ್. ಗವಿಯಪ್ಪನೇ ದೊಡ್ಡ ಮೈನ್ಸ್ ದಂಧೆಕೋರ. ವೆಸ್ಕೋ ಕಂಪೆನಿಯ ವೀರಭದ್ರಪ್ಪ ಹೇಳಿಕೇಳಿ ಕಾಂಗ್ರೆಸ್ ನಾಯಕ. ಪಾರ್ವತಿ ಮೈನ್ಸ್‌ನ ವಿಶ್ವನಾಥ್ ಮಾತ್ರವಲ್ಲದೇ ಕರ್ನಾಟಕದ ಭೂಸಂಪತ್ತಿನ ಮಹಾನ್ ಲೂಟಿಕೋರ ಬಲ್ಡೋಟಾ ಕೇಂದ್ರ ಮಂತ್ರಿ ಚಿದಂಬರಮ್ ಮತ್ತು ಹಿಂದಿನ ಮುಖ್ಯಮಂತ್ರಿ ಧರ್ಮಸಿಂಗ್‌ರ ಆತ್ಮೀಯ. ಆವತ್ತಿನಿಂದ ಬಲ್ಡೋಟಾನ ಮನೆ ಕಾವಲು ನಾಯಿಯಂತೆ ಅವರ ಎಲ್ಲಾ ಲೂಟಿಗೆ ಬೆಂಬಲವಾಗಿ ನಿಂತವನು ಬಳ್ಳಾರಿಯ ಮಾಜಿ ಸಂಸದ ಕೆ.ಸಿ. ಕೊಂಡಯ್ಯ. ಒಂದೆಡೆ ಗೌಡರ ಸಂತತಿಯದೇ ಬಿ.ಎಸ್.ಕೆ. ಟ್ರೇಡಿಂಗ್ ಕಂಪೆನಿ ಮೈನ್ಸ್ ದಂಧೆಗೆ ಕೈಯಿಟ್ಟದ್ದು ಮತ್ತೊಂದೆಡೆ ಬಲ್ಡೋಟಾನಂಥ ಮೈನ್ಸ್ ತಿಮಿಂಗಲವನ್ನು ಮುಗಿಸಲು ಮುಂದಾದದ್ದು ಇಡೀ ಮೈನ್ಸ್ ಲಾಬಿ ಕುಮಾರಸ್ವಾಮಿ ವಿರುದ್ಧ ತಿರುಗಿ ಬೀಳುವಂತೆ ಮಾಡಿದೆ.

ಬಲ್ಡೋಟಾನ ದುಡ್ಡು, ಕೊಂಡಯ್ಯನ ತಲೆ ಮತ್ತು ಜನಾರ್ಧನ ರೆಡ್ಡಿಯ ದೇಹ ಮೂರೂ ಒಟ್ಟಾಗಿಯೇ ಷಡ್ಯಂತ್ರ ರೂಪಿಸಿವೆ. ತಾವೇ ಹೆಣೆದ ಬಲೆಗೆ ಗೌಡರ ಫ್ಯಾಮಿಲಿ ಸಿಕ್ಕಿಬಿದ್ದಿದೆ. ಪಾಪ; ದೇವೇಗೌಡರು ಬಾಯಿಬಿಡುವಂತಿಲ್ಲ ಸುಮ್ಮನೇ ಕೂರುವುದೂ ಸಲ್ಲ!

ಜಪ್ತಾಗಿದ್ದ ಒಂದು ಲಕ್ಷ ಟನ್ ಅದಿರು ಸರ್ಕಾರದ ಬೊಕ್ಕಸಕ್ಕೆ ಸೇರುವ ಬದಲು ಬಿ.ಎಸ್.ಕೆ. ಟ್ರೇಡಿಂಗ್ ಕಂಪೆನಿಯ ಪಾಲಾಗಿದ್ದಕ್ಕೆ ಸಾಕಷ್ಟು ಪುರಾವೆಗಳಿವೆ. ಕುಮಾರಸ್ವಾಮಿ ಕೊರಳಿಗೆ ಅದಕ್ಕಿಂತ ಕುಣಿಕೆ ಬೇಕೆ?

ಬಲ್ಡೋಟನ ಪಾರ್ಟಿಯಲ್ಲಿ ಚೆನ್ನಿಗಪ್ಪ

ಗಣಿ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಹದಿನೈದೇ ದಿನಕ್ಕೆ ಬಳ್ಳಾರಿಗೆ ಭೇಟಿ ಕೊಟ್ಟ ಚೆನ್ನಿಗಪ್ಪ ಅವತ್ತು ರಾತ್ರಿ ಊಟಕ್ಕಂತ ಹೋಗಿದ್ದು ಜನಾರ್ಧನ ರೆಡ್ಡಿಯ ಮಾವನ ಮನೆಗೆ. ಗುಂಡು-ತುಂಡು ಎರಡಕ್ಕೂ ನೈವೇದ್ಯವಾಗಿಟ್ಟಿದ್ದ ರೆಡ್ಡಿಯ ಬಂಟ ಶ್ರೀರಾಮುಲು ತುಂಬಾ ಒತ್ತಾಯ ಮಾಡಿಯೇ ಚೆನ್ನಿಗಪ್ಪನನ್ನು ಮನೆತನಕ ಕರೆಸಿಕೊಂಡಿದ್ದರ ಅಸಲಿ ಉದ್ದೇಶವೇ ಬೇರೆಯಿತ್ತು. ವಿಸ್ಕಿ ಇನ್ನೇನು ತಲೆಗೇರಿತು ಅನ್ನುವಷ್ಟರಲ್ಲೇ ಅಲ್ಲಿಗೆ ಜನಾರ್ಧನ ರೆಡ್ಡಿಯ ಪ್ರವೇಶವಾಗಿದೆ. ಅಲ್ಲಿಯತನಕ ಅದನ್ನು ಶ್ರೀರಾಮುಲು [illegible] ಚೆನ್ನಿಗಪ್ಪ ಭಾವಿಸಿದ್ದರು. ಎರಡೂ ದಿಕ್ಕಿನಿಂದ ಅಡಗಿಸಿಟ್ಟ ಕ್ಯಾಮೆರಾದಲ್ಲಿ ಎಲ್ಲವೂ ದಾಖಲಾಗುತ್ತಿದ್ದದ್ದನ್ನು ಖಾತರಿ ಮಾಡಿಕೊಂಡೇ ಜನಾರ್ಧನ ರೆಡ್ಡಿ 'ನೋಡಿ, ಮೈನ್ಸ್‌ನವರಿಂದ ನಿಮ್ಮ [illegible] ಮಾಡ್ತೀನಿ. ಸುಮ್ಮನೇ [illegible]' ಎಂದು [illegible] ಚೆನ್ನಿಗಪ್ಪ ಜೋರಾಗಿ 'ಅದಕ್ಕೇ ಅಷ್ಟೊಂದು ತಲೆ [illegible]? [illegible] ಹಗೊಂಡು [illegible] ಮಾಡಿಕೊಂಡಿದ್ದೀರಾ. ಇದೆ, ಈ [illegible] ನವರನ್ನು ನಾನು ಬಿಡೋಕ್ಕಾಗೋಲ್ಲ' ಎಂದಿದ್ದಾರೆ. ರಾತ್ರಿ ಎರಡರ ತನಕ ಚಿತ್ತಾಗುವಷ್ಟು ಕುಡಿದು ತಟ್ಟಾಡುತ್ತಿದ್ದ ಚೆನ್ನಿಗಪ್ಪರ ಪ್ರತಿ ಹೆಜ್ಜೆಯನ್ನು ಚಿತ್ರೀಕರಿಸಿಕೊಳ್ಳಲಾಗಿತ್ತಾದರೂ ಅದರಿಂದ ದೊಡ್ಡ ಪ್ರಯೋಜನವಾಗುವಂತಿರಲಿಲ್ಲ.

ಅಲ್ಲಿಗೆ ಚೆನ್ನಿಗಪ್ಪ ಸುಲಭಕ್ಕೆ ಬುಟ್ಟಿಗೆ ಬೀಳುವ ಮಿಕವಲ್ಲ ಎಂಬುದು ರೆಡ್ಡಿಗೆ ಖಾತರಿಯಾಗಿದೆ. ಪ್ರಾರಂಭದಲ್ಲಿ ಎಲ್ಲರನ್ನೂ ಟೈಟ್ ಮಾಡಿ ದೊಡ್ಡ ಡೀಲಿಗೆ ವ್ಯವಹಾರ ಕುದುರಿಸುವ ಉದ್ದೇಶ ಹೊತ್ತೇ ಬಳ್ಳಾರಿಗೆ ಬಂದಿದ್ದ ಚೆನ್ನಿಗಪ್ಪನಿಗೆ ಬಹುಶಃ ಆ ಹಂತದಲ್ಲಿ ವ್ಯವಹಾರ ಮಾತಾಡುವ ಉದ್ದೇಶವಿರಲಿಲ್ಲ.

ಇದು ಸುಲಭಕ್ಕೆ ಸಿಕ್ಕುವ ಮಿಕವಲ್ಲ ಎಂಬುದು ಖಾತರಿಯಾಗುತ್ತಿದ್ದಂತೆ ಜನಾರ್ಧನ ರೆಡ್ಡಿ ಈ ಬಾರಿ ರಾಹುಲ್ ಬಲ್ಡೋಟನನ್ನು ಮುಂದೆ ಬಿಟ್ಟರು. ಈ ಹೊತ್ತಿಗಾಗಲೇ ಗಣಿ ಅಧಿಕಾರಿಗಳು ಕಂಡಕಂಡಲ್ಲಿ ರೇಡು ಶುರುವಿಟ್ಟುಕೊಂಡಿದ್ದರು. ಕುರುಗೋಡು ಶಾಸಕ ಸೂರ್ಯನಾರಾಯಣ ರೆಡ್ಡಿಯ ಹುಡುಗರು ಬೇರೆ ಬಲ್ಡೋಟಾ ಗಣಿಯ ಮೇಲೆ ದಾಳಿ ನಡೆಸಿದ್ದರು. ರಾಹುಲ್ ಬಲ್ಡೋಟಾ ಪದೇಪದೇ ಚೆನ್ನಿಗಪ್ಪನವರ ಮನೆಗೆ ಬಂದು ಮಸ್ಕಾ ಹೊಡೆಯುತ್ತಿದ್ದ. ಆದೊಮ್ಮೆ ಅಶೋಕಾ ಹೋಟೆಲಿಗೆ ಊಟಕ್ಕೂ ಕರೆದ. ಚೆನ್ನಿಗಪ್ಪ ಬಲ್ಡೋಟಾನ ಜೊತೆಗೇ ಅಶೋಕಾ ಹೋಟೆಲಿಗೆ ಬಂದಿದ್ದಾರೆ. ಪ್ರಾರಂಭದಲ್ಲಿ ಆತನ ಬಾಯಿಂದಲೇ ವಿಷಯ ಕೇಳಿಕೊಂಡ ಚೆನ್ನಿಗಪ್ಪ ಇನ್ನೇನು ಊಟಕ್ಕೆ ಆರ್ಡರ್ ಮಾಡಬೇಕೆನ್ನುವಷ್ಟರಲ್ಲಿ 'ಬರ್ತೀನಿ' ಎಂದಿದ್ದೇ ಎದ್ದು ಹೊರನಡೆದಿದ್ದಾರೆ.

ಜನಾರ್ಧನ ರೆಡ್ಡಿಯ ಸೀಡಿಯಲ್ಲಿರುವುದು ಚೆನ್ನಿಗಪ್ಪ ಮತ್ತು ಬಲ್ಡೋಟಾರ ಮಧ್ಯದ ಅಶೋಕಾ ಹೋಟೆಲ್ ಸಂಭಾಷಣೆಯಷ್ಟೇ. ಇಲ್ಲಿ ಬಲ್ಡೋಟಾ ಏನೇ ಕೇಳಿದಾಗಲೂ ಚೆನ್ನಿಗಪ್ಪ ಮನಸ್ಸು ಬಿಚ್ಚಿ ಮಾತಾಡಿಲ್ಲ. 'ನೋಡೋಣ, ಮಾಡೋಣ' ಎಂಬುದರ ಹೊರತಾಗಿ ಬಲ್ಡೋಟಾ ಅಡಗಿಸಿಟ್ಟುಕೊಂಡಿದ್ದ ಕ್ಯಾಮರಾಕ್ಕೆ ಹೆಚ್ಚು ಲಾಭವಾಗಿಲ್ಲ. ಮೊದಲು ಶ್ರೀರಾಮುಲು ಮನೆಗೆ ಊಟಕ್ಕೆ ಹೋಗಿದ್ದು ಅನಂತರ ಬಲ್ಡೋಟಾ ಕರೆದ ಎಂದು ಆತನ ಜೊತೆ ಅಶೋಕಾ ಹೋಟೆಲಿಗೆ ಹೋಗಿದ್ದೇ ಚೆನ್ನಿಗಪ್ಪನ ಯಡವಟ್ಟುಗಳು.



ಆದರೆ ಚೆನ್ನಿಗಪ್ಪನಿಗಿಂತಲೂ ಹೀನಾಯವಾಗಿ ಬಲ್ಡೋಟಾನ ಕ್ಯಾಮರಾಕ್ಕೆ ಬಲಿಯಾದವರು [illegible] ಬಾಲಕೃಷ್ಣ ಗೌಡ ಮತ್ತು ಡಾ. ರಮೇಶ್. ಸಂದೇಹವಾದರೂ [illegible] ನಡೆಸುತ್ತಿರುವುದು ಈ ಕಾಂಗ್ರೆಸ್ [illegible]!

ವಿಷಕಾರಿದ 'ನಾಗರಾಜ'

ಕೋಲಾರ

ಕೋಲಾರದ ನಾಗರಹಾವು ವಿಷಕಾರಿದೆ. ಕೋಲ್‌ಕಾಲ್ ಕುಖ್ಯಾತಿಯ ವಡಗೂರು ನಾಗರಾಜ ಸ್ವಾರ್ಥಕ್ಕಾಗಿ ನಡೆಸಿದ ಕಿತಾಪತಿಯಿಂದಾಗಿ ಎರಡು ಜೀವಗಳು ಬಲಿಯಾಗಿವೆ. ಕೋಲಾರ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ಶ್ರೀನಿವಾಸಗೌಡ ಶಾಂತಿಪ್ರಿಯ ಎನಿಸಿದ್ದರೂ ಆತನ ಶಿಷ್ಯಪಡೆಯಲ್ಲಿ ಪ್ರಮುಖನಾದ ನಾಗರಾಜ ನಂಜನ್ನು ಉಗುಳದಂತೆ ಮಾಡಲು ವಿಫಲರಾಗಿದ್ದಾರೆ ಎಂಬುದಕ್ಕೆ ಶನಿವಾರ ನಡೆದ ಜೋಡಿ ಕೊಲೆ ಸಾಕ್ಷಿಯಾಗಿದೆ.



ದೊಡ್ಡಪ್ಪಯ್ಯ

ಕೋಲಾರದಿಂದ ಸುಮಾರು ಹತ್ತು ಕಿಲೋಮೀಟರ್ ದೂರದಲ್ಲಿನ ವಡಗೂರು ಗ್ರಾಮ ನಾಗರಾಜನ ಸ್ವಂತ ಸ್ಥಳ. ಹುಟ್ಟಿದಾಗಿನಿಂದಲೂ ಶುದ್ಧ ತರಲೆ ಎಂದೇ ಚಾಲನೆಯಲ್ಲಿದ್ದ ನಾಗರಾಜ ಸ್ವಾರ್ಥ ಸಾಧನೆಗಾಗಿ ಬೇರೆಯವರ ನೆಮ್ಮದಿಯನ್ನು ಕೆಡಿಸಲು ಸದಾ ಬದ್ಧನಾಗಿದ್ದ. ರಾಜಕೀಯದ ಸೋಂಕು ತಗುಲಿದ ಮೇಲಂತೂ ಮತ್ತಷ್ಟು ದುರಂಹಕಾರವನ್ನು ಪ್ರದರ್ಶಿಸಲು ದಾರಿ ಮಾಡಿಕೊಂಡ ನಾಗರಾಜ, ಅಮಾಯಕರ ನೆಮ್ಮದಿ ಕೆಡಿಸುವ ಕಾಯಕವನ್ನು ಹೆಚ್ಚಿಸಿಕೊಂಡ. ಇದೆಲ್ಲದರ ಪರಿಣಾಮವಾಗಿ ಶನಿವಾರ ವಡಗೂರು ತಲ್ಲಣಗೊಂಡಿದೆ. ವಿಷಜಂತು ನಾಗರಾಜನ ರಾಜಕೀಯದ ತೆವಲಿಗೆ ಇಬ್ಬರ ಪ್ರಾಣಪಕ್ಷಿಗಳು ಹಾರಿಹೋಗಿವೆ. ಒಟ್ಟಾರೆ, ವಡಗೂರು ಗ್ರಾಮಸ್ಥರ ಶಾಂತಿ ಕದಡಿದೆ.


ಶನಿವಾರ ನಡೆದಿದ್ದು ಬರ್ಬರ ಕೊಲೆಗಳಾದರೂ, ಇದರ ಹಿನ್ನೆಲೆಯಲ್ಲಿ ನಾಗರಾಜ ಸಾಕಷ್ಟು ಹೋಂ ವರ್ಕ್ ಮಾಡಿರುವುದು ಸ್ಪಷ್ಟವಾಗಿದೆ. ಅಂದು ನಡೆದ ದಾಳಿ ಏಕಾಏಕಿ ನಡೆದಿದ್ದಲ್ಲ ಎಂಬುದಕ್ಕೆ ಹಲವಾರು ನಿದರ್ಶನಗಳಿವೆ. ಓರ್ವ ಬಂದೂಕಿನ ಗುಂಡಿಗೆ ಬಲಿಯಾಗಿದ್ದರೆ, ಎದುರು ಬಣದ ಗುಂಪಿನ ದಾಳಿಯಲ್ಲಿ ಮತ್ತೋರ್ವ ವ್ಯಕ್ತಿ ಬರ್ಬರವಾಗಿ ಹತ್ಯೇಗೀಡಾಗಿದ್ದಾನೆ.



ಶ್ರೀನಿವಾಸಗೌಡ

ವಡಗೂರು ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಅನಸೂಯಮ್ಮರನ್ನು ಪದಚ್ಯುತಿ ಮಾಡಬೇಕೆಂಬುದು ಹೊಸ ಕಾಂಗ್ರೆಸ್‌ನ ವಡಗೂರು ನಾಗರಾಜ ಮತ್ತವನ ಬೆಂಬಲಿಗರ ಒತ್ತಡವಾಗಿತ್ತು. ಆದರೆ, ಇದು ನ್ಯಾಯವಲ್ಲ ಎಂಬುದು ಅದೇ ಗ್ರಾಮದ ಹಳೆ ಕಾಂಗ್ರೆಸ್ಸಿಗ ಹಾಗೂ ಗ್ರಾಮ ಪಂಚಾಯ್ತಿ ಸದಸ್ಯ ದೊಡ್ಡಪ್ಪಯ್ಯ(53) ಗುಂಪಿನ ಆಗ್ರಹವಾಗಿತ್ತು. ಅಧ್ಯಕ್ಷೆ ಅನಸೂಯಮ್ಮರನ್ನು ಪದಚ್ಯುತಿಗೊಳಿಸುವ ವಿಚಾರವಾಗಿ ಚರ್ಚಿಸಲು ಜುಲೈ 14 ರಂದು ಉಪಾಧ್ಯಕ್ಷ ಲಕ್ಷ್ಮಣ್ ನೇತೃತ್ವದಲ್ಲಿ ಗ್ರಾಮದಲ್ಲಿ ಪಕ್ಷದ ಸಭೆ ನಡೆಯಿತು. ನಾಗರಾಜನೂ ಸೇರಿದಂತೆ ಹೊಸ ಕಾಂಗ್ರೆಸ್‌ನ ಮುಖಂಡರುಗಳ ಮಾತಿಗೆ ಮನ್ನಣೆ ನೀಡುತ್ತಿಲ್ಲ ಎಂಬ ಕಾರಣಕ್ಕೆ ಆಕೆಯ ವಿರುದ್ಧ ನಡೆದ ಸಭೆಯ ನೇತೃತ್ವವನ್ನು ಸ್ವತಃ ನಾಗರಾಜನೇ ವಹಿಸಿಕೊಂಡಿದ್ದ. ಈ ಪೂರ್ವಭಾವಿ ಸಭೆಯಲ್ಲಿ ನಾಗರಾಜ ಹಾಗೂ ಗ್ರಾಮ ಪಂಚಾಯ್ತಿ ಸದಸ್ಯ ದೊಡ್ಡಪ್ಪಯ್ಯ ಬೆಂಬಲಿಗರ ನಡುವೆ ಮಾತಿನ ಚಕಮಕಿ ನಡೆದಿತ್ತು.


ಜುಲೈ 21ರ ಶುಕ್ರವಾರ ಮತ್ತೆ ಸಭೆ ನಡೆದ ಸಂದರ್ಭದಲ್ಲಿ ಸದಸ್ಯ ದೊಡ್ಡಪ್ಪಯ್ಯ ಹಾಲಿ ಅಧ್ಯಕ್ಷೆ ಅನುಸೂಯಮ್ಮ ಆ ಸ್ಥಾನದಲ್ಲಿ ಮುಂದುವರೆಯಲಿ ಎಂಬ ಅಭಿಪ್ರಾಯವನ್ನು ಮಂಡಿಸಿದಾಗ ವಡಗೂರು ನಾಗರಾಜ್ ಮತ್ತು ದೊಡ್ಡಪ್ಪಯ್ಯ ಪರಸ್ಪರ ಅವಾಚ್ಯ ಶಬ್ದಗಳಿಂದ ನಿಂದಿಸಿ ಕೊಂಡಿದ್ದರು. ಈ ಸಂದರ್ಭದಲ್ಲಿ ನಾಗರಾಜ ಆಸಿಡ್ ಹಾಕಿ ಕೊಲ್ಲುವುದಾಗಿ ದೊಡ್ಡಪ್ಪಯ್ಯನಿಗೆ ಬೆದರಿಕೆ ಹಾಕಿದ. ತಂದೆಗೆ ಕೊಲೆ ಬೆದರಿಕೆ ಹಾಕಿದ ನಾಗರಾಜನನ್ನು ಅಂದು ಸಂಜೆಯೇ ಮೊಬೈಲ್‌ನಲ್ಲಿ ಸಂಪರ್ಕಿಸಿದ ದೊಡ್ಡಪ್ಪಯ್ಯನ ಮಗ ಹರೀಶ್ ಪ್ರತಿಬೆದರಿಕೆಯನ್ನು ಹಾಕಿದ್ದಾನೆ.



ನಾಗರಾಜ

ಈ ಬೆಳವಣಿಗೆಯ ನಂತರ ತಕ್ಷಣವೇ ಡಿ.ಎಲ್.ನಾಗರಾಜ್ ಗ್ರಾಮದಲ್ಲಿನ ತಮ್ಮ ಬೆಂಬಲಿಗರಿಗೆ ದೂರವಾಣಿ ಮೂಲಕ ಹರೀಶ್ ಬೆದರಿಕೆಯ ವಿಷಯವನ್ನು ತಿಳಿಸಿ ಮುಂದಿನ ಸಿದ್ಧತೆಗಳಿಗಾಗಿ ಮಾರ್ಗದರ್ಶನವನ್ನು ನೀಡಿದ್ದಾನೆ. ನಾಗರಾಜನ ಮಾರ್ಗದರ್ಶನವನ್ನು ನಿರಾಕರಿಸಿದ ಬೆಂಬಲಿಗರ ಪೈಕಿ ಕೆಲವರು, ನಮ್ಮೂರಿನ ರಾಜಕೀಯದ ಉಸಾಬರಿ ನಿನಗೆ ಬೇಕಾಗಿಲ್ಲ, ನೀನು ಊರಿಗೆ ಬಾರದೆ ಕೋಲಾರದಲ್ಲಿಯೇ ಉಳಿದು ಬಿಡು ಎಂದು ಹಿತವಚನ ಹೇಳಿದರೂ ಕಿವಿಗೊಡದಿದ್ದುದೇ ಮುಂದಿನ ಮಾರಣಹೋಮಕ್ಕೆ ಕಾರಣವಾಗಿದೆ.

ಶನಿವಾರ ಬೆಳಗ್ಗೆ ಆರೂವರೆ ಸಮಯದಲ್ಲಿ ವಡಗೂರು ಗ್ರಾಮಕ್ಕೆ ಆಗಮಿಸಿದ ನಾಗರಾಜ ತನ್ನ ಪುಡಾರಿ ಬೆಂಬಲಿಗರೊಂದಿಗೆ ದೊಡ್ಡಪ್ಪಯ್ಯನ ಮನೆ ಮುಂದೆ ಗುಂಪು ಕಟ್ಟಿಕೊಂಡು ಅನಗತ್ಯವಾಗಿ ಗಲಾಟೆ ಮಾಡಲು ಆರಂಭಿಸಿದ್ದಾನೆ. ನಾಗರಾಜನ ಬೆಂಬಲಿಗರ ದುಂಡಾವರ್ತನೆ ಕುರಿತು ದೊಡ್ಡಪ್ಪಯ್ಯನ ಮಗ ಹರೀಶ್ ಮೊಬೈಲ್ ಮೂಲಕ ಶಾಸಕ ಶ್ರೀನಿವಾಸಗೌಡ, ಬೆಗ್ಲಿ ಸೂರ್ಯಪ್ರಕಾಶ್ ಮತ್ತಿತರ ಮುಖಂಡರಿಗೆ ವಿಷಯ ಮುಟ್ಟಿಸಿದ್ದಾನೆ. ಒಂದು ಹಂತದಲ್ಲಿ ದೊಡ್ಡಪ್ಪಯ್ಯನ ಮನೆಗೆ ಗುಂಪು ನುಗ್ಗಬಹುದೆಂಬ ಭೀತಿ ಸೃಷ್ಟಿಯಾಗಿ ಆತ್ಮರಕ್ಷಣೆಗಾಗಿ ಮನೆಯಲ್ಲಿನ ಪರವಾನಗಿ ಹೊಂದಿದ್ದ ಡಬಲ್ ಬ್ಯಾರೆಲ್ ಬಂದೂಕಿನಿಂದ ಎದುರು ಗುಂಪಿನ ಮೇಲೆ ದೊಡ್ಡಪ್ಪಯ್ಯ ಗುಂಡು ಹಾರಿಸಿದಾಗ ನಾಗರಾಜನ ಗುಂಪಿನಲ್ಲಿದ್ದ ಜಯರಾಮ್, ನಾರಾಯಣಪ್ಪ ಹಾಗೂ ಲಕ್ಷ್ಮೀಪತಿ ತೀವ್ರವಾಗಿ ಗಾಯಗೊಂಡು ಕುಸಿದು ಬಿದ್ದಿದ್ದಾರೆ. ಮೂವರನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ ಜಯರಾಮ್ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ.



ಜಯರಾಮ್

ಇದರಿಂದ ಕುಪಿತಗೊಂಡ ನಾಗರಾಜನ ನೇತೃತ್ವದ ಸುಮಾರು ಇಪ್ಪತ್ತು ಮಂದಿಯ ಗುಂಪು ದೊಡ್ಡಪ್ಪಯ್ಯನ ಮನೆ ಮೇಲೆ ಎರಗಿತು. ಲಾಂಗ್, ಮಚ್ಚು ಮತ್ತು ದೊಣ್ಣೆಗಳಿಂದ ಸಜ್ಜಿತರಾಗಿದ್ದ ಗುಂಪು ಮನೆಯಲ್ಲಿದ್ದ ದೊಡ್ಡಪ್ಪಯ್ಯನ್ನು ಅಟ್ಟಾಡಿಸಿ ದಾರುಣವಾಗಿ ಕೊಚ್ಚಿಹಾಕಿತು. ಈ ಸಂದರ್ಭದಲ್ಲಿ ದೊಡ್ಡಪ್ಪಯ್ಯನ ಮಕ್ಕಳಾದ ಹರೀಶ್ ಮತ್ತು ಸೋಮಶೇಖರ್‌ರನ್ನು ಅವರ ಮನೆಯವರೇ ಸ್ನಾನದ ಕೊಠಡಿಯಲ್ಲಿ ಕೂಡಿ ಹಾಕಿದ್ದರಿಂದ ಪ್ರಾಣ ಉಳಿಸಿಕೊಂಡಿದ್ದಾರೆ. ಇಷ್ಟಕ್ಕೂ ತೃಪ್ತರಾಗದ ರಕ್ತದಾಹಿ ನಾಗರಾಜ ನೇತೃತ್ವದ ಗುಂಪು ಮನೆ ಮುಂದಿದ್ದ ಪಲ್ಸರ್ ದ್ವಿಚಕ್ರ ವಾಹನಕ್ಕೆ ಬೆಂಕಿಯಿಟ್ಟಿತಲ್ಲದೆ ಪಕ್ಕದಲ್ಲಿದ್ದ ಸ್ಯಾಂಟ್ರೋ ಕಾರ್‌ನ್ನು ಜಖಂಗೊಳಿಸಿತು.

ಬಿಲದಲ್ಲಿದ್ದ ನಾಗರಹಾವೂ....., ಹೊರಗೆ ಎಳೆ ತಂದ ಪೊಲೀಸರೂ!

ಬಿಸಿರಕ್ತವಿದ್ದ ಕಾಲದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಗೂಂಡಾ ಎಂದೇ ಬಿಂಬಿತವಾಗಿದ್ದ ನಾಗರಾಜ ಶನಿವಾರ ಬೆಳಗ್ಗೆ ವಡಗೂರು ಗ್ರಾಮದಲ್ಲಿ ನಡೆದ ಜೋಡಿಕೊಲೆ ಘಟನೆಯ ನಂತರ ಪೊಲೀಸರಿಗೆ ಹೆದರಿ ಅವಿತುಕೊಂಡಿದ್ದುದು ಆರ್.ಎಲ್.ಜಾಲಪ್ಪ ಆಸ್ಪತ್ರೆಯ ಕ್ಷ-ಕಿರಣ ವಿಭಾಗದ ಕೊಠಡಿಯಲ್ಲಿ!.

ಕೊಲೆಯಾದ ನಂತರ ಸ್ಥಳದಿಂದ ಪರಾರಿಯಾದ ನಾಗರಾಜನನ್ನು ಬಂಧಿಸಲು ಪೊಲೀಸರು ತಲಾಷೆ ನಡೆಸಿದ್ದರು. ರಾಷ್ಟ್ರೀಯ ಹೆದ್ದಾರಿಯಲ್ಲಿ ಜೀಪ್‌ಗಳನ್ನು ನಿಲ್ಲಿಸಿಕೊಂಡ ಪೊಲೀಸರು ನಾಗರಾಜ ಪರಾರಿಯಾಗದಂತೆ ವಾಹನಗಳ ತಪಾಸಣೆ ನಡೆಸುತ್ತಿದ್ದರು.. ಕೆಲವು ಘಂಟೆಯ ನಂತರ ನಾಗರಾಜ ಸಮೀಪದ ಜಾಲಪ್ಪ ಆಸ್ಪತ್ರೆ ಆವರಣದಲ್ಲಿ ಕಾಣಿಸಿಕೊಂಡ ಎಂಬ ಮಾಹಿತಿ ಪಡೆದ ಜಿಲ್ಲಾ ಎಸ್ಪಿ ರವೀಂದ್ರಪ್ರಸಾದ್ ಕೂಡಲೇ ಸ್ಥಳಕ್ಕೆ ಧಾವಿಸಿದರು.


ಜಾಲಪ್ಪ ಆಸ್ಪತ್ರೆಯ ಸುತ್ತಲೂ ನೂರಕ್ಕೂ ಹೆಚ್ಚು ಪೊಲೀಸರನ್ನು ಬಿಗಿ ಪಹರೆ ಹಾಕಿದ ಎಸ್ಪಿ ರವೀಂದ್ರಪ್ರಸಾದ್, ಆಸ್ಪತ್ರೆಯಲ್ಲಿನ ಶೌಚಾಲಯಗಳನ್ನೂ ಬಿಡದೆ ಪ್ರತಿ ವಿಭಾಗಗಳ ಕೋಣೆಗಳನ್ನು ತಪಾಸಣೆ ನಡೆಸಿದರೂ ನಾಗರಾಜ ಕಾಣಲಿಲ್ಲ. ಬಹಳ ಸಮಯದಿಂದಲೂ ಬೀಗ ಹಾಕಿದ್ದ ಎಕ್ಸ್‌ರೇ ಕೋಣೆಯನ್ನು ತೆರೆಯುವಂತೆ ಆಸ್ಪತ್ರೆ ಸಿಬ್ಬಂದಿಗೆ ಸೂಚಿಸಿದ ಎಸ್ಪಿಗೆ, ಅಲ್ಲೇ ಅವಿತು ಕುಳಿತಿದ್ದ ನಾಗರಾಜ ಕಂಡುಬಂದಿದ್ದಾನೆ. ಕೊಠಡಿಯ ಸಹಾಯಕನನ್ನು ಬೀಗ ಹಾಕಿದ್ದರ ಬಗೆಗೆ ವಿಚಾರಿಸಿದಾಗ ನಾಗರಾಜನೇ ಬಂದು ಬೀಗ ಹಾಕಿಕೊಂಡು ಹೋಗುವಂತೆ ತಿಳಿಸಿದ್ದಾಗಿ ಹೇಳಿದ.



ಎಸ್ಪಿ ರವೀಂದ್ರ ಪ್ರಸಾದ್

ಪೊಲೀಸರ ವಶಕ್ಕೆ ದೊರೆತ ನಾಗರಾಜನನ್ನು ಹೊರಕ್ಕೆ ಎಳೆದು ತಂದಾಗ ಎದೆ ನೋವೆಂದು ಹೇಳಿ ಕುಸಿದು ಬಿದ್ದಿದ್ದಾನೆ. ಒಂದು ಕಾಲದಲ್ಲಿ ಪೊಲೀಸರಲ್ಲಿ ಮತ್ತು ಗ್ರಾಮೀಣ ಜನರಲ್ಲಿ ಏಕಕಾಲಕ್ಕೆ ಭೀತಿ ಮೂಡಿಸಿದ್ದ ನಾಗರಾಜ ಈಗ ಹಲ್ಲು ಕಿತ್ತ ಹಾವಿನಂತಾಗಿಬಿಟ್ಟಿದ್ದಾನೆ.

-ವರದಿಗಾರ



ರೇವಣ್ಣ ಹೇಳಿದ್ದೇ ಕಾನೂನು!

ಹಾಸನ

ಹಾಸನದಲ್ಲೀಗ ರೇವಣ್ಣನ ದರ್ಬಾರೋ ದರ್ಬಾರು.

ತನ್ನನ್ನು ಭೇಟಿಯಾಗದ ಅಧಿಕಾರಿಯನ್ನು ಸ್ಪಾಟ್‌ನಲ್ಲೇ ಅರೆಸ್ಟ್ ಮಾಡಿಸಬಲ್ಲ ಈ ಪಾಳೆಗಾರ! ಸವಲತ್ತು ಒದಗಿಸಿ ಎನ್ನುವ ಮಹಿಳಾ ಪ್ರಿನ್ಸಿಪಾಲರಿಗೆ ವಾಚಾಮಗೋಚರವಾಗಿ ಪಬ್ಲಿಕ್‌ನಲ್ಲೇ ಉಗಿದು ದರ್ಪ ತೋರಿಸುವ ಗರ್ವಿಷ್ಠ ಈ ರೇವಣ್ಣ.

ಮೊನ್ನೆ ಈ ರೇವಣ್ಣ ಸಾಹೇಬರ ಕಾರು ಹಾಸನದ ಬೈಪಾಸ್ ರಸ್ತೆಯಲ್ಲಿ ಬರುತ್ತಿತ್ತು, ಅಲ್ಲಿ RTO ಇನ್ಸ್‌ಪೆಕ್ಟರ್ ಬಸವರಾಜ್ ಮೈನ್ಸ್ ಲಾರಿಗಳ ತಪಾಸಣೆ ಮಾಡುತ್ತಿದ್ದರು. ಸೀದಾ ಈ ಅಧಿಕಾರಿಯ ಬಳಿಗೆ ರೇವಣ್ಣನ ಕಾರು ನುಗ್ಗಿತು. ಪಕ್ಕದಲ್ಲಿದ್ದ ಸಬ್ ಇನ್ಸ್‌ಪೆಕ್ಟರ್‌ಗೆ RTO ಅಧಿಕಾರಿ ಬಸವರಾಜ್‌ರನ್ನು ಅರೆಸ್ಟ್ ಮಾಡುವಂತೆ ಸ್ಥಳದಲ್ಲೇ ಆರ್ಡರ್ ನೀಡಿದ ರೇವಣ್ಣ.

ಬಸವರಾಜ್‌ರನ್ನು ಜೈಲಿಗೆ ಹಾಕಿ ಎಂದು ಡಿ.ಸಿ. ಎಸ್.ಪಿ.ಗಳಿಗೆ ಧಮಕಿ ಹಾಕಲಾಯ್ತು. ಕೊನೆಗೆ ದಳದ ಕಾರ್ಯಕರ್ತರೇ "ಬಸವರಾಜ್ ಒಳ್ಳೆ ಅಧಿಕಾರಿ. ಅವರನ್ನು ಬಿಟ್ಟು ಬಿಡಿ" ಎಂದಾಗ ದೊರೆ ರೇವಣ್ಣ ಬಸವರಾಜ್‌ಗೆ ಮುಕ್ತಿ ನೀಡಿದ್ದಾನೆ. ಹೇಗಿದೆ ನೋಡಿ ರೇವಣ್ಣನ ರಾಜ್ಯ! ಹಾಸನಕ್ಕೆ ವರ್ಗ ಆಗಿ ಬಂದು ತಿಂಗಳಾದರೂ ಬಸವರಾಜ್ ರೇವಣ್ಣನನ್ನು ಭೇಟಿ ಆಗದೇ ಇದ್ದುದೇ ಈ ಅರೆಸ್ಟ್ ಪ್ರಕರಣಕ್ಕೆ ಕಾರಣವಂತೆ!!

"ನಡ್ರೀ ಆಚೆಗೆ"

ಕಳೆದ ವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಸಭೆ ಕರೆದಿದ್ದ ರೇವಣ್ಣ ಹೊಸದಾಗಿ ಮಂಜೂರಾದ ಕಾಲೇಜುಗಳಿಗೆ ಬೆಂಚು, ಬೋರ್ಡು, ಉಪನ್ಯಾಸಕರನ್ನು ಸರ್ಕಾರಿ ಕಲಾ ಕಾಲೇಜಿನಿಂದ ಕಳಿಸಿ ಕೊಡಿ ಎಂದು ಆರ್ಡರ್ ಮಾಡಿದ. ಸರ್ಕಾರಿ ಕಲಾ ಕಾಲೇಜಿನಲ್ಲೇ ಯಾವ ವ್ಯವಸ್ಥೆಗಳೂ ಸರಿಯಾಗಿಲ್ಲ. ಆಗ ಪ್ರಿನ್ಸಿಪಾಲ್ ಶೋಭಾ ಪಟ್ನಾಯಕ್ ಎದ್ದು ನಿಂತು "ನಮ್ಮ ಕಾಲೇಜಿನ 2000 ವಿದ್ಯಾರ್ಥಿಗಳಿಗೇ ಕೂಡ್ಲು ಬೆಂಚಿಲ್ಲ, ಪಾಠ ಮಾಡಲು ಲೆಕ್ಚರರ್ ಇಲ್ಲ...." ಎಂದು ಪರಿಸ್ಥಿತಿಯನ್ನು ವಿವರಿಸಲು ಯತ್ನಿಸಿದ್ದೇ ತಡ,

"ಏನ್ರೀ, ನೀವು ನನಗೇ ಎದುರುತ್ತರ ಕೊಡ್ತಿರಾ? ನನ್ನ ಮುಂದೇನೇ ಬಾಲ ಬಿಚ್ಚುತ್ತೀರಾ? ನಿಮ್ಮಾಟ ನನ್ನತ್ರ ನಡೆಯೊಲ್ಲ, ನೀವು ಇಲ್ಲಿರೋ ಅಗತ್ಯ ಇಲ್ಲ, ನಡ್ರೀ ಆಚೆಗೆ" ಎಂದು ಒರಟನಂತೆ ಚೀರಾಡಿಬಿಟ್ಟ ರೇವಣ್ಣ ಎಂಬ ಈ ಮಾಜಿ ಪ್ರಧಾನಿಯ ಪುತ್ರ! ಸ್ವಾಭಿಮಾನದ ಶೋಭಾ ಮೇಡಂ ನಾಲ್ಕು ತಿಂಗಳ ರಜೆ ಹಾಕಿ ಪ್ರತಿಭಟನೆ ಸಲ್ಲಿಸಿಬಿಟ್ಟಿದ್ದಾರೆ. ಇಂತಹುದೆಲ್ಲ ರೇವಣ್ಣನಿಗೆ ತಟ್ಟುವುದೇ ಇಲ್ಲ ಬಿಡಿ!

ಇಲ್ಲಿ ಎ.ಎಸ್.ಪಿಯಾಗಿದ್ದ ಪ್ರಕಾಶ್ ಎಂಬಾತ


ಆಧುನಿಕ ದುಶ್ಯಾಸನರ ರಕ್ಷಣೆಗೆ ನಿಂತ ಖಾಕಿ ಮಹಿಮರು!

ಆದಿ ಉಡುಪಿಯಲ್ಲಿ ಹಾಜಬ್ಬ-ಹಸನಬ್ಬ ಎಂಬಿಬ್ಬರನ್ನು ಬೆತ್ತಲೆ ಮಾಡಿದ ಪ್ರಕರಣದಲ್ಲಿ ಆರೋಪಿಗಳಾಗಿರುವವರೂ ನಾಚಿ ತಲೆ ತಗ್ಗಿಸುವಂತಹ ಘಟನೆಯೊಂದು ಮಂಗಳೂರಿನಲ್ಲಿ ನಡೆದಿದೆ.

ಅಕ್ರಮ ಜಾಲವೊಂದಕ್ಕೆ ಸೇರಿದ ಆರು ಮಂದಿಯ ತಂಡ, ಇಡೀ ಮೂರು ದಿನಗಳ ಕಾಲ ವಿವಾಹಿತ ಯುವತಿಯೋರ್ವಳ ಸಹಿತ ಮೂವರನ್ನು ಒಂದೇ ಕೋಣೆಯಲ್ಲಿ ಸಂಪೂರ್ಣವಾಗಿ ಬೆತ್ತಲೆಗೊಳಿಸಿ, ದಿಗ್ಬಂಧನದಲ್ಲಿರಿಸಿ, ತೀವ್ರವಾಗಿ ಹಲ್ಲೆ ನಡೆಸಿದ್ದಾರೆ. ಸ್ವಯಂ ಸೇವಾ ಸಂಘಟನೆಗಳ ನಾಯಕರು ಹಾಗೂ ಪತ್ರಕರ್ತರು ಈ ಅಪರಾಧ ಕೃತ್ಯವನ್ನು ಬಹಿರಂಗಕ್ಕೆ ತಂದ ಕೆಲವೇ ಗಂಟೆಗಳಲ್ಲಿ ಆರೋಪಿಗಳ ಪರ ವಕಾಲತ್ತಿಗೆ ನಿಂತ ಮಂಗಳೂರಿನ ಪೊಲೀಸರು ಪ್ರಕರಣಕ್ಕೆ ಎಳ್ಳು-ನೀರು ಬಿಟ್ಟು ಕೈತೊಳೆದುಕೊಂಡಿದ್ದಾರೆ.

ಹಕ್ಕಿ-ಪಿಕ್ಕಿಗಳು

ಶ್ರೀಮತಿ ಸಕುಬಾಯಿ(25), ಪ್ರಭು ಹಾಗೂ ಉಮೇಶ್ ದೌರ್ಜನ್ಯಕ್ಕೊಳಗಾದವರು. ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರು ತಾಲ್ಲೂಕಿನ ಗೌತಮ ನಗರ ಸಮೀಪದ ಹಕ್ಕಿಪಿಕ್ಕಿ ಕ್ಯಾಂಪ್‌ಗೆ ಸೇರಿದ ಇವರದು ರುದ್ರಾಕ್ಷಿ ಮಾಲೆ ಮತ್ತು ಪ್ಲಾಸ್ಟಿಕ್ ಹೂ ಮಾರಾಟ ಮಾಡಿ ಬದುಕುವ ಬಡ ಕುಟುಂಬ.



ಊರೂರು ಸಂಚರಿಸಿ ರುದ್ರಾಕ್ಷಿ ಮಾಲೆ ಮಾರಾಟ ಮಾಡುತ್ತಾ ಅಲೆಮಾರಿ ಜೀವನ ಸಾಗಿಸುವ ಇವರ ತಂಡ ತಿಂಗಳ ಹಿಂದೆ ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿರುವ ಷಣ್ಮುಕಪ್ಪ ಎಂಬುವರ ಮನೆಗೂ ಭೇಟಿ ಕೊಟ್ಟಿತು.

ರುದ್ರಾಕ್ಷಿ ಮಾಲೆ ಮಾರಾಟ ಮಾಡುವವರಲ್ಲಿ ಷಣ್ಮುಕಪ್ಪ ವಿಚಾರಿಸಿದ್ದು 'ಗಜಮಣಿ'ಯ ಬಗ್ಗೆ. ಹಕ್ಕಿಪಿಕ್ಕಿಗಳಿಗೆ ಗಜಮಣಿ ಎಂದರೆ ಏನೆಂದೇ ಗೊತ್ತಿರಲಿಲ್ಲ. ಷಣ್ಮುಕಪ್ಪ ಗಜಮಣಿ ಹೇಗಿರುತ್ತದೆ ಎಂದು ವಿವರ ನೀಡಿದ. ತಂದು ಕೊಟ್ಟರೆ 5 ಸಾವಿರ ಕೊಡುವುದಾಗಿ ಆಮಿಷ ಒಡ್ಡಿದ.

ಗಜಮಣಿಯ ಬಗ್ಗೆ ಕೇಳಿಯೇ ಗೊತ್ತಿಲ್ಲದಿದ್ದ ಇವರು ಅದನ್ನು ತರುವುದಾದರೂ ಎಲ್ಲಿಂದ? ಆದರೆ, ಒಂದೇ ಪಟ್ಟಿಗೆ 5 ಸಾವಿರ ರೂಪಾಯಿ ಗಳಿಸುವ ದುರಾಸೆ. ಹಕ್ಕಿ-ಪಿಕ್ಕಿ ಕ್ಯಾಂಪ್‌ನಲ್ಲಿಯೇ ಕುಳಿತು ಪ್ರಭು ಎಂಬ 22ರ ತರುಣ ಸಿಮೆಂಟ್‌ಗೆ ಕೋಳಿ ಚರ್ಮದ ಹೊದಿಕೆ ಮಾಡಿ ಷಣ್ಮುಕಪ್ಪ ಕೊಟ್ಟ ವಿನ್ಯಾಸದಂತೆಯೇ ಒಂದು ನಕಲಿ ಗಜಮಣಿ ಸೃಷ್ಟಿಸಿದ.

ಬಯಸಿದ್ದು ಸಿಕ್ಕಿದ ಬಗ್ಗೆ ಷಣ್ಮುಕಪ್ಪನಿಗೆ ಖುಷಿ. ಆತ ಐದು ಸಾವಿರ ಕೊಟ್ಟು ಹಿರಿಹಿರಿ ಹಿಗ್ಗಿದ. ಷಣ್ಮುಕಪ್ಪನೊಂದಿಗೆ ಅಕ್ರಮ ಜಾಲದಲ್ಲಿ ಸಕ್ರಿಯನಾಗಿರುವ ಮಂಗಳೂರಿನ ಯೋಗೀಶ್ ಮಲ್ಯನಿಗೆ ವಿಷಯ ರವಾನೆಯಾಯಿತು.

ಷಣ್ಮುಕಪ್ಪ ಹಾಗೂ ಯೋಗೀಶ್ ಮಲ್ಯರ ನಡುವೆ ವ್ಯವಹಾರ ಕುದುರಿತು. ಆರು ಗಜಮಣಿಗಾಗಿ ಯೋಗೀಶ್ ಮಲ್ಯ ಷಣ್ಮುಕಪ್ಪರ ಮುಂದೆ ಬೇಡಿಕೆ ಇಟ್ಟ. ಹಣ ಪಡೆದ ಷಣ್ಮುಕಪ್ಪ ಹಕ್ಕಿಪಿಕ್ಕಿಗಳಿಗೆ ವಿಷಯ ತಿಳಿಸಿದರು.

ಗಜಮಣಿಯ ವ್ಯವಹಾರ ನಡೆಸಿದವರು ಹೊನ್ನಾಳಿಯ ಷಣ್ಮುಕಪ್ಪ ಹಾಗೂ ಮಂಗಳೂರಿನ ಯೋಗೀಶ್ ಮಲ್ಯ. ಇವರ ವ್ಯವಹಾರದ ನಡುವೆ ಸಿಕ್ಕಿಬಿದ್ದವರು ಮಾತ್ರ ಈ ಹಕ್ಕಿಪಿಕ್ಕಿ ಜನರು!

ಯೋಗೀಶ್ ಮಲ್ಯ ಹಕ್ಕಿಪಿಕ್ಕಿಗಳನ್ನು ಮಂಗಳೂರಿಗೆ ಕರೆಸಿದ್ದಾನೆ. ಜುಲೈ 7 ರಂದು ಸಂಜೆ ಮಂಗಳೂರಿಗೆ ಬಂದಿಳಿದಿದ್ದಾರೆ ಸುಕುಬಾಯಿ, ಪ್ರಭು, ಉಮೇಶ್ ಹಾಗೂ ಪ್ರಸನ್ನ. ಮಲ್ಯನ ಸೂಚನೆಯಂತೆ ಆಟೋರಿಕ್ಷಾದ ಮೂಲಕ ಬಲ್ಮಠ ರಸ್ತೆಯಲ್ಲಿರುವ ರೂಪಾ ಲಾಡ್ಜ್‌ಗೆ ತೆರಳಿದ್ದಾರೆ. ನಾಲ್ವರನ್ನೂ ಕೊಠಡಿ ಸಂಖ್ಯೆ 203 ರಲ್ಲಿ ಉಳಿದುಕೊಳ್ಳಲು ತಿಳಿಸಿದ ಮಲ್ಯ ಅಂದುರಾತ್ರಿ ಮತ್ತು ಮರುದಿನ ಬೆಳಗ್ಗೆ ಭರ್ಜರಿ ಊಟ, ತಿಂಡಿ ಕೊಡಿಸಿದ್ದಾನೆ.

ಬೆತ್ತಲೆ ಮಾಡಿದರು

ಕೊಠಡಿ ಸಂಖ್ಯೆ 203 ರಲ್ಲಿ ಹಕ್ಕಿಪಿಕ್ಕಿಗಳ ಜತೆಗೆ ಮಲ್ಯ ಗ್ಯಾಂಗ್ ಇತ್ತು. ಗಜಮಣಿಯನ್ನು ಪರೀಕ್ಷಿಸುವ ಸಲುವಾಗಿಯೇ ಡೆಲ್ಲಿಯಿಂದ ಬಂದಿದ್ದ ಅನಾಮಧೇಯ ವ್ಯಕ್ತಿಯೂ ಅಲ್ಲಿದ್ದ. ಪರೀಕ್ಷೆಯಲ್ಲಿ ಗಜಮಣಿಯ ಅಸಲಿತನ ಬಯಲಾಯಿತು.

ಪ್ರಭುವಿನ ತಲೆಗೆ ಬಿತ್ತು ಮೊದಲ ಪೆಟ್ಟು. ಪೆಟ್ಟಿನ ಹಿಂದೆ ಪೆಟ್ಟು. ಪ್ರಭುವನ್ನು ಹಣ್ಣುಗಾಯಿ ನೀರುಗಾಯಿ ಮಾಡಿದ ಮಲ್ಯ ಗ್ಯಾಂಗ್ ಪ್ರಸನ್ನ ಒಬ್ಬನನ್ನು ಮಾತ್ರ ಬಿಟ್ಟುಬಿಟ್ಟರು. 50 ಸಾವಿರ ತರುವಂತೆ ತಿಳಿಸಿದರು. 50 ಸಾವಿರ ಕೊಡದಿದ್ದರೆ ಉಳಿದವರನ್ನು ಬಿಡಲಾಗುವುದಿಲ್ಲವೆಂದು ತಾಕೀತು ಮಾಡಿ ಬೆದರಿಕೆ ಒಡ್ಡಿದರು.

ಪ್ರಸನ್ನನನ್ನು 203 ರೂಮಿನಿಂದ ಬಿಡುಗಡೆ ಮಾಡುತ್ತಲೇ ಉಳಿದ ಮೂವರನ್ನೂ ಸಂಪೂರ್ಣ ನಗ್ನಗೊಳಿಸಿದ್ದಾರೆ.

ಮಾಡಬಾರದ್ದನ್ನೆಲ್ಲ ಮಾಡಿದರು

ಜುಲೈ 8 ರ ಬೆಳಗ್ಗೆಯಿಂದ 11 ರ ಬೆಳಗ್ಗೆವರೆಗೆ ಬೆತ್ತಲೆಯಾಗಿಯೇ ಇದ್ದ ಹಕ್ಕಿಪಿಕ್ಕಿಗಳ ಮಾನಸಿಕ ಮತ್ತು ದೈಹಿಕಯಾತನೆ ಯಾವ ಶತ್ರುವಿಗೂ ಬೇಡ.

ಯೋಗೀಶ್ ಮಲ್ಯ ಮತ್ತು ಈತನ ನೇತೃತ್ವದ ಐದು ಮಂದಿಯ ಗ್ಯಾಂಗ್ ಇಸ್ಪೀಟು ಆಡುತ್ತಾ, ವಿಸ್ಕಿ ಕುಡಿಯುತ್ತಾ ಮಾಡಬಾರದ್ದನ್ನೆಲ್ಲಾ ಮಾಡಿದರು. ವಿವಾಹಿತ ಯುವತಿ, ಇತರ ಇಬ್ಬರು ಯುವಕರೊಂದಿಗೆ ಒಂದೇ ರೂಮಿನಲ್ಲಿ ಬೆತ್ತಲೆಯಾಗಿದ್ದರೆ... ಮಲ್ಯ ಗ್ಯಾಂಗಿನ ರಾಕ್ಷಸತ್ವ ಮಾತ್ರ ಮೇರೆ ಮೀರಿತ್ತು.

ಜುಲೈ 11ರ ಕಾರ್ಯಾಚರಣೆ

ಜುಲೈ 11 ರ ಬೆಳಗ್ಗೆ ಪ್ರಸನ್ನ, ಪುಲ್‌ವಾ ಬಾಯಿ ಎಂಬುವರಲ್ಲದೆ, 6-7 ಜನರೊಂದಿಗೆ ಮಂಗಳೂರಿಗೆ ಮರಳಿದ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ, ಶಿವಮೊಗ್ಗ ಜಿಲ್ಲಾ ಸಂಚಾಲಕರಾದ ಎನ್. ಮಲ್ಲಿಕಾರ್ಜುನ ಎಂಬುವರು ಇದೇ ಸಂಘಟನೆಯ ದಕ್ಷಿಣ ಕನ್ನಡ ಜಿಲ್ಲಾ ಸಂಚಾಲಕರಾದ ಮಾಲಿಂಗಮ್ ಎಂಬವರ ಹೆಸರಿಗೆ ಬರೆದ, ಹಕ್ಕಿಪಿಕ್ಕಿಗಳ ಸಮಸ್ಯೆಯನ್ನು ಬಗೆಹರಿಸಲು ಸಹಕರಿಸಿ ಎಂದು ಕೇಳಿಕೊಂಡ ಪತ್ರ ಮಾತ್ರ ಪ್ರಸನ್ನ, ಪುಲವಾಬಾಯಿ ಹಾಗೂ ಇತರರಿಗೆ ಆಶಾಕಿರಣವಾಗಿತ್ತು.

ಮಂಗಳೂರು

6-7 ಜನರ ಹಕ್ಕಿಪಿಕ್ಕಿ ತಂಡ ಮಾಲಿಂಗಮ್‌ಗಾಗಿ ಇಡೀ ಮಂಗಳೂರು ಸುತ್ತಾಡಿ ಹುಡುಕಿದರು. ಆದರೆ ಅವರು ಸಿಗಲಿಲ್ಲ. ಮಂಗಳೂರು ಮಹಾನಗರ ಪಾಲಿಕೆ ಮಾಜಿ ಮೇಯರ್ ಕೆ. ದಿವಾಕರ್ ಮೂಲಕ ಹಕ್ಕಿಪಿಕ್ಕಿ ಜನರಿಗೆ ಕೊನೆಗೂ ಸಹಕರಿಸಲು ಸಿಕ್ಕಿದವರು ಲೋಲಾಕ್ಷ.

ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಸಂಘ-ಸಂಸ್ಥೆಗಳ ಮಹಾ ಒಕ್ಕೂಟದ ಅಧ್ಯಕ್ಷರಾದ ಲೋಲಾಕ್ಷ ಅವರ ವೆಲೋರೆಡ್ ನಿರ್ದೇಶಕರಾದ ರೆನ್ನಿ ಡಿಸೋಜರೊಂದಿಗೆ ಸೇರಿಕೊಂಡು 203 ರೂಮಿನಲ್ಲಿದ್ದ ಮೂವರನ್ನು ಬಂಧಮುಕ್ತಗೊಳಿಸುವ ಕಾರ್ಯಾಚರಣೆ ಆರಂಭಿಸಿದರು.



ಅಡಿಷನಲ್ ಎಸ್ಪಿ ಕೊಟ್ಟ ತೀರ್ಪು

ದಲಿತ ಸಮುದಾಯಕ್ಕೆ ಸೇರಿದ ಹಕ್ಕಿಪಿಕ್ಕಿಗಳನ್ನು ನೋಡುತ್ತಲೇ ಅಡಿಷನಲ್ ಎಸ್ಪಿ ಲೋಕೇಶ್ ಎಗರಾಡಿದ್ದಾರೆ. "ಇವರೇ ಯಾರಿಗಾದರೂ ಟೋಪಿ ಇಟ್ಟಿರಬೇಕು" ಎಂದು ವಿಚಾರಣೆ ನಡೆಸದೆ ತೀರ್ಪು ನೀಡಿದ್ದಾರೆ.

ಬಳಿಕ ರೌಡಿ ಸ್ಕ್ವಾಡ್‌ನ ಸಿಬ್ಬಂದಿಗಳ ಸಹಕಾರದೊಂದಿಗೆ 203ರ ರೂಮ್‌ನಲ್ಲಿರುವ ಬೆತ್ತಲೆಯಾಗಿದ್ದ ಮೂವರನ್ನು ಬಂಧಮುಕ್ತಗೊಳಿಸಲಾಯಿತು. ಜತೆಗೆ ಯೋಗೀಶ್ ಮಲ್ಯ ಹಾಗೂ ಪ್ರಶಾಂತ್ ಎಂಬಿಬ್ಬರನ್ನು ಬಂಧಿಸಲಾಯಿತು.

ಪಾಪಿಗಳಾದ ಪೊಲೀಸರು

ಸ್ವಯಂ ಸೇವಾ ಸಂಘಟನೆಗಳ ನಾಯಕರು ಹಾಗೂ ಮೂರ್‍ನಾಲ್ಕು ಮಂದಿ ಪತ್ರಕರ್ತರ ಕಣ್ಣೆದುರು ಆರೋಪಿಗಳನ್ನು ಬಂಧಿಸುವ ನಾಟಕವಾಡಿದ ರೌಡಿ ನಿಗ್ರಹ ದಳದ ರೌಡಿ ಪೊಲೀಸರು ನಂತರ ಉಲ್ಟಾ ಹೊಡೆದಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಆರು ಮಂದಿ ಆರೋಪಿಗಳ ವಿರುದ್ಧ ಮೊಕದ್ದಮೆ ದಾಖಲಿಸಬೇಕಾದ ಬಂದರು ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆರ್.ಬಿ. ಮಲೆದವರ (ರ್‍ಯಾಂಕ್ ಸಂ. 16978950) ಇನ್ಸ್‌ಪೆಕ್ಟರ್ ವಿನಯ ಗಾಂವ್‌ಕರ್ ಆದೇಶದಂತೆ ಸೆಕ್ಷನ್ 364(ಎ) ಮತ್ತು 343 ರಂತೆ ಕೇಸು ದಾಖಲಿಸಿ ಕೈ ತೊಳೆದುಕೊಂಡಿದ್ದಾರೆ.

ಆರೋಪಿಗಳ ಫೋಟೋಗಳನ್ನು ಪತ್ರಿಕಾ ಛಾಯಾಗ್ರಾಹಕರು ತೆಗೆಯದಂತೆ ನೋಡಿಕೊಂಡ ಗಾಂವ್‌ಕರ್, ಪೊಲೀಸರ ಸಾಧನೆಗಳ ಪ್ರಚಾರಕ್ಕಾಗಿಯೇ ಇರುವ ಬ್ಲಾಗ್‌ನಲ್ಲೂ ಈ ಪ್ರಕರಣದ ಕುರಿತು ಮಾಹಿತಿ ನೀಡದೆ, ತಾವು ತಿನ್ನಬಾರದವರ ಕೈಯಿಂದ ತಿನ್ನಬಾರದ್ದನ್ನೆಲ್ಲ ತಿಂದು ತೇಗಿಯಾಗಿದೆ ಎಂಬುದು ಬಟಾ ಬಯಲಾಗುವಂತೆ ಮಾಡಿದರು.

ಮಂಗಳೂರಿನ ಹೃದಯಭಾಗದ ಲಾಡ್ಜ್ ಒಂದರಲ್ಲಿ ಮೂರು ದಿನ ಮೂವರನ್ನು ಬೆತ್ತಲೆ ಮಾಡಿ, ತಂಡವೊಂದು ಮಾಡಬಾರದ್ದನ್ನೆಲ್ಲ ಮಾಡಿ ಸಿಕ್ಕಿಬಿದ್ದರೆ, ಬಂದರು ಪೊಲೀಸರು "ಯೋಗೀಶ್ ಮಲ್ಯ ಪಾಪ... ಒಳ್ಳೆಯ ಮನುಷ್ಯ" ಎಂದು ಹೇಳಿಕೊಂಡು ಸರ್ಟಿಫಿಕೇಟ್ ಕೊಡುತ್ತಿದ್ದಾರೆ.

ಅಹಿಂದ ನಾಯಕನ ಲಾಡ್ಜ್

ರೂಪಾ ಲಾಡ್ಜ್‌ನ ಮ್ಯಾನೇಜರ್ ಹಾಗೂ ಸಿಬ್ಬಂದಿಗಳು ಈ ಅಮಾನವೀಯ ಕೃತ್ಯದಲ್ಲಿ ಶಾಮೀಲಾಗಿದ್ದಾರೆ. ವೇಶ್ಯಾವಾಟಿಕೆ ಲಾಡ್ಜ್ ಎಂದೇ ನಗರದಲ್ಲಿ ಕುಖ್ಯಾತಿ ಗಳಿಸಿದ ಈ ಲಾಡ್ಜ್ ಮಾಲೀಕ 'ಅಹಿಂದ'ದ ನಾಯಕ ನವೀನ ಸುವರ್ಣ.


ರೂಪ ಲಾಡ್ಜ್‌ನಲ್ಲಿ ನಡೆದದ್ದು ದಲಿತ ದೌರ್ಜನ್ಯ ಪ್ರಕರಣ. ಆದರೆ ಈ ಪ್ರಕರಣವನ್ನು ಆರೋಪಿಗಳ ವಿರುದ್ಧ ದಾಖಲಿಸದೆ ಸ್ವತಃ ಪೊಲೀಸರೇ ಆರೋಪಿಗಳಾಗಿ ಬಿಟ್ಟಿದ್ದಾರೆ. ದಲಿತರನ್ನು ನೋಡಿದ ಕೂಡಲೇ ವಿಚಾರಣೆ ನಡೆಸದೆ ತೀರ್ಪು ನೀಡಿದ ಅಡಿಷನಲ್ ಎಸ್ಪಿ ಲೋಕೇಶ್ ಕುಮಾರ್, ದಲಿತ ದೌರ್ಜನ್ಯ ಪ್ರಕರಣದ ತನಿಖೆ ನಡೆಸಬೇಕಾದ ಸಿಟಿ ಡಿಎಸ್ಪಿ ಮಿತ್ರ ಹೆರಾಜೆ, ರೌಡಿ ನಿಗ್ರಹ ದಳದ ಇನ್ಸ್‌ಪೆಕ್ಟರ್ ವಿನಯ ಗಾಂವ್‌ಕರ್ ಹಾಗೂ ಬಂದರು ಸಬ್ ಇನ್ಸ್‌ಪೆಕ್ಟರ್ ಆರ್.ಬಿ. ಮಲ್ದೆವರ ಎಲ್ಲರೂ ದಲಿತರಿಗೆ ನ್ಯಾಯ ಒದಗಿಸದೆ ಅನ್ಯಾಯ ಮಾಡಿದ್ದಾರೆ. ಆರೋಪಿಗಳ ರಕ್ಷಣೆಗೆ ಬೇಕಾದ ಸಕಲ ಸೌಕರ್ಯಗಳನ್ನು ಅತ್ಯಂತ ಅಚ್ಚುಕಟ್ಟಾಗಿ ಮಾಡಿ ಮುಗಿಸಿದ್ದಾರೆ. ಹಾಗಾಗಿ ಇವರ ಮೇಲೆಯೇ ದಲಿತ ದೌರ್ಜನ್ಯದಡಿ ಕೇಸು ದಾಖಲಿಸುವ ತುರ್ತು ಉದ್ಭವಿಸಿದೆ.

ಮೂರು ದಿನ ಇಬ್ಬರು ಪುರುಷರೊಂದಿಗೆ ಬೆತ್ತಲೆಯಾಗಿದ್ದು, ವಿಕೃತ ಕಾಮಿಗಳಿಂದ ದೈಹಿಕ ಮತ್ತು ಮಾನಸಿಕ ಹಿಂಸೆಗೊಳಗಾದ ಯುವತಿ ಇದೇ ಪೊಲೀಸರ ಪತ್ನಿಯಂದಿರೋ, ಮಕ್ಕಳೋ ಆಗಿದ್ದರೆ ಇವರೇನು ಮಾಡುತ್ತಿದ್ದರು? ಖಾಕಿ ಖದೀಮರು ಇನ್ನಾದರೂ ಆತ್ಮಾವಲೋಕನ ಮಾಡಿಕೊಳ್ಳುವರೆ...?

'ಮಹಾಭಾರತ'ದಲ್ಲಿ ದುಶ್ಯಾಸನ ಕೊಟ್ಟ ಕಿರುಕುಳಕ್ಕಿಂತ ಹಿಂಸೆಯನ್ನು ಮಲ್ಯ ಗ್ಯಾಂಗ್ ಸಕುಬಾಯಿಗೆ ಕೊಟ್ಟಿದೆ...

–ಶ್ರೀರಾಮ್ [illegible]

ಗೌಡರ ಕುಟುಂಬದ ಬಾಲ ಎಂಬ ಒಂದೇ ಕಾರಣಕ್ಕೆ ಮಂಡ್ಯ ಜಿಲ್ಲಾ ಎಸ್ಪಿಯಾಗಿ ಬಡ್ತಿ ಹೊಂದಿದರು. ಅವರ ಜಾಗಕ್ಕೆ ಪ್ರಾಮಾಣಿಕ ಎ.ಎಸ್. ಪಿ. ತಮ್ಮಯ್ಯ ಬಂದಿದ್ದಾರೆ. ಹಿಂದೆ ಹಾಸನದಲ್ಲಿ ಸಬ್ ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ಒಳ್ಳೆ ಹೆಸರು ಗಳಿಸಿದ್ದ ತಮ್ಮಯ್ಯ ಈಗ ರೇವಣ್ಣನ ಶಿಷ್ಯಂದಿರ ಮಟ್ಕಾ, ಅಡ್ಡೆ ಇಸ್ಪೀಟು ಕ್ಲಬ್‌ಗಳ ಮೇಲೆ ಮುಗಿಬಿದ್ದು ಸಾರ್ವಜನಿಕರಿಂದ ಮತ್ತೊಮ್ಮೆ ಸೈ ಎನಿಸಿಕೊಂಡಿದ್ದಾರೆ. ಆದರೆ ರೇವಣ್ಣನ ಶಿಷ್ಯರ ಒತ್ತಡ ಹೇಗಿದೆ ಎಂದರೆ ಇಷ್ಟರಲ್ಲೇ ತಮ್ಮಯ್ಯನ ಎತ್ತಂಗಡಿ ಆಗುವ ಸಾಧ್ಯತೆಗಳಿವೆ.



ಪ್ರಿನ್ಸಿಪಾಲ್ ಶೋಭಾ

ಅಂಧಾ ದರ್ಬಾರ್!

ರೇವಣ್ಣ ಮಂತ್ರಿಯಾಗಿದ್ದೇ ತಡ, ತನಗೆ ಬೇಕು ಬೇಕಾದ ಅಧಿಕಾರಿಗಳನ್ನು ಹಾಸನಕ್ಕೆ ತಂದರು. ಅಧಿಕಾರಿಗಳು ಕೆಲಸ ಮಾಡದಿದ್ದರೆ ತನಿಖೆ ಮಾಡಿಸುತ್ತೇನೆ; ನೀರು ಹರಿಯದ ಜಾಗಕ್ಕೆ, ವರ್ಗಾ ಮಾಡುತ್ತೇನೆ ಎಂದೆಲ್ಲ ರೇವಣ್ಣ ಅಬ್ಬರಿಸಿದರು. ಅಗಾಧ ಫಂಡುಗಳನ್ನು ಜಿಲ್ಲೆಗೆ ತಂದು ಜನರಲ್ಲಿ ಖುಷಿ ತಂದರು. ಮೆಡಿಕಲ್ ಕಾಲೇಜು ಸೇರಿ ಹಲವಾರು ಕಾಲೇಜುಗಳನ್ನು ಘೋಷಿಸಿದರು.

ಹಾಸನ ಫುಲ್ 'ಇಂಪ್ರೂವ್' ಆಯ್ತೇನೋ ಎಂಬ ಭಾವನೆ ಮೂಡಿಸಿದರು. ಆದರೆ ವಾಸ್ತವವಾಗಿ ರೇವಣ್ಣನ ಬಾಲಂಗೋಚಿ ಅಧಿಕಾರಿಗಳ ಬಣ ಉಂಡದ್ದಷ್ಟೇ ಬಂತು, ಹಾಸನವಂತೂ ಉದ್ಧಾರವಾಗಲೇ ಇಲ್ಲ.

ಕಂಟ್ರಾಕ್ಟುಗಳೆಲ್ಲ ರೇವಣ್ಣನ ಹಿಂಬಾಲಕರ ಪಾಲಾದವು. ಶಿಷ್ಯ ಕೃಷ್ಣ ಮಾರ್ವಾಡಿ ಕೊಠಾರಿಗಳೆಲ್ಲ ಕಂಟ್ರಾಕ್ಟುಗಳಿಂದಲೇ ಕೊಬ್ಬಿದರು. ಜಿಲ್ಲೆಯ ಶಾಸಕರು, ಪಂಚಾಯತ್ ಪ್ರತಿನಿಧಿಗಳೆಲ್ಲ ರೇವಣ್ಣನ ಏಕಚಕ್ರಾಧಿಪತ್ಯಕ್ಕೆ ಬೆಚ್ಚಿಬಿದ್ದು ದೇವೇಗೌಡರಿಗೆ ದೂರು ಸಲ್ಲಿಸಿದ್ದೂ ಉಪಯೋಗವಾಗಲಿಲ್ಲ. ರೇವಣ್ಣನ ಟ್ರಾನ್ಸ್‌ಫರ್ ಲಿಸ್ಟ್‌ಗಳೆಲ್ಲ ಕ್ಷಣದಲ್ಲಿ ಮುಕ್ತಿ ಕಂಡವು. ಕೌನ್ಸೆಲಿಂಗ್, ಗಿನ್ಸೆಲಿಂಗ್ ಎಲ್ಲಾ ಬಂದ್! ರೇವಣ್ಣನ ಆಪ್ತರಾದ ಜಿ.ಪಂ. ಸಿ.ಇ.ಓ. ಎಫ್.ಆರ್. ಜಮಾದಾರ್, ಡಿ.ಡಿ.ಪಿ.ಐ. ದೇ.ನಾ. ನಾಯಕ್, ಜಿ.ಪಂ. ಉಪಕಾರ್ಯದರ್ಶಿ ಮಂಜುನಾಥ್ ನಾಯಕ್, ಸಮಾಜ ಕಲ್ಯಾಣ ಇಲಾಖೆಯ ಗೋವಿಂದೇಗೌಡ, ನಗರಸಭೆ ಆಯುಕ್ತ ಪ್ರಸನ್ನ ಕುಮಾರ, RTO ಶೋಭಾಗಳ ಲಂಚಾವತಾರ ಮಿತಿ ಮೀರಿ ಹೋಗುತ್ತಿದೆ. ಕೆಲಸ ಮಾಡದೇ ಬಿಲ್ ಎತ್ತಿ, 2 ಕೋಟಿ ನಾಮ ಹಾಕಿದ ಸಿ.ಇ.ಓ. ಜಮಾದಾರ್, ವರ್ಗಾವರ್ಗಿ ವೀರ ದೇ.ನಾ. ನಾಯಕ್, ತಿಂಗಳಿಗೆ 8 ಲಕ್ಷ ಮಾಮೂಲಿ ಬೇಕೇ ಬೇಕೆನ್ನುವ RTO ಶೋಭಾರ ಹೊಡೆತಕ್ಕೆ ಹಾಸನ ತತ್ತರಿಸಿ ಹೋಗುತ್ತಿದೆ.

ಕಾನೂನು ಸುವ್ಯವಸ್ಥೆ ಹದಗೆಟ್ಟು ಎಲ್ಲಿ ಬೇಕಲ್ಲಿ ಕೊಲೆಗಳಾಗುತ್ತಿವೆ. ಮಟ್ಕಾ, ಇಸ್ಪೀಟುಗಳ ಅಡ್ಡೆಗಳಿಗೆ ಜಿಲ್ಲಾಡಳಿತದ ಆಶೀರ್ವಾದ ಬೇರೆ ಇದೆ.


ಸರ್ಕಾರಿ ಆಸ್ಪತ್ರೆಯ ಹಳೆಯ ಕಟ್ಟಡಗಳನ್ನು ಕೆಡವಿ ಅಲ್ಲಿ ಹೊಸ ಮೆಡಿಕಲ್ ಆಸ್ಪತ್ರೆ ನಿರ್ಮಿಸಲು ರೇವಣ್ಣ ಶುರುಮಾಡಿದರೆ, ಇತ್ತ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಈ ಜಾಗ ಕಾಲೇಜು, ಆಸ್ಪತ್ರೆಗೆ ಸೂಕ್ತವಲ್ಲ ಅಂತಾ ಹೇಳಿ ಹೋಗಿದೆ. ಹಾಸನಕ್ಕೆ ಬಂದ 19 ಕಾಲೇಜುಗಳಲ್ಲಿ 13 ಹೊಳೇನರಸಿಪುರದ ಪಾಲಾದವು. ಎಲ್ಲೂ ಬೆಂಚ್ ಇಲ್ಲ, ಲೆಕ್ಚರರ್ಸ್ ಇಲ್ಲವೇ ಇಲ್ಲ!

ಜಿಲ್ಲೆಯ 8 ಶಾಸಕರಿಗೂ ರೇವಣ್ಣನ ಆರ್ಭಟ ನೋಡಿ ಸಾಕಾಗಿದೆ. ಜೆಡಿಎಸ್‌ನ ಐವರು ಶಾಸಕರಿಗೇ ರೇವಣ್ಣ ತಲೆನೋವಾಗಿದ್ದಾನೆ.

ಅಂದರೆ ಹಾಸನದ ಜನರ ಪಾಡೇನಾಗಿರಬೇಡ? ಮಾಜಿ ಪ್ರಧಾನಿ ಪುತ್ರ, ಸಚಿವ ರೇವಣ್ಣನ ಅಂಧಾ ದರ್ಬಾರ್ ನಿಲ್ಲಬೇಕೆಂದರೆ ಚುನಾವಣೆವರೆಗೂ ಕಾಯಬೇಕೇನೋ?

– ವರದಿಗಾರ

ದಾವಣಗೆರೆ:
ಟೆಕ್ಸ್‌ಟೈಲ್ ಪಾರ್ಕ್ ಮತ್ತು ಭೂಮಾಫಿಯಾ




KIADBಯ ಜಾಗ


ಜಿಲ್ಲಾಡಳಿತ ಮತ್ತು ವಾಣಿಜ್ಯೋದ್ಯಮಿಗಳು ಒಂದಾಗಿ ಕುಶಲಕರ್ಮಿಗಳು, ನೇಕಾರರು ಹಾಗೂ ದುಡಿಯುವ ಜನರಿಗೆ ದಾರಿದೀಪವಾಗಬೇಕಾಗಿದ್ದ "ಇಂಟಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ ಮತ್ತು ಅಪೆರಲ್ (ಸಿದ್ಧ ಉಡುಪು) ಪಾರ್ಕ್" ಅನ್ನು ಹಳಿತಪ್ಪಿಸುತ್ತಿದ್ದಾರೆ. ಈ ಯೋಜನೆಯ ಉದ್ದೇಶವನ್ನು ದಾರಿತಪ್ಪಿಸಿ, ಬಂಡವಾಳಗಾರರು ಮತ್ತಷ್ಟು ಬಂಡವಾಳವನ್ನು ವೃದ್ಧಿಸಿಕೊಳ್ಳುವ ಅಂಗವಾಗಿ, ಕೋಟ್ಯಂತರ ರೂ. ಬೆಲೆಬಾಳುವ ಭೂಮಿಯನ್ನು ವ್ಯವಸ್ಥಿತವಾಗಿ ಕಬಳಿಸುವ ಹುನ್ನಾರದ ವೇದಿಕೆಯನ್ನು ಸಜ್ಜುಗೊಳಿಸಿಕೊಂಡಿದ್ದಾರೆ.

ಏನಿದು ಟೆಕ್ಸ್‌ಟೈಲ್ ಪಾರ್ಕ್?

ಜವಳಿ ಉದ್ಯಮವನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಜವಳಿ ಪಾರ್ಕುಗಳನ್ನು ಸ್ಥಾಪಿಸಲು ಯೋಜನೆಗಳನ್ನು ರೂಪಿಸಿ, 40% ರಷ್ಟು ಅನುದಾನದ ಸ್ಕೀಮಿನಡಿಯಲ್ಲಿ ದಾವಣಗೆರೆಯಲ್ಲಿ ಇಂಟಗ್ರೇಟೆಡ್ ಪಾರ್ಕ್ ಮತ್ತು ಅಪೆರಲ್ ಪಾರ್ಕ್‌ನ್ನು ನಿರ್ಮಿಸಬೇಕೆಂಬುದು ಕೇಂದ್ರ ಸರ್ಕಾರದ ಉದ್ದೇಶವಾಗಿತ್ತು. ಈ ಹಿನ್ನೆಲೆಯಲ್ಲಿಯೇ ದಾವಣಗೆರೆಯ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರು, ಜವಳಿ ವಿಭಾಗದ ಮುಖ್ಯಸ್ಥರು, ಜವಳಿ ಕ್ಷೇತ್ರದ ಮುಖ್ಯಸ್ಥರು, ಜವಳಿ ಕ್ಷೇತ್ರದ ಉದ್ದಿಮೆದಾರರ ಸಹಯೋಗದಿಂದ ಕೇಂದ್ರ ಸರ್ಕಾರದ ಈ ಯೋಜನೆಯಡಿಯಲ್ಲಿಯೇ ಜವಳಿ ಪಾರ್ಕನ್ನು ನಿರ್ಮಿಸಲು 2003 ಜೂನ್ ತಿಂಗಳಲ್ಲಿ ತೀರ್ಮಾನಿಸಿದರು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (KIADB) ವತಿಯಿಂದ ದಾವಣಗೆರೆ-ಹರಿಹರ ರಸ್ತೆಯ ಮಧ್ಯದಲ್ಲಿರುವ ಕರೂರಿನ ರಿ.ಸ.ನಂ : 13/1ಎನಲ್ಲಿ 60 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಯಿತು. ನಂತರದಲ್ಲಿ 'ದಾವಣಗೆರೆ ಟೆಕ್ಸ್‌ಟೈಲ್ ಪಾರ್ಕ್ ಅಸೋಸಿಯೇಶನ್ (DTPA) ಎಂದು ನಾಮಕರಣಗೊಂಡು ಕಾಸಲ್ ವಿಠ್ಠಲ್, ಶಾಮನೂರು ಬಸವರಾಜಪ್ಪ, ಅಂದನೂರು ಕೊಟ್ರುಬಸಪ್ಪ, ಅಥಣಿ ಕೊಟ್ರೇಶ್, ಎ.ಸಿ. ಜಯಣ್ಣ ಈ ಅಧ್ಯಕ್ಷರು, ಉಪಾಧ್ಯಕ್ಷರು, ಗೌರವ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಹಾಗೂ ಖಜಾಂಚಿಗಳಾದರು. DTPA ದ ಸದಸ್ಯರಿಂದ ತಲಾ ಒಂದು ಸಾವಿರ ರೂ.ನಂತೆ ಈವರೆಗೆ ಒಟ್ಟು 262 ಮಂದಿಯಿಂದ ಶೇರು ಹಣವನ್ನು ಸಂಗ್ರಹಿಸಲಾಗಿದೆ. ಪ್ರಾರಂಭದಲ್ಲೇ ಈ ಯೋಜನೆಯು 'ಬಡ ಹಾಗೂ ಭಿಕಾರಿಗಳಿಗಲ್ಲ, ಬಂಡವಾಳಗಾರರಿಗೆ ಮಾತ್ರ' ಎಂಬ ಮಾತುಗಳು DTPA ದ ಪದಾಧಿಕಾರಿಯೊಬ್ಬನಿಂದ ಉದುರಿದಾಗ ಈ ಬಗ್ಗೆ ಪ್ರತಿಭಟಿಸಿದ ಕೆಲವರು ಸದಸ್ಯರೂ ಆಗದೆ ಉಳಿದಿದ್ದಾರೆ. ಸದಸ್ಯರಾದವರಲ್ಲಿ ಕೇವಲ 10ರಷ್ಟು ಮಾತ್ರ ನೇಕಾರರು ಹಾಗೂ ಕಾರ್ಮಿಕ ವರ್ಗದವರಿದ್ದಾರೆ. ಉಳಿದ 90% ರಷ್ಟು ಶೇರುದಾರರು ಫೂಲ್‌ಚಂದ್ ಜೈನ್‌ನಂತಹ ಮಾರ್‍ವಾಡಿಗಳು, ರಾಜಕಾರಣಿಗಳು ಹಾಗೂ ಬಂಡವಾಳಗಾರರೇ ಇದ್ದಾರೆ. 2005ರ ಕೊನೆಯವರೆಗೂ 'ಇಂಟಗ್ರೇಟೆಡ್ ಪಾರ್ಕ್' ನಿರ್ಮಿಸುತ್ತೇವೆಂದು ಹೇಳುತ್ತಿದ್ದ ಈ ಅಸೋಸಿಯೇಶನ್ನಿನ ಪದಾಧಿಕಾರಿಗಳು ಮೂಲ ಯೋಜನೆಯ ಉದ್ದೇಶವನ್ನೇ ಕೈಬಿಟ್ಟು, ಕೇಂದ್ರ ಸರ್ಕಾರದ ಸಬ್ಸಿಡಿ ಸ್ಕೀಮಿನಡಿಯಲ್ಲಿ ಟೆಕ್ಸ್‌ಟೈಲ್ ಪಾರ್ಕ್ ನಿರ್ಮಿಸಿದರೆ 60 ಕೋಟಿ ರೂ. ಬಂಡವಾಳವನ್ನು ಸ್ಥಳೀಯವಾಗಿ ಸಂಗ್ರಹಿಸುವುದು ಅಸಾಧ್ಯವಾಗಿರುವುದರಿಂದ ಕೇಂದ್ರ ಸರ್ಕಾರದ ಯೋಜನೆಗೆ ಬದಲಾಗಿ ಸ್ಥಳೀಯವಾಗಿಯೇ ಟೆಕ್ಸ್‌ಟೈಲ್ ಪಾರ್ಕ್‌ನ್ನು ನಿರ್ಮಿಸುತ್ತೇವೆಂದು ಪ್ಲೇಟು ಬದಲಾಯಿಸಿದ್ದಾರೆ.

ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಟೆಕ್ಸ್‌ಟೈಲ್ ಪಾರ್ಕ್ ನಿರ್ಮಿಸಬೇಕಾದರೆ ಉದ್ಯಮಿಗಳು ಒಂದಾಗಿ ಕಂಪನಿಯೊಂದನ್ನು ಹುಟ್ಟುಹಾಕಿ ಶೇ. 60 ರಷ್ಟು ಬಂಡವಾಳ ಹೂಡಿದರೆ ಕೇಂದ್ರ ಸರ್ಕಾರವು ಶೇ. 40 ರಷ್ಟು ಬಂಡವಾಳದ ಅನುದಾನ ನೀಡುತ್ತದೆ. ಈ ವಿಷಯದಲ್ಲಿ ಸ್ಥಳೀಯ ಶ್ರೀಮಂತ ಉದ್ದಿಮೆದಾರರಲ್ಲಿ ಸಹಮತವಿಲ್ಲ. ಕಾರಣವೇನೆಂದರೆ: ಹಾಕಿದ ಬಂಡವಾಳವು ಸಾಮೂಹಿಕ ನಿಯಂತ್ರಣಕ್ಕೊಳಪಡುವುದರಿಂದ ಕಂಪನಿ ಸ್ಥಾಪಿಸುವ ವಿಷಯವು ಬೇಡವಾಗಿ ಎಷ್ಟು ಸಾಧ್ಯವೊ ಅಷ್ಟು ಭೂಮಿಯನ್ನು ಲಪಟಾಯಿಸಿಕೊಂಡು ತಮ್ಮದೇ ಖಾಸಗೀ ಉದ್ದಿಮೆಗಳನ್ನು ಸ್ಥಾಪಿಸಿಕೊಂಡು ಹಣದ ಹೊಳೆಯನ್ನು ಹರಿಸಿಕೊಳ್ಳುವುದು ಇವರ ಲೆಕ್ಕಾಚಾರವಾಗಿದೆ. ಹೀಗಾಗಿಯೇ "ಸ್ಥಳೀಯ ಟೆಕ್ಸ್‌ಟೈಲ್ ಪಾರ್ಕ್" ಎಂಬ ಮುಖ ಮೂತಿ ಇಲ್ಲದ ಕುರೂಪಿ ಪಿಂಡಕ್ಕೆ ಜನ್ಮ ನೀಡಲು ಬಂಡವಾಳಿಗರು ಹಾಗೂ ಜಿಲ್ಲಾಧಿಕಾರಿ ದ್ಯಾಬೇರಿ ಸಜ್ಜಾಗಿದ್ದಾರೆ.






ಅಥಣಿ ಕೊಟ್ರೇಶ್ ಮತ್ತು ಜಿ.ಎಂ.ಸಿದ್ದೇಶ್


ಸ್ಥಳೀಯ ಟೆಕ್ಸ್‌ಟೈಲ್ ಪಾರ್ಕಿನ ಸ್ವಾಹಾ ಅಂತರಾಳ

ಈಗ್ಗೆ 5-6 ತಿಂಗಳಿನಿಂದ ಟೆಕ್ಸ್‌ಟೈಲ್ ಪಾರ್ಕ್ ಅಸೋಸಿಯೇಶನ್ನಿನ ಪದಾಧಿಕಾರಿಗಳು, ಜಿಲ್ಲಾಡಳಿತ ಹಾಗೂ ಬಂಡವಾಳ ಹೂಡಿಕೆಯ ಶಕ್ತಿ ಇರುವ ಕೆಲವು ಮಂದಿ ತಿಂಗಳಿಗೆರಡು ಬಾರಿ ಸಭೆಗಳನ್ನು ಮಾಡಿ ಅಂತಿಮವಾಗಿ ಕಬಳಿಕೆಯ ತಂತ್ರಗಳನ್ನು ರೂಪಿಸಿದ್ದಾರೆ. ಈ ನಿರಂತರ ಸಭೆಗಳ ಫಲಿತಾಂಶವೇ ಈಗ ಜಾರಿಗೆ ಬರಲಿರುವ 'ಸ್ಥಳೀಯ ಟೆಕ್ಸ್‌ಟೈಲ್ ಪಾರ್ಕ್'. ದಾವಣಗೆರೆಯ ಉದ್ದಿಮೆಗಳ ಉದ್ಧಾರದ ಹೆಸರಿನಲ್ಲಿ ಸ್ವಾಧೀನಪಡಿಸಿಕೊಂಡಿರುವ 60 ಎಕರೆ ಭೂಮಿಯನ್ನು 100 X110 ಅಡಿಗಳ ಸೈಟುಗಳನ್ನಾಗಿ ತುಂಡು ತುಂಡು ಮಾಡಿ ಉದ್ದಿಮೆದಾರರ ಹೆಸರಿನಲ್ಲಿ ಹಂಚಿಕೊಳ್ಳುವುದೇ ಪ್ರಧಾನವಾದ ವಿಷಯವಾಗಿದೆ. ವಾಸ್ತವವೇನೆಂದರೆ: "ಈ ಸೈಟುಗಳನ್ನು ಪಡೆದುಕೊಂಡವರಿಗೆ 99 ವರ್ಷ ಲೀಜಿಗೆ ಮಾತ್ರ ಕೊಡುತ್ತೇವೆ, ಮಾರಾಟ ಮಾಡಲು ಅವಕಾಶ ನೀಡುವುದಿಲ್ಲ" ಎಂದು ಹೇಳುತ್ತಾ ತಮ್ಮ ಭೂಕಬಳಿಕೆಯ ಕುತಂತ್ರವನ್ನು ಮರೆಮಾಚುತ್ತಿದ್ದಾರೆ. ಒಂದು ಸಾವಿರ ರೂ.ಗಳನ್ನು ಕಟ್ಟಿ ಸದಸ್ಯರಾಗಿರುವ ಬೆರಳೆಣಿಕೆಯಷ್ಟು ಬಡವರನ್ನು ಬೀದಿಪಾಲಾಗಲು ಮಾನಸಿಕವಾಗಿ ತಯಾರಾಗುವಂತೆ ಇಲ್ಲಿ ಸೈಟು ನೀಡಿದ ಕೇವಲ ಒಂದು ವರ್ಷದೊಳಗೆ ಉದ್ದಿಮೆಯನ್ನು ಸ್ಥಾಪಿಸಬೇಕು ಇಲ್ಲದಿದ್ದರೆ ಕಟ್ಟಿದ ಕೇವಣಿಯನ್ನು ಹಿಂತಿರುಗಿಸದೆ, ಸೈಟನ್ನೂ ಹಿಂಪಡೆಯುವ ಬೆದರಿಕೆಯನ್ನು ಹಾಕಿದ್ದಾರೆ. ಯಾವ ರೀತಿಯ ಉದ್ಯಮಗಳನ್ನು ಸ್ಥಾಪಿಸಲಾಗುತ್ತದೆಂಬ ಕಲ್ಪನೆಯನ್ನು ಕೊಡದಿದ್ದರೂ 100 X 110 ಅಳತೆಯ ಸೈಟುಗಳನ್ನು 35 ರೂ.ಗಳಿಗೊಂದು ಚದರಡಿಯಂತೆ ಉದ್ದಿಮೆದಾರರ ಮುಖವಾಡದ ಮಾರ್‍ವಾಡಿಗಳಿಗೆ, ಬಂಡವಾಳಗಾರರಿಗೆ, ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ಮಾರಲು DTPAದ ಪದಾಧಿಕಾರಿಗಳು ಹಾಗೂ ಜಿಲ್ಲಾಡಳಿತ ಹುನ್ನಾರ ನಡೆಸಿದೆ. ಸ್ಥಳೀಯ ಟೆಕ್ಸ್‌ಟೈಲ್ ಪಾರ್ಕಿನ ಬಗ್ಗೆ ಯಾವುದೇ ಸ್ಪಷ್ಟ ಚಿತ್ರಣವನ್ನು ನೀಡುವ ಬದಲು "ದೊಡ್ಡ ಕೈಗಾರಿಕೆಯೊಂದು ಇಲ್ಲಿ ಪ್ರಾರಂಭವಾದರೆ ಸಣ್ಣ ಉದ್ದಿಮೆಗಳಿಗೆ ಅವಕಾಶ ಸಿಗುತ್ತದೆ" ಎಂಬಂತಹ ಅಸ್ಪಷ್ಟ ಮಾತುಗಳನ್ನು ಸಂಸದ ಜಿ.ಎಂ. ಸಿದ್ದೇಶ್ ತಮ್ಮ ಹುಟ್ಟುಹಬ್ಬದಂದಿನ ಪತ್ರಿಕಾಗೋಷ್ಠಿಯಲ್ಲಿ ತೇಲಿಬಿಟ್ಟದ್ದಾರೆ. ಆದರೆ ಮಫತ್‌ಲಾಲ್, ರೇಮಂಡ್, ವಿಮಲ್ ಈ ಯಾವ ಕಂಪನಿಗಳೂ ಇಲ್ಲಿ ಉದ್ಯಮವನ್ನು ಸ್ಥಾಪಿಸಲು ಆ ನಕ್ಷೆಯನ್ನು ತೋರಿಸಿಲ್ಲವಾದರೂ ಇದೇ ತಿಂಗಳ 22 ರಂದು ಹೂಡಿಕೆದಾರರ ಸಮಾವೇಶವನ್ನು ಕರೆದು 26ಕ್ಕೆ ಮುಂದೂಡಿದ್ದಾರೆ.

ಭೂ ಹಂಚಿಕೆ ಹೇಗೆ?

KIADB ಸ್ವಾಧೀನ ಪಡಿಸಿಕೊಂಡಿರುವ 60 ಎಕರೆ ಭೂಮಿಯನ್ನು ಯಾರ್‍ಯಾರಿಗೆ ಹಂಚಬಹುದು? ಒಂದು ಕಡೆ DTPA ದ ಪದಾಧಿಕಾರಿಗಳು "ಉದ್ದಿಮೆ ಸ್ಥಾಪಿಸುವ ಯಾರು ಬೇಕಾದರೂ KIADBಯಿಂದ ಅರ್ಜಿ ಪಡೆದು 20 ಸಾವಿರ ರೂ. ಪ್ರಾಥಮಿಕ ಮೊತ್ತವನ್ನು ಕಟ್ಟಿ ಜವಳಿ ಉದ್ಯಮ ಘಟಕಗಳನ್ನು ಸ್ಥಾಪಿಸಲು ಸೈಟನ್ನು ಪಡೆಯಬಹುದು" ಎಂದು ಹೇಳುತ್ತಿದ್ದಾರೆ. ಒಂದು ವೇಳೆ ಬೃಹತ್ ಉದ್ಯಮವೊಂದು ಇಲ್ಲಿ ಸ್ಥಾಪನೆಯಾಗಿ ಈ ನಿಗದಿತ ಭೂಮಿಯ ಬಹುತೇಕ ಭಾಗವನ್ನು ಆಕ್ರಮಿಸಿಕೊಂಡರೆ ಒಂದು ಸಾವಿರ ರೂ. ಮೊತ್ತವನ್ನು ಕಟ್ಟಿ ಸದಸ್ಯವನ್ನು ಪಡೆದ ಅಥವಾ ಶೇರುದಾರರಾದ ಜನರ ಕತೆಯೇನಾಗಬಹುದು? ಸೈಟುಗಳನ್ನು ಪಡೆದು ಉದ್ದಿಮೆಗಳನ್ನು ಸ್ಥಾಪಿಸಬಹುದೆಂಬ ಆಸೆ ಇಟ್ಟುಕೊಂಡಿರುವ ಇವರಿಗೆಲ್ಲ ಇಲ್ಲಿ ಜಾಗ ಸಿಗುತ್ತದೆಯೇ? ಈ 262 ಮಂದಿ ಶೇರುದಾರರಲ್ಲಿನ 10% ಎಷ್ಟು ಮಂದಿ ಬಡವರು ಹಾಗೂ ನೇಕಾರರನ್ನು ನಿರ್ದಾಕ್ಷಣ್ಯವಾಗಿ ಹೊರಹಾಕಲೆಂದೇ 'ಒಂದು ವರ್ಷದೊಳಗೇ ಉದ್ದಿಮೆ ಸ್ಥಾಪಿಸಬೇಕೆಂಬ' ನಿಬಂಧನೆ ವಿಧಿಸಲಾಗಿದೆಯೆ? ಈ 262 ಮಂದಿಯೂ ಇಲ್ಲಿ ಭೂಮಿ ಕೇಳಿದರೆ ಎಲ್ಲಿಂದ ತಂದು ಕೊಡಲು ಸಾಧ್ಯ? ಎಂಬಂತಹ ಪ್ರಶ್ನೆಗಳ ಸರಮಾಲೆಯೇ ಇಲ್ಲಿ ಸೃಷ್ಟಿಯಾಗುತ್ತದೆ.





ಕಾಸಲ್ ವಿಠ್ಠಲ್ ಮತ್ತು ದ್ಯಾಬೇರಿ

ಇಲ್ಲಿ ವಿಶೇಷವಾದ ಸಂಗತಿ ಎಂದರೆ KIADBಯು ಟೆಕ್ಸ್‌ಟೈಲ್ ಪಾರ್ಕಿಗಾಗಿ ಸ್ವಾಧೀನ ಪಡಿಸಿಕೊಂಡಿರುವ 60 ಎಕರೆ ಭೂಮಿಯಲ್ಲಿ ಅರ್ಧಕ್ಕಿಂತ ಹೆಚ್ಚು 'ವಿವಾದಗ್ರಸ್ತ ಭೂಮಿ'ಯಾಗಿರುವುದು- ನಗರ ಸಭಾ ಸದಸ್ಯ ಎಂ.ಜಿ. ಬಕ್ಕೇಶ್ ಮತ್ತು ಇತರೆ ಅನೇಕರ ಭೂಮಿಯನ್ನು KIADBಯು ಸ್ವಾಧೀನ ಪಡಿಸಿಕೊಂಡು ರಸ್ತೆ ಹಾಗೂ ಚರಂಡಿಗಳನ್ನು ಮಾಡಿದೆ. ಇವರೇನಾದರೂ ಕೋರ್ಟಿಗೆ ಹೋದರೆ ಟೆಕ್ಸ್‌ಟೈಲ್ ಪಾರ್ಕಿಗೆ ಪ್ರವೇಶಿಸಲು ದಾರಿಯೇ ಉಳಿಯುವುದಿಲ್ಲ! ಟೆಕ್ಸ್‌ಟೈಲ್ ಪಾರ್ಕಿಗಾಗಿ ವಶಪಡಿಸಿಕೊಂಡಿರುವ ಭೂಮಿಯಲ್ಲಿಯೇ ಇರುವ 6.38 ಗುಂಟೆ ಮತ್ತೊಂದು ವಿವಾದಿತ ಭೂಮಿಯಾಗಿದೆ. ಈ 6.38 ಗುಂಟೆ ಭೂಮಿಯನ್ನು ವಿಜಯಕುಮಾರ ಎಂಬಾತನಿಂದ ಆತ್ಮಾರಾಂ ಬೊಂದಾಡೆ ಎಂಬಾತ ಪಡೆದುಕೊಂಡು 1995ರಲ್ಲೇ ಈ ಭೂಮಿಯನ್ನು 137 ಸೈಟುಗಳನ್ನಾಗಿ ಪರಿವರ್ತಿಸಿ, ಡೋರ್ ನಂಬರುಗಳನ್ನು ನಿಗದಿಗೊಳಿಸಿಕೊಳ್ಳಲಾಗಿದೆ. ಈ ಸೈಟುಗಳನ್ನು ಕೊಂಡುಕೊಂಡ ಸೈಟುದಾರರು ಕಂದಾಯವನ್ನು ಕಟ್ಟುತ್ತಿದ್ದಾರೆ. ಆದರೆ ಇವರ ಭೂಮಿಯೂ KIADB ವಶಪಡಿಸಿಕೊಂಡ 60 ಎಕರೆ ಭೂಮಿಯಲ್ಲಿ ಸೇರಿ ಹೋದಾಗ 70 ಮಂದಿ ಸೈಟು ಮಾಲೀಕರು KIADBಯ ಅಕ್ರಮ ಸ್ವಾಧೀನದ ವಿರುದ್ಧ ಹೈಕೋರ್ಟಿಗೆ ಅರ್ಜಿ ಸಲ್ಲಿಸಿ KIADBಗೆ ಚೀಮಾರಿ ಹಾಕಿಸಿದ್ದಾರೆ. ಹಾಗಾಗಿ KIADBಯು ದಿನಾಂಕ 4-7-2006 ರಂದು ಮೌಖಿಕವಾಗಿ ಹೈಕೋರ್ಟಿನ ಕ್ಷಮೆ ಯಾಚಿಸಿ ವಿವಾದಿತ 6.38 ಎಕರೆ ಭೂಮಿಯಲ್ಲಿ ಯಾವುದೇ ಕಾಮಗಾರಿಯನ್ನು ನಡೆಸುವುದಿಲ್ಲವೆಂದು ಹೇಳಿದೆ.

ಹೀಗೆ KIADB ವಶಪಡಿಸಿಕೊಂಡಿರುವ ಭೂಮಿಯ ಬಹುಭಾಗ ವಿವಾದದಿಂದಲೇ ಕೂಡಿದ್ದರೂ 'ಜಿಲ್ಲಾಧಿಕಾರಿಗಳು ಇನ್ನೂ ಹೆಚ್ಚಿನ ಭೂಮಿಯನ್ನು ಒದಗಿಸಿ ಕೊಡುತ್ತೇವೆಂದು ಹೇಳಿದ್ದಾರೆ' ಎಂಬ ಹೇಳಿಕೆಯನ್ನು DTPA ದ ಪದಾಧಿಕಾರಿಗಳು ಕೊಡುತ್ತಿದ್ದಾರೆ- ಅಂದರೆ KIADBಯು ಟೆಕ್ಸ್‌ಟೈಲ್ ಪಾರ್ಕಿಗಾಗಿ ವಶಪಡಿಸಿಕೊಂಡ 60 ಎಕರೆ ಭೂಮಿಯನ್ನು ಹೊರತುಪಡಿಸಿ ಇನ್ನೇನಾದರೂ ಭೂಮಿ ಇದೆಯಾ? ತನಿಖೆ ಮಾಡಿದರೆ 60 ಎಕರೆ ಭೂಮಿಯನ್ನು ಹೊರತು ಪಡಿಸಿದ KIADBಯ ಭೂಮಿ ಇನ್ನೂ ಇದೆ ಎಂದು ಗೋಚರವಾಗುತ್ತದೆ. 5.3.2001 ರಂದು KIADBಯು ಕರ್ನಾಟಕ ರಾಜ್ಯ ಗೆಜೆಟ್‌ನಲ್ಲಿ ಕರೂರು ರಿ.ಪ.ಸಂ : 13/1ಎನಲ್ಲಿ 188.33 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿರುವುದಾಗಿ ಪ್ರಕಟಣೆ ಹೊರಡಿಸಿದೆ ಇಲ್ಲಿಯೂ ಕೂಡಾ 1986-87 ರಲ್ಲೇ ನಿವೇಶನಗಳನ್ನು ಹೊಂದಿದ್ದ 177 ಮಂದಿ ಪ್ರತಿಭಟಿಸಿದಾಗ KIADB 1.3.2002 ರಂದು ಪುನಃ ಗೆಜೆಟ್ ಪ್ರಕಟಣೆ ಹೊರಡಿಸಿವೆ. 188.33 ಎಕರೆಗೆ ಬದಲಾಗಿ 143.36 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿರುವುದಾಗಿ ಹೇಳಿದೆ.

ಪೂರ್ವನಿಯೋಜಿತ ಸಭೆ

ದಿನಾಂಕ 10.7.2006 ರಂದು ದಾವಣಗೆರೆ ಟೆಕ್ಸ್‌ಟೈಲ್ ಪಾರ್ಕ್ ಅಸೋಸಿಯೇಶನ್ ಕರೆದಿದ್ದ ಸರ್ವಸದಸ್ಯರ ಸಭೆ ಕೇವಲ ಒಂದೆರಡು ಗಂಟೆ ಮಾತ್ರ ನಡೆದಿದೆ. ಈ ಹಿಂದೆ 100X 110 ಅಳತೆಯ ಸೈಟುಗಳನ್ನು ಕೊಡುತ್ತೇವೆಂದು ಹೇಳಿದವರು ಈ ಸಭೆಯಲ್ಲಿ 100X110 ಅಳತೆಯ ಸೈಟುಗಳನ್ನು ಕೊಡುತ್ತೇವೆಂದು ಮಾದರಿ ಪತ್ರವನ್ನು ಕೊಟ್ಟದ್ದಾರೆ. 'ಪ್ರಾಥಮಿಕ ಮೊತ್ತ 20 ಸಾವಿರ ರೂ, ಆರು ತಿಂಗಳಲ್ಲಿ ಪೂರ್ತಿ ಹಣ (ನಾಲ್ಕು ಲಕ್ಷ ರೂ.ಗಳಿಗಿಂತ ಜಾಸ್ತಿಯಾಗಬಹುದು) ವನ್ನು ಪಾವತಿ ಮಾಡಿ ಸೈಟು ಪಡೆದು ಒಂದು ವರ್ಷದೊಳಗೆ ಉದ್ದಿಮೆಯನ್ನು ಸ್ಥಾಪಿಸಬೇಕು'-ಇವೇ ಮಾತುಗಳು ಪುನರಾವರ್ತನೆಯಾಗಿದೆ.ಇವರೆಲ್ಲ ಜೊತೆಗೂಡಿ ಮುಂದೊಂದು ದಿನ 'ಟೆಕ್ಸ್‌ಟೈಲ್ ಪಾರ್ಕ್' ಎಂಬ ಹೆಸರನ್ನೇ ನಾಮಾವಶೇಷ ಮಾಡಿ, ಪಡೆದುಕೊಂಡ ಸೈಟುಗಳಲ್ಲಿ ದೊಡ್ಡ ದೊಡ್ಡ ಗೋಡೌನುಗಳನ್ನು ಕಟ್ಟಿ ಅಕ್ಕಿ ಕಳ್ಳ ಸಾಗಾಣಿಕೆಗೆ ಚೀಲಗಳನ್ನು ತಯಾರು ಮಾಡುವ , ಅಹಮದಾಬಾದ್ ಹಾಗೂ ಸೂರತ್‌ಗಳಲ್ಲಿ ತಯಾರಾದ 'ಬಿ'ಗ್ರೇಡ್ ಬಟ್ಟೆಗಳಿಗೆ ಬಣ್ಣ ಹಚ್ಚುವ ಕಾಳಸಂತೆಯ ಕೇಂದ್ರವನ್ನಾಗಿ ಈ ಸ್ಥಳವನ್ನು ಪರಿವರ್ತಿಸಿಕೊಳ್ಳುವುದರಲ್ಲಿ ಯಾವುದೇ ಸಂಶಯವಿಲ್ಲ. ದಾವಣಗೆರೆಯ ಬಹುತೇಕ ಪತ್ರಕರ್ತರಿಗೆ ಮಾಹಿತಿಯನ್ನು ನೀಡದೆ 'ಟೆಕ್ಸ್‌ಟೈಲ್ ಪಾರ್ಕ್' ಪ್ರಚಾರ ಸಮಿತಿಯಲ್ಲಿ ಎಲ್ಲ ಪ್ರಮುಖ ಪತ್ರಿಕೆಗಳ ಪತ್ರಕರ್ತರ ಹೆಸರುಗಳನ್ನೂ ಹಾಕಿಕೊಳ್ಳಲಾಗಿದೆ. ಬಂಡವಾಳ ಗಾರರು ಹಾಗೂ ಅಧಿಕಾರಿಗಳು ತಾವು ಮುಂದಿನ ದಿನಗಳಲ್ಲಿ ಬಗೆಯುವ ದ್ರೋಹವನ್ನು ಬಯಲಿಗೆಳೆಯದೆ 'ಬಾಯಿ ಹೊಲಿದು ಕೊಂಡಿರಬೇಕೆಂಬ' ಉದ್ದೇಶದಿಂದಲೇ ಪತ್ರಕರ್ತರನ್ನು ಈ ಪ್ರಚಾರ ಸಮಿತಿಯಲ್ಲಿ ಸೇರಿಸಿ ಕೊಳ್ಳಲಾಗಿದೆ ಎಂದು ಕೆಲ ಪತ್ರಕರ್ತರು ಹಲುಬುತ್ತಿದ್ದಾರೆ.

-ಚಂದ್ರಶೇಖರ ತೋರಣಘಟ್ಟ

ಕಾಂಗ್ರೆಸ್ ಕಿತ್ತಾಟ! ಜೆಡಿಎಸ್ ಕಿರ‍್ಕಾಟ!!

ಕರಡಿ ಸಂಗಣ್ಣನ ರಾಜೀನಾಮೆ ಪ್ರಹಸನದಿಂದ ಜೆಡಿಎಸ್ ಗಬ್ಬೆದ್ದು ಹೋಗಿರುವ ಈ ವೇಳೆಯಲ್ಲೇ ಕೊಪ್ಪಳ ಕಾಂಗ್ರೆ ಡಿ.ಸಿ.ಸಿ. ಅಧ್ಯಕ್ಷ ಶ್ರೀನಾಥ್ ಮತ್ತು ಕರಡಿ ಸಂಗಣ್ಣ ಕೊಪ್ಪಳದ ಬಳಿಯ ಕಾಮನೂರಿನ ತೋಟವೊಂದರಲ್ಲಿ ಗುಪ್ತಸಭೆ ನಡೆಸಿ ಕೊಪ್ಪಳ ರಾಜಕಾರಣಕ್ಕೆ ಬಿಸಿ ಮೂಡಿಸಿದ್ದಾರೆ. ಈ ಇಬ್ಬರ ಮಾತುಕತೆಗೆ ಮಧ್ಯಸ್ಥಿಕೆ ವಹಿಸಿದಾತ ಇತ್ತೀಚೆಗೆ ಎಂ. ಎಲ್. ಸಿ.ಗಿರಿ ಮುಗಿಸಿರುವ ಕರಿಯಣ್ಣ ಸಂಗಟ.

ಎಷ್ಟೇ ಗುಪ್ತವಾಗಿ ನಡೆದರೂ, ಮಾತುಕತೆಯ ವಿವರಗಳು ಹಟ್ಟಿಕ್ರಾಸ್‌ನಿಂದ ಗಂಜ್ ಸರ್ಕಲ್ ಹಾಯ್ದು ಕೊಪ್ಪಳದ ಕೋಟೆಗೆ ಅಪ್ಪಳಿಸಿ ಪ್ರತಿಧ್ವನಿಸುತ್ತಲೇ ಇವೆ. ಜಿಲ್ಲಾ ಜೆಡಿಎಸ್ ಅಧ್ಯಕ್ಷರಿಗೆ ರಾಜೀನಾಮೆ ನೀಡಿರುವ ಸಂಗಣ್ಣ ಕಾಂಗ್ರೆಸ್‌ಗೆ ಸೇರುವುದಾ? ಅಥವಾ ಡಿ.ಸಿ.ಸಿ ಅಧ್ಯಕ್ಷ ಸ್ಥಾನ ಅಲ್ಲಾಡುತ್ತಿರುವುದರಿಂದ ಶ್ರೀನಾಥನೇ ಜೆಡಿಎಸ್ ಹೊಕ್ಕುವುದಾ? "ತಿಪ್ಪ ರಾಮುಲುನ 'ವೈಟ್ ಹೌಸ್'ಗೆ ತಿರುಗಿ ಬದ್ದಿರುವ ಸಂಸದ ವಿರುಪಾಕ್ಷಪ್ಪ, ಕೊಪ್ಪಳ ಶಾಸಕ ಹಿಟ್ನಾಳ್ ಹಾಗೂ ಸಿದ್ದು ಕಾಂಗ್ರೆಗೆ ಬಂದರೆ ಜೊತೆಗೆ ಫ್ರೀಯಾಗಿ ಬರುವ ಹನುಮಂತಪ್ಪ ಅಂಗಡಿ – ಈ ಮೂವರನ್ನು ಯಾವುದೇ ಹೊತ್ತಿನಲ್ಲಿ ಬರಬಹುದಾದ ಮಧ್ಯಂತರ ಚುನಾವಣೆಯಲ್ಲಿ ಮಾಜಿ ಶಾಸಕ ಕರಡಿ ಸಂಗಣ್ಣ ಬಗ್ಗುಬಡಿಯಬೇಕು........" ಇದು ಶ್ರೀನಾಥ್ ಸಂಗಣ್ಣನಿಗೆ ಕೊಟ್ಟ ಡೀಲ್!




ಶ್ರೀನಾಥ್

ಅದಕ್ಕೆ ಪ್ರತಿಯಾಗಿ ಸಂಗಣ್ಣನೂ ಶ್ರೀನಾಥ್‌ಗೊಂದು ಡೀಲ್ ಕೊಟ್ಟಿದ್ದಾನೆ. "ಗಂಗಾವತಿ ಮಿನಿಸ್ಟರ್ ಅನ್ಸಾರಿಯನ್ನು ಕೆಡವಲು ಶ್ರೀನಾಥ್ ಸಹಕರಿಸಬೇಕು".


ಇಂತಹ ಡೀಲ್‌ಗಳ ವಿನಿಮಯವಾಗಿರುವುದು ಮತ್ತೊರ್ವ ಕುರುಬರ ನಾಯಕ ಕರಿಯಣ್ಣ ಸಂಗಟಿ ಸಮ್ಮುಖದಲ್ಲಿ ಎಂಬುದಿಲ್ಲಿ ಬಹುಮುಖ್ಯ ಪಾಯಿಂಟ್!

ಇಷ್ಟಲ್ಲದೇ ಅಲ್ಲೊಂದು ರಾಜಕೀಯ ತಂತ್ರವನ್ನು ಹೆಣೆಯಲಾಗಿದೆ. "ಯಾವುದೇ ಕಾರಣಕ್ಕೂ ನೀವು (ಸಂಗಣ್ಣ) ಜೆಡಿಎಸ್ ಬಿಡಬಾರದು. ಈ ಸಾರಿ ಟಿಕೆಟ್ ಪಡೆದು ಕಾಂಗ್ರೆನ ಹಿಟ್ನಾಳ್‌ನನ್ನು ಸೋಲಿಸಬೇಕು. ಒಂದು ವೇಳೆ ಜೆಡಿಎಸ್ ಟಿಕೆಟ್ ಸಿಗದಿದ್ದರೆ ಸೀದಾ ಕಾಂಗ್ರೆಗೆ ಬರಬೇಕು. ಅಲ್ಲಿ ನಾನೇ ಟಿಕೆಟ್ ಕೊಡಿಸಿ ಗೆಲ್ಲಿಸುವೆ. ಹಿಟ್ನಾಳ್‌ಗೆ ಟಾಂಗ್ ಕೊಡುವೆ. ಒಂದು ವೇಳೆ ನನ್ನ ಡಿಸಿಸಿ ಅಧ್ಯಕ್ಷ ಸ್ಥಾನ ಹೋಗಿ ಸಂಸದ, ಶಾಸಕ ಮತ್ತು ಸಿದ್ದು ಬೆಂಬಲಿಗರ ಹಾವಳಿ ಹೆಚ್ಚಾದಲ್ಲಿ ನಾನೇ ಜೆಡಿಎಸ್‌ಗೆ ಬಂದುಬಿಡುವೆ. ಇಬ್ಬರೂ ಸೇರಿ ಅನ್ಸಾರಿ ಸೋಲಿಸೋಣ" ಎಂದು ಶ್ರೀನಾಥ್ ಸಂಗಣ್ಣನಿಗೆ ವಿವರಿಸಿ ಹೇಳಿದ್ದಾನೆ.



ವಿರೂಪಾಕ್ಷಪ್ಪ

ಸಿ.ಎಂ. ಕುಮಾರಸ್ವಾಮಿ ಆಲಮಟ್ಟಿಗೆ ಹೋಗುವಾಗ ಬೂದಗುಂಪ ಬಳಿಯ ರಾಮುಲು ತೋಟಕ್ಕೆ ಹೋಗಿದ್ದು ನೋಡಿದರೆ, ರಾಮುಲು ಪುತ್ರ ಶ್ರೀನಾಥ್‌ಗೆ ಎಲ್ಲೋ ಲಿಂಕ್ ಬೆಳೆದಿರುವ ಸಾಧ್ಯತೆ ಇದೆ. ಬೈಚಾನ್ಸ್ ಶ್ರೀನಾಥ್ ಜೆಡಿಎಸ್‌ಗೆ ಹೋದರೆ ಕೊಪ್ಪಳ, ಬಳ್ಳಾರಿ, ರಾಯಚೂರು ಜಿಲ್ಲೆಗಳ ಕಾಂಗ್ರೆಸ್ ಪಾಲಿಗದು ಭೂಕಂಪವೇ!




ಬಸವರಾಜ್ ಹಿಟ್ನಾಳ್

ರಾಮುಲು ಗರಡಿಯಲ್ಲೇ ಪಳಗಿ ರಾಜಕಾರಣದಲ್ಲಿ ನೆಲೆ ಊರಿದವರಲ್ಲಿ ರಾಮಣ್ಣ ಮಲ್ಲಿಕಾರ್ಜುನ, ನಾಗಪ್ಪ, ಹಸನ್‌ಸಾಬ್, ಶಿವಶರಣಪ್ಪ ಗೌಡ, ಅಮ್ಜದ್ ಪಟೇಲ್ ಪ್ರಮುಖರು. ಕಳೆದ ಚುನಾವಣೆಯಲ್ಲಿ ಅನಾರೋಗ್ಯದ ಕಾರಣ ರಾಮುಲು ಸ್ಪರ್ಧಿಸದಿದ್ದಾಗ ಕೊಪ್ಪಳಕ್ಕೆ ವಿರುಪಾಕ್ಷಪ್ಪ ಸಂಸದನಾದ, ಹಿಟ್ನಾಳ್ ಶಾಸಕನಾದ. ಗಂಗಾವತಿಯಲ್ಲಿ ಅನ್ಸಾರಿ ಗೆದ್ದರೆ ಕನಕಗಿರಿಯಲ್ಲಿ ಮಲ್ಲಿಕಾರ್ಜುನ ನಾಗಪ್ಪ ಗೋತಾ ಹೊಡೆದ. ಮೊನ್ನೆ ಮೊನ್ನೆಯವರೆಗೆ ರಾಮುಲು ಕೃಪೆಯಿಂದ ಪಾಲಿಟಿಕ್ಸ್ ಮಾಡಿದವರೀಗ ಮಗ ಶ್ರೀನಾಥ್‌ನ ವಿರುದ್ಧ ತಿರುಗಿ ಬದ್ದಿದ್ದಾರೆ. ಗಂಗಾವತಿಯಲ್ಲಿ ಮಾಜಿಗಳಾದ ಮಲ್ಲಿಕಾರ್ಜುನ ನಾಗಪ್ಪ, ರಂಗದೇವರಾಯ, ಕೊಪ್ಪಳದ ವಿರುಪಾಕ್ಷಪ್ಪ, ಬಸವರಾಜ್ ಹಿಟ್ನಾಳ್ ಒಂದು ಗುಂಪು. ಮೊದಲೆಲ್ಲ ಹಾರಾಡಿದ ರಾಯರೆಡ್ಡಿ ಈಗ ವಿಧಾನಸೌಧದಲ್ಲಿ ಚೀರಾಡುವುದಕ್ಕಷ್ಟೇ ಸೀಮಿತ. ಮಲ್ಲಿಕಾರ್ಜುನ ನಾಗಪ್ಪನ ಗ್ಯಾಂಗ್ ಖರ್ಗೆ ಹೆಲ್ಪ್‌ನಿಂದ ಶ್ರೀನಾಥ್‌ನನ್ನು ಅಧ್ಯಕ್ಷಗಿರಿಯಿಂದ ಇಳಿಸಲು ಪ್ರಯತ್ನಿಸುತ್ತಲೇ ಇದೆ.

ಕೊಪ್ಪಳ

ಕಳೆದ ಬಾರಿ ಬಿಜೆಪಿ ಸೇರಿ ಸಂಗಣ್ಣ ಸೋತಿದ್ದರೆ, ಕುರುಬ ಜನಾಂಗದ ಹಿಟ್ನಾಳ್ ಕಾಂಗ್ರೆನಿಂದ ಗೆದ್ದ. ಕೊಪ್ಪಳದ ಇತಿಹಾಸದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ವ್ಯಕ್ತಿ ಶಾಸಕನಾಗಿದ್ದು ಇದೇ ಫಸ್ಟ್ ಟೈಮ್! ಆದರೆ ಈ ಶಾಸಕ ಮಾಡುತ್ತಿರುವ ಭಾನಗಡಿಗಳನ್ನು ನೋಡಿದರೆ ಮತ್ತೆ ಗೆಲ್ಲುವುದು ಕಷ್ಟ.. ಪ್ರತಿ ವರ್ಷ ರಂಜಾನ್‌ನ ಇಫ್ತಾರ್ ಕೂಟದಲ್ಲಿ ತಲೆಗೆ ಟೋಪಿ ಇಟ್ಟುಕೊಂಡು ಪೋಸು ಕೊಡುವ ಹಿಟ್ನಾಳ್, ಮುಸ್ಲಿಮರಿಗೆ ಜಿ.ಪಂ. ಚುನಾವಣೆಯಲ್ಲಿ ಒಂದು ಸ್ಥಾನ ಕೊಡುವ ಒಪ್ಪಂದ ಮುರಿದಿದ್ದನ್ನು ನೆನಪಿಸಿದರೆ ತನಗೆ ಮುಸ್ಲಿಮರ ಓಟೇ ಬೇಡ ಎಂದು ಬಿಟ್ಟಿದ್ದ. ಈಗ ನೈಸ್ ಮಾಡಲು ಮಸೀದಿಗಳಿಗೆ ಅನುದಾನ ನೀಡುವೆನೆಂದು ರೀಲ್ ಬಿಡುತ್ತಿದ್ದಾನೆ. ನಗರದ ಮಹಿಳೆಯರು ಶೌಚಾಲಯ ಕಟ್ಟಿಸಿಕೊಡಿ ಎಂದು ರಸ್ತೆಯಲ್ಲಿ ಧರಣಿ ಕುಳಿತರೂ ಈತ ಕೇರ್ ಮಾಡುತ್ತಿಲ್ಲ. ಹಿಟ್ನಾಳ್, ಸಂಗಣ್ಣ ಈ ಇಬ್ಬರ ಬದಲು ಮೂರನೇ ವ್ಯಕ್ತಿಗಾಗಿ ಜನ ನೋಡುತ್ತಿದ್ದಾರೆ.

ಯಾವುದೇ ಕ್ಷಣದಲ್ಲಿ ಸರ್ಕಾರ ಬೀಳಬಹುದೆಂಬ ಆತಂಕದಲ್ಲಿಯೇ ಈಗ ಅಭ್ಯರ್ಥಿಗಳ ಲೆಕ್ಕಾಚಾರವೂ ನಡೆದಿದೆ. ಕಾಂಗ್ರೆಸ್‌ನಿಂದ ಮತ್ತೇ ಹಾಲಿಯನ್ನೇ ಇಳಿಸಿದರೆ ಆತ ಮಾಜಿಯಾಗುವುದು ಖಚಿತ. ಬಿಸಿಎಂ ಕೋಟಾದಲ್ಲಿ ಕರಿಯಣ್ಣನಿಗೆ ಕೊಟ್ಟರೆ ಸಿದ್ಧರಾಮಯ್ಯನ ಹೆಸರು ಮತ್ತು ವೈಟ್ ಹೌಸ್ ಬೆಂಬಲದಿಂದ ಗೆಲ್ಲಬಹುದು. ಫಾರ್ವರ್ಡ್‌ಕೋಟಾದಿಂದ ಅನುಭವಿ ದಿವಟರ್, ರಾಂಪುರರನ್ನು ಇಳಿಸಿದರೆ ಉತ್ತಮ. ಇತ್ತ ಜೆಡಿಎಸ್‌ನಿಂದ ಈ ಬಾರಿ ಸಂಗಣ್ಣನಿಗೆ ಟಿಕೆಟ್ ತಪ್ಪಿಸಲು ಸಂಸದನ ಗ್ಯಾಂಗ್ ನಿರತವಾಗಿದೆ. ಹೇಗೂ ಕ್ಷೇತ್ರ ಹೊಸ ಮುಖ ಬಯಸುತ್ತಿದೆ. ಅದಕ್ಕೆ ಪಕ್ಷದ ಹಳಬರಾದ ಎಂ.ಟಿ. ಪಾಟೀಲ್‌ರಿಗೆ ಅವಕಾಶ ಕೊಡೋಣ, ಇಲ್ಲವಾದರೆ ಮತ್ತೋರ್ವ ಸೀನಿಯರ್ ಮಹಾಂತಯ್ಯನ ಮಠರನ್ನೇ ಮತ್ತೇ ಕಣಕ್ಕಿಳಿಸೋಣ. ಪಾರ್ಟಿ ವರ್ಚಸ್ಸು, ಹಾಲಿ ಶಾಸಕನ ವಿರೋಧಿ ಅಲೆ ಜೊತೆ ಕಳೆದ ಬಾರಿ ಸೋತಿದ್ದಾರೆ ಎಂಬ ಅನುಕಂಪ ಕೆಲಸ ಮಾಡಿಬಿಟ್ಟರೆ ಮಹಾಂತಯ್ಯನ ಮಠ ಗೆಲುವು ಕಷ್ಟವೇನಲ್ಲ ಎಂಬ ಥಿಯರಿಯನ್ನು ಬೆಂಗಳೂರಿಗೂ ರವಾನಿಸುತ್ತಿದ್ದಾರೆ ಕೆಲ ನಾಯಕರು. ಇನ್ನು ಬಿಜೆಪಿಯಿಂದ ಅಭ್ಯರ್ಥಿಗಳ ಚಕಾರವೇ ಇಲ್ಲ. ಸದ್ಯಕ್ಕೆ ಬಿಜೆಪಿ ಅಧ್ಯಕ್ಷ ಅಂದಣ್ಣ ಅಗಡಿಗೆ ರಾಜಕಾರಣ ಮಾಡುವುದಕ್ಕಿಂತ, ಮಾಡಿಸುವುದರತ್ತ ಹೆಚ್ಚು ಗಮನವಿದೆ.




ಸಂಗಣ್ಣ ಕರಡಿ

ರಾಜಕಾರಣ ಅಂದ್ರೆ ಷೇರು ಮಾರ್ಕೆಟ್ ಇದ್ದಂಗೆ; ನೋಡಬೇಕು, ಶ್ರೀನಾಥ್ ಸೂಚ್ಯಂಕ ಏರುತ್ತೋ ಇಲ್ಲ ಸಂಗಣ್ಣನ ಗ್ರಾಫ್ ಬೀಳುತ್ತೋ? ಒಟ್ಟನಲ್ಲಿ ಕಾಮನೂರು ತೋಟದ ಮಾತುಕತೆ ಮಾತ್ರ ಜಿಲ್ಲೆಯ ರಾಜಕಾರಣದಲ್ಲಿ ನಡುಕ ಹುಟ್ಟಿಸಲಿದೆ.

–ಹುಸೇನ್ ಪಾಷಾ

ಮೂರನೇ ವ್ಯಕ್ತಿಯೇ ಅನಿಲ್ ಲಾಡ್?

ಕೊಪ್ಪಳದಲ್ಲಿ ಕುಡಿಯಲು ವಾರಕ್ಕೊಮ್ಮೆ ನೀರು. ಮಹಿಳೆಯರಿಗೆ ಶೌಚಾಲಯಗಳಿಲ್ಲ, ಸ್ವಂತ ಅಭಿವೃದ್ಧಿಯ ಶಾಸಕ, ಕಾಲೇಜ್ ಮುಂದೆ ಧರಣಿ ಕೂಡ್ರಿಸಿ ಆಸ್ಪೋ ಅಪದ್ಧ ಸಂಸದ ವಿರುಪಾಕ್ಷಪ್ಪ, ಏನೂ ಮಾಡದೇ ಸೋತಿರುವ ಸಂಗಣ್ಣ! ಇವರನ್ನು ನೋಡಿ ಕೊಪ್ಪಳ ರೋಸಿ ಹೋಗಿದೆ. ಹಾಲಿ-ಮಾಜಿಗಳಿಗಿಂತ ಮುಂದಿನ ಬಾರಿ ಮೂರನೇ ವ್ಯಕ್ತಿಯನ್ನು ಆರಿಸುವ ಬಗ್ಗೆ ಇಡೀ ಕ್ಷೇತ್ರವೇ ಚರ್ಚಿಸುತ್ತಿದೆ. ಯಾರು ಆ ವ್ಯಕ್ತಿ ಎಂದರೆ ಉತ್ತರವೂ ಇಲ್ಲದ್ದಿಲ್ಲ, ಮೊನ್ನೆ ಜುಲೈ 16 ರಂದು ಅಂತಹ ಮೂರನೇ ವ್ಯಕ್ತಿ ಹೆಲಿಕಾಪ್ಟರ್‌ನಲ್ಲಿ ಕೊಪ್ಪಳಕ್ಕೆ ಬಂದಿದ್ದಾನೆ. ಆತನೇ ಕೂಡ್ಲಿಗಿ ಶಾಸಕ ಅನಿಲ್ ಲಾಡ್.



ಅನಿಲ್ ಲಾಡ್

ಲಾಡ್ ಬಂದದ್ದು ಕೊಪ್ಪಳದ ಗವಿಮಠಕ್ಕೆ. ತನ್ನ ಹೊಸ ಹೆಲಿಕಾಪ್ಟರ್ ಪೂಜೆಗೆಂದು ಬಂದ ಲಾಡ್ ಸ್ವಾಮಿಗಳನ್ನು ಹಗರಿಬೊಮ್ಮನಹಳ್ಳಿಗೂ ಕರೆದುಕೊಂಡು ಹೋಗಿ ತನ್ನ ಸಮಾಜ ಸೇವಾ ಕಾರ್ಯ ವಿವರಿಸಿದ್ದಾನೆ. ಈ ಹಿಂದೆ ಮುಖ್ಯಮಂತ್ರಿ ಕುಮಾರಸ್ವಾಮಿ ಇದೇ ಮಠಕ್ಕೆ ಬಂದು ಹೋಗಿದ್ದರು. ರಾಜಕಾರಣದಿಂದ ದೂರವಿದ್ದು ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಲು ಹೊರಟಿರುವ ಗವಿಮಠಕ್ಕೆ ಒಬ್ಬ ರಾಜಕಾರಣಿ ಸುಮ್ಮನೆ ಬಂದು ಹೋದರೆ ಸಾಕು, ಆತನಿಗೆ ಅರ್ಧ ಪ್ರಚಾರ ಸಿಕ್ಕಿಬಿಡುತ್ತದೆ.

ಕೊಪ್ಪಳದಲ್ಲಿ ಸಂಗಣ್ಣ-ಹಿಟ್ನಾಳ್ ಜನ ಬೆಂಬಲ ಕಳೆದುಕೊಂಡಿರುವ ವಾಸನೆ ಹಿಡಿದಿರುವ ಅನಿಲ್ ಲಾಡ್ ಅತ್ತ ತಮ್ಮ ಕೂಡ್ಲಿಗಿ ಸೇರಿದಂತೆ ಬಳ್ಳಾರಿಯ ಏಳು ಕ್ಷೇತ್ರಗಳು ಮೀಸಲು ಆಗುತ್ತಿರುವುದರಿಂದ ಕೊಪ್ಪಳದ ಮೇಲೆ ಕಣ್ಣು ಹಾಕಿದ್ದರೆ ಆಶ್ಚರ್ಯವಿಲ್ಲ. ಮೈನ್ಸ್ ದುಡ್ಡು ಚೆಲ್ಲಿ ಗೆದ್ದು ಬರುವ ಆಲೋಚನೆ ಅವರಿಗೆ ಇದ್ದಂತಿದೆ. ಬಳ್ಳಾರಿಯ ರೆಡ್ಡಿ ಸಹೋದರರು ಜಿಲ್ಲೆಗೆ ಬಂದಿದ್ದೇ ರಾಜಕಾರಣ ಮಾಡಲು! ಸಂಗಣ್ಣ- ಶ್ರೀನಾಥ್ ಮಾತುಕತೆ ನಡುವೆ ಲಾಡ್ ಬಂದು ಹೋದದ್ದು ಕುತೂಹಲ ಮೂಡಿಸಿದೆ.

ಆಟೋರಿಕ್ಷಾದವರ ಬದುಕು ಮೂರಾಬಟ್ಟೆ!

ಹುಬ್ಬಳ್ಳಿ-ಧಾರವಾಡದಲ್ಲಿರುವ ಹತ್ತಿರ ಹತ್ತಿರ ಹತ್ತು ಸಾವಿರ ಆಟೋಗಳನ್ನು ನಂಬಿ ಬದುಕು ಕಟ್ಟಿಕೊಳ್ಳಲು ಹೋದವರು ಮೂರಾಬಟ್ಟೆಯಾಗುತ್ತಿದ್ದಾರೆ.

ಪ್ರತಿ ದಿನವೊಂದಕ್ಕೆ ಒಬ್ಬ ಆಟೋ ಚಾಲಕ ಕನಿಷ್ಠ 2 ಲೀಟರ್ ಪೆಟ್ರೋಲ್ ಖರ್ಚು ಮಾಡಬೇಕು. ಪೆಟ್ರೋಲ್, ಆಯಿಲ್ ಎಲ್ಲಾ ಸೇರಿ 120ರೂ ಖರ್ಚಾದರೆ, ಚಾ-ಗೀ ಅಂದು 15-20 ರೂಪಾಯಿ. ಆಟೋ ಮಾಲೀಕರಿಗೆ 60ರೂ ಹೀಗೆ ದಿನಕ್ಕೆ 200ರೂ ಖರ್ಚು ತೆಗೆದು ಲಾಭ ಮಾಡಿಕೊಳ್ಳಬೇಕು. ದಿನಕ್ಕೆ 80ಕಿ.ಮೀ. ನಷ್ಟು ಓಡಿದರೆ 220-240 ರೂ ಕಲೆಕ್ಷನ್. ಖರ್ಚು ತೆಗೆದರೆ ಇಪ್ಪತ್ತೋ ಮೂವತ್ತೋ ಉಳಿಯುತ್ತದಷ್ಟೇ.

ಆಟೋ ಮಾಲೀಕರ ಪರಿಸ್ಥಿತಿಯೂ ಭಿನ್ನವೇನಿಲ್ಲ. ಆಟೋವೊಂದರಿಂದ ದಿನಕ್ಕೆ 50-60ರೂ ಸಿಗುತ್ತದೆ. ಗ್ರೀನ್ ಟ್ಯಾಕ್ಸ್, ರಿಪೇರಿ ಇತ್ಯಾದಿ ಸೇರಿ 30ರೂ ಖರ್ಚಾಗಿ, 20-30 ರೂ ಉಳಿಯುತ್ತದೆ.

ಒಂದು ಹೊಸ ರಿಕ್ಷಾ ರಸ್ತೆಗೆ ಬರಲು [illegible] ರೂ ಖರ್ಚಾಗುತ್ತದೆ. ರಿಕ್ಷಾ ಬೆಲೆ 84 ಸಾವಿರ, ಜೀವಾವಧಿ ಟ್ಯಾಕ್ಸ್ 2700 ರೂಪಾಯಿ, ಇನ್ಶೂರೆನ್ಸ್ 2300 ರೂ., ಬ್ಯಾಂಕ್ ಮುಖಾಂತರ ಸಾಲ ಪಡೆದು ಆಟೋ ಕೊಂಡರೆ ತಿಂಗಳಿಗೆ 2500ರೂ ಕಂತು ತುಂಬುವ ಹೊರೆ.

ಪಾಸಿಂಗ್‌ಗೆ 200ರೂ, ಗ್ರೀನ್‌ಟ್ಯಾಕ್ಸ್ 200 ರೂ, ಮೀಟರ್ ಸೀಲಿಂಗ್‌ಗೆ 50ರೂ, ಎಮಿಷನ್ ಟೆಸ್ಟ್‌ಗೆ 30ರೂ. ಹೀಗೆ ಎಲ್ಲ ಕಡೆ ಕಾಸು ಬಿಚ್ಚುತ್ತಲೇ ಆಟೋ ಓಡುತ್ತಿರಬೇಕು. ಈ ವರ್ಷ ಜಗತ್ತಲೇ ಇಲ್ಲದ ಹೊಸ ಸರ್ವಿಸ್ ಚಾರ್ಜ್ ಹುಬ್ಬಳ್ಳಿ -ಧಾರವಾಡಕ್ಕೆ ಬಂದಿದೆ. ಇದಕ್ಕೆ ಎಕ್ಸ್‌ಟ್ರಾ ಸರ್ವಿಸ್ ಚಾರ್ಜ್ ಎಂಬ ಹೆಸರು. ಎಲ್ಲ ಆಟೋಗಳು 100ರೂ ಮಡಗಲೇಬೇಕು. ಸಾರಿಗೆ ಇಲಾಖೆಯ ಇನ್ಸ್‌ಪೆಕ್ಟರ್‌ಗಳು ಆಟೋಗಳನ್ನು ಪರೀಕ್ಷಿಸುತ್ತಾರಲ್ಲ? ಅದಕ್ಕೆ ಈ 100ರೂ ಚಾರ್ಜ್ ಅಂತೆ. ಸರ್ಕಾರದ ಸಂಬಳ ಬೇರೆ, ಸರ್ವಿಸ್ ಚಾರ್ಜ್ ಬೇರೆ!


ಹುಬ್ಬಳ್ಳಿ-ಧಾರವಾಡ

ಹುಬ್ಬಳ್ಳಿ-ಧಾರಾವಾಡದಲ್ಲಿ ಈ ಹಿಂದೆ ಸಂಭವಿಸಿದ ಹಲವಾರು ಕೋಮುಗಲಭೆಗಳ ಕಾರಣಕ್ಕೆ ಇಲ್ಲಿನ ವ್ಯಾಪಾರ ವಹಿವಾಟನಲ್ಲಿ ಕುಸಿತವಾಗಿದೆ. ಇನ್ನೊಂದು ಕಡೆ ಸಣ್ಣ ಮಧ್ಯಮ ಕೈಗಾರಿಕೆಗಳು ಮುಚ್ಚಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದೆ. ಇಂತಹ ಈ ವೇಳೆಯಲ್ಲಿ ಆಟೋ ಚಾಲಕರು ಬದುಕು ಕಟ್ಟುವುದು ಕಷ್ಟವಾಗಿ ಹೋಗಿದೆ. ಟ್ರಾಫಿಕ್ ಪೊಲೀಸರು ಏನಾದರೂ ನೆವ ಹುಡುಕಿ ಹಣ ಪೀಕುತ್ತಲೇ ಇರುತ್ತಾರೆ. ಟ್ರಾಫಿಕ್ ಪೊಲೀಸ್ ಆಫೀಸರ್ ದಾಸರನ ಬಾಯಂತೂ ಪಾಯಿಖಾನೆಯೇ ಸರಿ. ಮಾತೆತ್ತಿದರೆ ಹೊಲಸು ಬೈಗುಳಗಳ ಸುರಿಮಳೆ.


ಹುಬ್ಬಳ್ಳಿ, ಧಾರಾವಾಡ ಆಟೋರಿಕ್ಷಾ ಚಾಲಕರ ಹೋರಾಟದ ಫಲವಾಗಿ 2005 ಡಿಸೆಂಬರ್‌ನಲ್ಲಿ ಕನಿಷ್ಠ ಪ್ರಯಾಣ ದರವನ್ನು 2ಕಿ.ಮೀ.ಗೆ ಬದಲಾಗಿ 1.6ಕಿ.ಮೀ.ಗೆ 8.80ರೂ. ಎಂದು ನಿಗದಿ ಮಾಡಲಾಯ್ತು. ನಂತರ ಅದನ್ನು 12 ರೂಪಾಯಿಗೆ ಏರಿಸಿದರು. ಈ ವರ್ಷ [illegible]

ಈಗ [illegible]

–ನವವಿಗಾರ



ರಸ್ತೆ ದುರಸ್ತಿಗಾಗಿ ಹೋರಾಟ



[illegible]


1948 ಮತ್ತು 51 ರ ನಡುವಿನ ಕಾಲ. ಹೈದರಾಬಾದಿನ ನಿಜಾಮ ಸರ್ಕಾರ ಮತ್ತು ಹಿಂದೂ ಭೂಮಾಲೀಕರ ದೌರ್ಜನ್ಯ ಮಿತಿ ಮೀರಿದ್ದ ಕಾಲ. ಕೃಷಿ ರೈತಾಪಿ ಕುಟುಂಬದ ಒಬ್ಬ ಸದಸ್ಯ ಜಮೀನ್ದಾರರ ಸೇವೆಯಲ್ಲಿ ಕಟ್ಟಿಗೆ ಸಂಗ್ರಹಿಸುತ್ತಾ, ಅಂಚೆ ಒಯ್ಯುತ್ತಾ, ಸಾಮಾನು ಸರಂಜಾಮುಗಳ ಸರಬರಾಜು ಮಾಡುತ್ತಾ, ನೆಲದಲ್ಲಿ ದುಡಿಯುತ್ತಾ ಇತ್ಯಾದಿ ಕೆಲಸಗಳನ್ನು ಕಡ್ಡಾಯವಾಗಿ ಮಾಡಲೇಬೇಕಿತ್ತು. ಭೂಮಾಲೀಕರ ಮನೆಗೆ ಬೇಕಾದ ಚಪ್ಪಲಿ, ಕೃಷಿಸಾಮಗ್ರಿ, ಮಡಕೆ ಇತ್ಯಾದಿ ವಸ್ತುಗಳನ್ನು ಸಹ ಈ ರೈತಾಪಿ ಕುಟುಂಬದವರೇ ಸರಬರಾಜು ಮಾಡಬೇಕಿತ್ತು. ಹದಿವಯಸ್ಸಿನ ರೈತ ಹೆಣ್ಣುಮಕ್ಕಳು ಜಮೀನ್ದಾರರ ಮನೆಯಲ್ಲಿ ದಾಸಿಯರಾಗಿ ಕೆಲಸ ಮಾಡಬೇಕಿತ್ತು. ಜಮೀನ್ದಾರರ ಹೆಣ್ಣುಮಕ್ಕಳು ಮದುವೆಯಾಗಿ ಹೋದಾಗ ಈ ದಾಸಿ ಹೆಣ್ಣು ಮಕ್ಕಳು ಅವರೊಟ್ಟಿಗೆ ಲೈಂಗಿಕ ದಾಸಿಯರಾಗಿ ಹೋಗಬೇಕಿತ್ತು. ಭೂಮಾಲೀಕರ ಈ ಸುಲಿಗೆ ರೈತ ಜನರ ಭೂಮಿಯನ್ನೂ ವಶಪಡಿಸಿಕೊಳ್ಳುವ ಹಂತಕ್ಕೆ ಹೋದಾಗ ಬೇಸತ್ತ ರೈತರು ಪ್ರತಿಭಟಿಸಿದರು. ಹೋರಾಟ ಒಂದು ಸ್ವರೂಪವನ್ನು ಪಡೆದುಕೊಳ್ಳುತ್ತಿರುವಾಗ ರೈತರು ತಮ್ಮ ಮೇಲೆ ಹೇರಲ್ಪಟ್ಟ ದಾಸ್ಯ, ಸುಲಿಗೆಗಳನ್ನು ನಿಲ್ಲಿಸುವಂತೆ ಒತ್ತಾಯಿಸುವುದರೊಂದಿಗೆ ಸುಂಕದ ಮೇಲಿನ ಕಡಿತ, ಬಡ್ಡಿಯ ದರದ ಮೇಲಿನ ಕಡಿತ, ಭೂಮಿಯ ಮೇಲಿನ ತಮ್ಮ ಹಕ್ಕುಪತ್ರ ಇತ್ಯಾದಿಗಳ ಬೇಡಿಕೆಗಳನ್ನು ಮುಂದಿಟ್ಟರು.

ರೈತಾಪಿ ಜನರ ಈ ಹೋರಾಟದಲ್ಲಿ ಹೆಂಗಸರ ಪಾತ್ರ ಕಡಿಮೆಯಿರಲಿಲ್ಲ. ಜನಸಂಖ್ಯೆಯ ಅರ್ಧ ಭಾಗವಾಗಿದ್ದ ಹೆಂಗಸರು ಈ ಹೋರಾಟಕ್ಕೆ ಧುಮುಕುವುದು ಚಾರಿತ್ರಿಕವಾಗಿ ಅನಿವಾರ್ಯವಾಗಿದ್ದಷ್ಟೇ ಮಹಿಳೆಯರಿಗೆ ಅವಶ್ಯವೂ ಆಗಿತ್ತು. ಹೋರಾಟದಲ್ಲಿ ತೀವ್ರವಾಗಿ ತೊಡಗಿಸಿಕೊಂಡಿದ್ದ ಗಂಡಸರಿಗೆ ತಾವು ಸಂಸಾರಸ್ಥರು ಎಂದು ತೋರ್ಪಡಿಸಿಕೊಳ್ಳಲು ಈ ಹೆಂಗಸರು ಸಹಾಯ ಮಾಡಿದಂತೆಯೇ ಹೋರಾಟದ ಸಂಘಟನೆಗೆ ಬೇಕಾದ ಚಟುವಟಿಕೆಗಳಿಗೆ ಓಡಾಡುವಂತೆ ಅನುಕೂಲವನ್ನೂ ಕಲ್ಪಿಸಿ ಕೊಟ್ಟಿದ್ದಷ್ಟೇ ಅಲ್ಲ, ಹಲವು ಹೆಂಗಸರು ತುಂಬ ಬಿರುಸಾಗಿ ತಮ್ಮನ್ನು ಹೋರಾಟದಲ್ಲಿ ತೊಡಗಿಸಿಕೊಂಡರು. ಎಂದಿನಂತೆ ಲಿಖಿತ ಚರಿತ್ರೆಯಲ್ಲಿ ಹೆಂಗಸರ ಈ ಬಹುಮುಖೀ ಪಾಲನ್ನು ಕಡೆಗಣಿಸಲಾಯಿತು.

ಹೈದರಾಬಾದಿನ ಸ್ತ್ರೀಶಕ್ತಿ ಸಂಘಟನೆಯ ಸದಸ್ಯರು ಮೌನಗೊಳಿಸಿ ಒತ್ತರಿಸಲ್ಪಟ್ಟ ಈ ಸ್ತ್ರೀ ಹೋರಾಟಗಾರರ ಕಥನಗಳನ್ನು ಬೆಳಕಿಗೆ ತರುವ ಜವಾಬ್ದಾರಿಯನ್ನು ಹೊತ್ತರು. ಪರಿಣಾಮವೇ 'ಮನಕು ತೆಲಿಯನಿ ಮನ ಚರಿತ್ರ' ಕೃತಿ. ಇಂಗ್ಲೀಷಿನಲ್ಲಿ 'ವಿ ವರ್ ಮೇಕಿಂಗ್ ಹಿಸ್ಟರಿ: ವಿಮೆನ್ ಇನ್ ದಿ ತೆಲಂಗಾಣ ಪೀಪಲ್ ಸ್ಟ್ರಗಲ್.' ಒಬ್ಬ ಕಥನಕಾರ್ತಿ ಹೇಳುವಂತೆ 'ಆ ಹೋರಾಟದ ಕಾಲ ಒಂದು ರೀತಿಯ ಪವಾಡದಂತ ಕಾಲ'. ಸಂಪ್ರದಾಯಗಳನ್ನು ಮುರಿಯುವ, ಒಬ್ಬೊಬ್ಬರೇ ಓಡಾಡುವ (ರಾತ್ರಿ ಹೊತ್ತಿನಲ್ಲೂ ಸಹ), ಗನ್ ಗಳನ್ನು ಒಯ್ಯುವ, ಅಂಚೆಕಾರರಾಗಿ ಕೆಲಸ ಮಾಡುವ, ದಳದೊಂದಿಗೆ ಸೇರಿ ಹೋರಾಟ ನಡೆಸುವ ಶಕ್ತಿ ತಮಗಿದೆ ಎಂದು ಹಲವು ಹೆಂಗಸರಿಗೆ ಅರಿವಾದ ಕಾಲ. ಸಾಮಾನ್ಯ ಬದುಕಿನಲ್ಲಿಲ್ಲದ ಹಲವು ಸಾಧ್ಯತೆಗಳು ಈ ರೈತಾಪಿ ಚಳವಳಿಯ ಚೌಕಟ್ಟಿನಲ್ಲಿ ಹೆಂಗಸರಿಗೆ ಗೋಚರಿಸಿದ ಕಾಲ.

ಈ ಕೃತಿಯಲ್ಲಿನ ಹದಿನಾರು ಕಥನಗಳು ಮೌಖಿಕ ಸಂಪ್ರದಾಯಕ್ಕೆ ಸೇರಿದವು. ಕಥೆ ಹೇಳುವ ರೀತಿ ಆಲಿಸುವವರ ಮೇಲೆ ಅವಲಂಬಿಸಿರುತ್ತದೆ. ತಮ್ಮ ಹೋರಾಟದ ಪರಂಪರೆಯನ್ನು ಗುರುತಿಸಿಕೊಳ್ಳುವುದು ಸ್ತ್ರೀ ಶಕ್ತಿ ಸಂಘಟನೆಗೆ ಮುಖ್ಯವಾದಂತೆಯೇ ಕೇಳಿದ್ದನ್ನು ಶಾಬ್ದಿಕ ಪರಂಪರೆಗೆ ಅನುಗುಣವಾಗಿ ದಾಖಲಿಸುವ ತುರ್ತೂ ಸಹ ಅಷ್ಟೇ ಮುಖ್ಯವಾಗಿತ್ತು. ದುದಲ ಸಾಲಮ್ಮ ಎಂಬ ಅಸಾಮಾನ್ಯ ಧೈರ್ಯದ ಹೆಂಗಸು ಯಾವ ಗಂಡಸಿಗೂ ಕಮ್ಮಿಯಿಲ್ಲದಂತೆ ದಳಂದ ನಾಯಕಿಯಾಗಿ ಹೋರಾಡಿದ್ದ ಕಥೆ ಕೇಳಿದ್ದರು. ಖಿಲಾಶಪುರದ ದುದಲ ಸಾಲಮ್ಮನನ್ನು ಹುಡುಕಿಕೊಂಡು ಹೋದಾಗ ಮಧ್ಯಾಹ್ನವಾಗಿತ್ತು, ತನ್ನ ಮಗನ ಗದ್ದೆಯ ಮಧ್ಯದಲ್ಲಿದ್ದ [illegible] ಮೇಲೆ ಕೈ [illegible] ಮರದ ಕೆಳಗೆ ಕೂತು ತೆಲಂಗಾಣ [illegible] ಕಥೆ [illegible] [illegible]

ಸುಸಂಬದ್ಧತೆಯ ಕೊರತೆ, ತಡಬಡಿಕೆ, ಹೇಳಿದ್ದನ್ನೇ ಮತ್ತೆ ಹೇಳಿದ್ದು ಎಲ್ಲವೂ ಇತ್ತು. ಮೌಖಿಕ ಕಥನದ ರೀತಿಯೇ ಅದು. ಕತ್ತಲಾದರೂ ಯಾರಿಗೂ ಪರಿವೆ ಇರಲಿಲ್ಲ.



ದಿನದಿನವು ಕುಸಿದು....

ರೈತಾಪಿ ಜನರ ಹೋರಾಟದಲ್ಲಿ ಹೆಂಗಸರ ಪಾತ್ರ ಕಡಿಮೆಯಿರಲಿಲ್ಲ. ಜನಸಂಖ್ಯೆಯ ಅರ್ಧ ಭಾಗವಾಗಿದ್ದ ಹೆಂಗಸರು ಈ ಹೋರಾಟಕ್ಕೆ ಧುಮುಕುವುದು ಚಾರಿತ್ರಿಕವಾಗಿ ಅನಿವಾರ್ಯವಾಗಿದ್ದಷ್ಟೇ ಮಹಿಳೆಯರಿಗೆ ಅವಶ್ಯವೂ ಆಗಿತ್ತು. ಹೀಗೆ ಹೋರಾಟದಲ್ಲಿ ತೊಡಗಿಸಿಕೊಂಡ ಹೆಂಗಸರ ಬದುಕನ್ನು ಅನಾವರಣಗೊಳಿಸುವ ಹೈದರಾಬಾದಿನ ಸ್ತ್ರೀಶಕ್ತಿ ಸಂಘಟೆಯು ಹೊರತಂದಿರುವ 'ಮನಕು ತೆಲಿಯನಿ ಮನ ಚರಿತ್ರ' ಕೃತಿಯ ದುದಲ ಸಾಲಮ್ಮ ಎಂಬ ಗಟ್ಟಿಗಿತ್ತಿಯ ಕಥೆಯಿದು....

* * * * * * *

ಖಿಲಾಶಪುರದ ದುದಲ ಸಾಲಮ್ಮ

ಕಂಡಕಂಡವರಿಗೆಲ್ಲಾ ಅರ್ಜಿ ಬರ್ದೆ. ಇಂದಿರಾ ಗಾಂಧಿಗೂ ಬಿಡಲಿಲ್ಲ, ಒಂದು ಪೈಸಾನೂ ಸಹಾಯ ಬರಲಿಲ್ಲ, ಬರೆದದ್ದೆಲ್ಲ ಎಲ್ಲಿ ಬಿಸಾಕಿದ್ರೋ. ರಜಾಕಾರರು ಬರೋ ಎರಡು ವರ್ಷದ ಹಿಂದೇನೇ ನನ್ನ ಗಂಡ ಸತ್ತೋದ. ನನ್ನ ಮಕ್ಕಳು ಆಗಾ ಈಸು ಚಿಕ್ಕೋರು. ರಜಾಕರರು ಬಂದಾಗಿಂದ ಪಡಬಾರದ ಪಾಡು ಪಟ್ಟೆ. ಸಹಾಯ ಮಾಡ್ತೀನಿ ಅಂದವರಿಗೆಲ್ಲ ಕೊಟ್ಟು ಇದ್ದದ್ದನ್ನ ಕಳೆದುಕೊಂಡೆ. ಈಗ ಮುದಿ ಬಿದ್ದಿದೀನಿ. ಕೋಲು ಹಿಡಿದು ನಡೀತೀನಿ ಅಂದ್ರೆ ನಂಬ್ತೀರಾ? ನೀವೆಲ್ಲ ಇಷ್ಟು ದೂರ ಬಂದಿದೀರಾ. ಯಾಕೆ? ನಂಗೊತ್ತು, ಈ ಜಿಲ್ಲೇಲಿ ಹೋರಾಟ ಮಾಡಿದವರು ಬೇಕಾದಷ್ಟು ಜನ ಇದಾರೆ. ಯಾರಿಗೇನು ಸಹಾಯ ಸಿಕ್ತು? ಹೇಳೋಕ್ಕೇನು, ಬೇಕಾದಷ್ಟು ಐತೆ. ನನ್ನ ಮನಿ, ನನ್ನ ಹಟ್ಟಿ ಎಲ್ಲಾನೂ ಒಂದಿಷ್ಟೂ ಬಿಡದೆ ಲೂಟಿ ಮಾಡಿದರಲ್ಲ! .....

ನನ್ನ ಮನಿ ಚೆಂದಿತ್ತು, ಕಮ್ಯೂನಿಸ್ಟರಿಗೆ ಕೂಳು ಹಾಕಿದೆ. ಪೋಲೀಸರು ಬಂದು 'ಕೂಳು ಹಾಕಿದೆಯಲ್ಲ? ಅವರೆಲ್ಲಿದಾರೆ ಹೇಳು' ಅಂತ ಚಿತ್ರಹಿಂಸೆ ಕೊಟ್ರು. ಕಂಕಳು ಹಾಸಿ ಬರೋ ಹಂಗೆ ಹಗ್ಗ ಬಿಗಿದು ನನ್ನ ನೇತು ಹಾಕಿದ್ರು. ಹಗ್ಗದ ಮೇಲೆ ನೀರು ಚಿಮುಕಿಸಿ ಬಿಗಿ ಹೆಚ್ಚು ಮಾಡಿದ್ರು. ಕಾಲ ಕೆಳಗಡೆ ಮೊಳೆಹಲಗೆ ಇಟ್ಟು ನನ್ನ ಪಾದ ಚಿಂದಿ ಮಾಡಿದ್ರು (ಅಳುತ್ತಾ...) ನನ್ನ ಪಾಡು ಯಾರಿಗೂ ಬರಬಾರದು. ಅಷ್ಟೊಂದು ಹಿಂಸೆ ಕೊಟ್ರೂ...

ನನ್ನ ಕೊನೆ ಮಗ ಇಲ್ಲೆ ಅದಾನ. ಅವರವರ ಕಷ್ಟ ಅವರಿಗೇ. ಕೂಳಿಗೂ ಕಷ್ಟ ಇರುತ್ತೆ ಪಾಪ, ನನ್ನನ್ನು ನೋಡಿಕೊಳ್ಳೀ ಅಂದ್ರೆ 'ನಿನ್ನನ್ನ ಹೋಗು ಅಂತ ಯಾರು ಹೇಳಿದ್ರು? ಯಾಕ್ ಹೋದೇ? ಏನ್ ಸಿಕ್ತು ಅದರಿಂದ?' ಅಂತ ಕೇಳ್ತಾರೆ....

ಸಂಘಕ್ಕೆ ಸೇರಿ ಏನೇನು ಪಾಠ ಕಲ್ತೆ! ಜನ ಬಾಯಿಗೆ ಬಂದದ್ದೇ ಹೇಳ್ತಾರೆ. ಸಂಘದಲ್ಲಿ ಸೇವೆ ಮಾಡಿ ಅಲ್ಲೇ ಸಾಯಬೇಕು. ಕಾಂಗ್ರೆಸ್ಸಿನವರ ವೋಸ ಎಂಥಾದ್ದು ಅಂತೀರಿ? ಆ ಬಟಾ ಬಿಸಿಲಿನಷ್ಟು ಬಯಲು ಬೆತ್ತಲೆ. ಎಡ್ಡರ್ತಿ ಏರಯ್ಯ ಅಂತ ಒಬ್ಬ ಮಸ್ತೇದಾರ ಇದ್ದ. ಅವ ನನ್ನ ಹಿಡಿದು ಗುಜ್ಜುಲ ಏರಯ್ಯ ಮತ್ತೆ ಬೇರೆ ಕಮ್ಯೂನಿಸ್ಟರು ಎಲ್ಲಿದಾರೆ ಹೇಳು ಅಂತ ಬಾಯಿ ಬಿಡಿಸಕ್ಕೆ ನೋಡಿದ. ಅವರಿಗೆ ಒಂದಿಷ್ಟು ಕೂಳು ಕಳಿಸಿದ್ದೆ ಅಷ್ಟೆ...

ಯಾಕೆ ಕಳಿಸಿದೆ ಅಂತ ಕೇಳ್ತೀರೇನೋ? ಈಗ ನೀವು ಈಸೊಂದು ದೂರದಿಂದ ಬಂದಿದೀರಲ್ಲಾ? ಯಾಕೆ? ಸಂಘ, ಹೆಣ್ಣು ಮಕ್ಕಳು ಅಂತ ನೀವು ಸುತ್ತುತ್ತಾ ಇಲ್ವಾ? ನಾನು ಮಾಡಿದ್ದೂ ಅದನ್ನೇ. ನೀವು ಅಷ್ಟಿಷ್ಟು ಓದು ಬರಹನಾದ್ರೂ ಕಲ್ತಿದೀರಿ. ನಾನು? ಎಮ್ಮೆ ಮೇಯಿಸ್ಕಂಡು ಇದ್ದ ಮುಕ್ಕ. ನಿಜವಾದ ಕಮ್ಯೂನಿಸ್ಟ ರಟ್ಟೆ ಶಕ್ತಿ ನಂಬಿ ಬದುಕ್ತಾನೆ. ನಾನು ಬದುಕಿದ್ದು ಹಂಗೇನೆ...

ಸಂಘದ ಸೇವೆ ಮಾಡಿದೆ. ಏನು ಮಾಡಿದ್ರಿ ಅಂತ ಕೇಳಿದ್ರೆ ಏನು ಹೇಳಲಿ? ಆವತ್ತಿನ ಕಷ್ಟ ನೀಸಿದ್ದೇ ನಾನು ಮಾಡಿದ್ದು. ಇಲ್ಲದವ್ರಿಗೆ ಸಹಾಯ ಮಾಡಿದೆ. ಅದು ಬಿಟ್ಟು ಇನ್ನೇನೂ ದೊಡ್ಡದು ಮಾಡಲಿಲ್ಲ. ಈ ದಾರಿಬಡಕರು ನೆಮ್ಮದೀಲೀ ತಿನ್ನೋಕೆ ಬಿಡ್ತಾರ? ಅದಕ್ಕೆ ಅವರಿಗೆ ಕೂಳು ಹಾಕಿದೆ. ಸಂಘದ ಮೆಂಬರಾಗಿ ಅವರ ಜೊತೆ ಸುತ್ತಿದೆ... ನ್ಯಾಯವಾಗಿ ಬದುಕಿದ್ದಕ್ಕೆ ಹಳ್ಳಿಮನಿಗೆ ತಿರುಗಿ ಬಂದೆ.

ನನ್ನ ಅತ್ತೆ ಮಾವನ್ನೂ ಸಹ ಚಚ್ಚಿ ಹಾಕಿದ್ರು. ನನ್ನಣ್ಣ ಸತ್ತಿದ್ದು ನನ್ನಿಂದಲೇ ಅಲ್ವಾ? 'ನನ್ನ ತಂಗೀಗೆ ಹೀಗ್ಯಾಕೆ ಕಷ್ಟ ಕೊಡ್ತೀರಿ?' ಅಂತ ಕೇಳಿದ್ದಷ್ಟೇ. ಪಕ್ಕಾ ಕಮ್ಯೂನಿಸ್ಟ ಅಂತ ಆಪಾದನೆ ಹೊರೆಸಿ ನಿಜಾಮಾಬಾದಿನ ಜೈಲಿಗೆ ಎಳೆದು ಕೊಂಡು ಹೋಗಿ ಚಚ್ಚಿದ್ರು. ಹೊಡೆತ ತಡೀಲಾರದೇ ಪ್ರಾಣನೇ ಬಿಟ್ಟ. ಒಂದೂ ರಿಕಾರ್ಡು ಹೊರಬರದಂಗೆ ಮುಚ್ಚಿಹಾಕಿದ್ರು...

ನನ್ನ ಪಾಡು ನೋಡಲಾರದೆ ಸಂಘದವರು ಜೊತೇಲಿ ಕರ್ಕೊಂಡು ಹೋದರು. 'ಇಲ್ಲಾಕೆ ಪಾಡು ಪಡ್ತೀ. ಸಂಘದ ಜೊತೆ ಬಂದ್ಬಾಗಲ್ವಾ?' ನನಗೂ ಸೈ ಅನ್ನಿಸ್ತು. ಶಾಪುರಮ್ಮಿಂದ ಹೆಣ್ಣು ಹೆಂಗಸಾಗಿ ನಾನೊಬ್ಬಳೇ ಹೋಗಿದ್ದು. ನಾವು ಹೆಂಡ ಇಳಿಸೋ ಜನ. ಸಾಲಮ್ಮ ಅಂದ್ರೆ ಹುಲಿ ಘರ್ಜಿಸಿದ ಹಂಗೆ. ನಾನು ಹೋರಾಡಿದ್ದು ಹಂಗೇನೇ. ಆದ್ರೇನು ಬಂತು? ಒಂದು ದಮ್ಮಡೀನು ಇಲ್ಲೀಗಂಟ ಸಿಕ್ಕಿಲ್ಲ, ಹಟ್ಟೀಲಿ ಒಂದು ಹಸಾ ಇಲ್ಲ, ಸೊಂಟದಲ್ಲಿ ಒಂದು ಪೈಸಾ ಇಲ್ಲ, ಕತ್ತಲ್ಲಿ ಒಂದು ಕಬ್ಬಿಣದ ಸರನೂ ಇಲ್ಲ, ನೋಡು ನನ್ನ ಬದುಕೂ...

ನನ್ನನ್ನು ಹಿಡಿದ ದಿನಾ...ಮಗೂಗೆ ಎರಡಕ್ಕೆ ಅವಸರ. ಮನಿ ಸುತ್ತ ಪೋಲಿಸ್ನೋರು. ರಾತ್ರಿ ಹತ್ತೋ ಹನ್ನೊಂದೋ ಗಂಟೆ ಇರಬೌದು...ಆವಾಗ ತಂತಿದೀಪ ಇರಲಿಲ್ಲ, ಚೊಂಬು ಹಿಡಿದು ಎರಡಕ್ಕೆ ಹೋಗಿದ್ದೆ. ಹೆಂಗಸರೆಲ್ಲ ಮಾತಾಡಿಕೊಳ್ತಿದ್ದರು , 'ಇವತ್ತು ಅವಳನ್ನ ಟೇಸನ್ನಿಗೆ ಎಳೆದುಕೊಂಡು ಹೋಗ್ತಾರೆ. ಕಮ್ಯೂನಿಸ್ಟರಿಗೆ ಕೂಳು ಹಾಕಿದಳಂತೆ'. ಇದ್ದ ಬಟ್ಟೇಲಿ ಮನಿ ಬಿಟ್ಟೆ...ಮಿಲಿಟರಿ ಜನರ ಕೈಗೆ ಸಿಕ್ಕಿದ್ರೆ ನರಕ ಅಂತ ಗೊತ್ತಿತ್ತು. ನನ್ನ ಮಕ್ಕಳಿಗೆ ಚಿತ್ರಹಿಂಸೆ ಕೊಡ್ತಾರೆ. ಹೋರಾಟಕ್ಕೆ ಹೋದ್ರೆ ಒಂದು ಹೆಸರಾದ್ರೂ ಬರುತ್ತೆ. ಕಮ್ಯೂನಿಸ್ಟ ಅಂತ ಕರೆಸಿಕೊಂಡ ಮೇಲೆ ಕಾಡಿಗೆ ಹೋಗಲೇಬೇಕಿತ್ತು, ಎದೆ ಗಟ್ಟಿ ಮಾಡಿಕೊಂಡೆ...


ಅಷ್ಟು ದೂರದಲ್ಲಿ ಮಾದಿಗನ ಮನೆ ಇತ್ತು...ಈ ಕಡೆ ಮೇದಾರನ ಮನೆ. ಗೋಡೆ ಹತ್ತಿ ಆ ಕಡೆಗೆ ಧೊಪ್ ಅಂತ ನೆಗೆದೆ. ಆ ಮನೇಲಿ ಸ್ರೀಸೈಲಮ್ ಅಂತ ಒಬ್ಬ ಇದ್ದ. ಇನ್ನೂ ಬದುಕಿದಾನೆ. ನನ್ನನ್ನ ಹಿಡಿದುಕೊಡದಿದ್ರೆ ಮೀಸೆ ಬೋಳಿಸ್ಕೊಳ್ತೀನಿ ಅಂತ ಹೇಳಿದವ. ನನ್ನ ಹಿಡಿಯೋದು ನಿನ್ನ ಹಣೇಲಿ ಬರೆದಿಲ್ಲ ಮಗನೆ ಅಂತ ಅಂದುಕೊಂಡು ಗೋಡೆ ಆಚೆ ನೆಗೆದು ಬೆರಣಿಗುಡ್ಡೆ ಒಳಗೆ ಅವಿತು ಕೂತೆ. ಆ ಮಾದಿಗನ ಮನೀಲಿ ಗಂಡ ಹೆಂಡತಿ ಇಬ್ರೇ. ಭಾರೀ ಬಡತನ. ನನ್ನ ಸುತ್ತ ಬೆರಣಿ ಹಾಕಿ ಮುಚ್ಚಿದ್ರು....ಆರು ಗಂಟೆ ಹೊತ್ತಿಗೆ 'ಸೂಳೆನ ಹಿಡೀಕಾಗ್ಲಿಲ್ಲ' ಅಂತ ಗೊಣಗುತ್ತ ಪೋಲೀಸರು ಕಾವಲು ಹಾಕಿ ಹೊರಟು ಹೋದರು. ಬೆಳಗ್ಗೆ ರಜಾಕಾರ್ರು ಬಂದರು. ಜೋಳದ ಗದ್ದೇಲಿ ಅವಿತು ಕೂತಿದ್ದೆ. 'ಹೇಗೆ ತಪ್ಪಿಸ್ಕೋತಾಳೆ? ಮಾದಿಗರ ಮನೇಲೆಲ್ಲೋ ಅವಿತು ಕೂತಿರಬೇಕು. ಪೆಟ್ರೋಲ್ ಹಾಕಿ ಮನೆ ಸುಟ್ಟುಬಿಡೋಣ' ಅಂತ ಹೇಳ್ತಾ ಇದ್ರು. ಜಂಗಿರಿಗಿಣಿ ಲಿಂಗಯ್ಯ ಅಂತ ಒಬ್ಬ 'ನೀವು ಸುಟ್ಟು ಹಾಕ್ತೀನಿ ಅಂದ್ರೆ ನಾವು ಹೊಂಟು ಹೋಯ್ತೀವಿ. ಆದ್ರೆ ಆ ಸೂಳಿ ಇಲ್ಲಿಲ್ಲ' ಅಂತ ನನ್ನ ಪೋಲೀಸರೆದುರು ಹೀನಾಮಾನ ಬೈಯೋಕೆ ಶುರು ಮಾಡಿದ. 'ಆ ಹಾದರಗಿತ್ತಿ ಇಲ್ಲಿಲ್ಲ, ಈ ಹಳ್ಳೀಲೇ ಇಲ್ಲ...' ನಾನು ಅವನ ಮನೀಲೇ ಅವಿತು ಕೂತಿದ್ದೆ...ಆಮೇಲೆ ದಳದವ್ರು ಬಂದ್ರು. ಮಶೀನ್ ಗನ್ನು ಇನ್ನೂ ಏನೇನೋ ಇತ್ತು ಅವರ ಹತ್ರ. ಅವರ ಜೊತೆ ನಾನು ಹೊಂಟೋದೆ...ನೀವು ಪೆನ್ನು ಹಿಡಿದಿರೋ ಜನ. ಏನು ಪೆನ್ನು ಹಿಡಿದರೇನು? ನನ್ನ ಧೈರ್ಯದ ಕತೆ ಬರೆಯಲಿಕ್ಕೆ ಸಾಲದು...

ಏನೆಲ್ಲಾ ಕಷ್ಟ ನೀಸಿದ್ರೂ ಒಬ್ಬರನ್ನ ನಿಂದಿಸಲಿಲ್ಲ, ಹೊಡೆಯಲಿಲ್ಲ, ಮನಸು ಮೆಚ್ಚೋ ತರ ನಡ್ಕೊಂಡಿದ್ದೀನಿ... ದಳದಲ್ಲಿದ್ದು ಮಾಡ್ತಿದ್ದ ಕೆಲಸ ಅಂದ್ರೆ ಅವರನ್ನು ನೋಡೋದು, ಇವರನ್ನು ನೋಡೋದು, ಕೆಲಸ ಹೆಂಗೆ ಮಾಡೋದು ಅಂತ ಹೇಳೋದು, ಭೂಮಿಯನ್ನ ಏನು ಮಾಡೊದು ಅಂತ ಹೇಳೋದು, ಭೂಮಿಯನ್ನ ಬಡವರಿಗೆ ಕೊಡಿಸೋದು...(ಪ್ರಶ್ನಿಸುವ ಧಾಟಿಯಲ್ಲಿ) 'ನಿನಗೆ ಒಬ್ಬನಿಗ್ಯಾಕೆ ಹತ್ತೆಕ್ರೆ ಭೂಮಿ? ಈ ಬಡವನಿಗೆ ಎರಡು ಎಕ್ರೆ ಕೊಡು...' ಹಿಂಗೆ. ನಾವು ಎದುರು ಬಿದ್ದದ್ದು ಸಾವ್ಕಾರಗಳ ಮೇಲೆ...

ಗಂಡಸಿನ ಹಂಗೆ ಪಂಚೆ ಉಟ್ಟು ಮೇಲೊಂದು ಶರ್ಟು ಹಾಕ್ತಿದ್ದೆ. ಉದ್ದ ಚಡ್ಡಿಗಳನ್ನೂ ಹಾಕಿ ತಲೆಗೆ ಒಂದು ಚೌಕ ಬಗೀತಿದ್ದೆ. ಗಂಡಸಿನಂಗೆ ವೇಷ. ಏನು ಪೂಜೆಗೀಜೆ ಮಾಡಿದ್ರೇನು? ಸಾಯೋಕೆ ಮುಂಚೆ ಜನರ ಸೇವೆ ಮಾಡ್ಬೇಕು. ಪೂಜೆ ಎಲ್ಲ ಸ್ವಲ್ಪ ದಿನದಲ್ಲಿ ಮರ್ತು ಹೋಗುತ್ತೆ. ಕಮ್ಯೂನಿಸಂ ಹಂಗಲ್ಲ. ಏಸೇಸೋ ಜನ್ಮಕ್ಕೂ ನೆನಪಿರುತ್ತೆ...

ಕಾಡಲ್ಲಿ ನಂಗೆ ಭಯ ಅನ್ನೋದೇ ಇರಲಿಲ್ಲ. ನಮ್ಮವರೇ ಒಟ್ಟೊಟ್ಟಿಗೆ ಇರುವಾಗ ಹೆದರಿಕೆ ಯಾಕೆ? ನಮ್ಮ ಮಧ್ಯೆ ಒಪ್ಪಂದ ಇತ್ತು. ನಾಲಿಗೆ ಸೀಳಿದ್ರೂ ಯಾರು ಎಲ್ಲಿದ್ದಾರೆ ಅಂತ ಬಾಯಿ ಬಿಡ್ತಿರಲಿಲ್ಲ. ಹನ್ನೆರಡು ತಿಂಗಳು ಕಾಡಲ್ಲಿದ್ದೆ. ನನ್ನ ಅಣ್ಣನಿಗೆ ಬಗನಿ ಮರ ಇದ್ದವು. ದುಡ್ಡೆಂಕಿ ಏರಯ್ಯ ಅನ್ನೋವ್ನು ಒಂದಿನ 'ರಾಮಲಿಂಗು , ನಿಂಗೆ ಐನೂರು ರೂಪಾಯಿ ಕೊಟ್ಟೇನು. ನಿನ್ನ ತಂಗಿ ಮಕ್ಕಳನ್ನ ಕರೆದುಕೊಂಡು ಬಾ' ಅಂತ ಹೇಳಿದ. 'ಮಕ್ಕಳಿರೋ ತಾಯಿ. ಕಾಡಲ್ಲಿ ಹೇಗಿರ್ತಾಳೆ? ಹೋಗು ಕರ್ಕಂಡು ಬಾ' ಅಂತ ದುಂಬಾಲು ಬಿದ್ದ. ಸಮಾ ಒಂದು ತಿಂಗಳು ಅಲೆದು ಎಷ್ಟೆಷ್ಟೋ ಕಷ್ಟ ನೀಸಿ ನನ್ನ ತಮ್ಮ ಬಂದ... 'ಈಗೇನ್ಮಾಡ್ಲಿ?' ಅಂತ ದಳದವರನ್ನ ಕೇಳ್ದೆ. ನನ್ನ ತಮ್ಮ 'ನನ್ನ ಪ್ರಾಣ ಕೊಟ್ಟೇನು. ರಾಮಲಕ್ಷ್ಮಣರಂಥ ಮಕ್ಕಳಿದಾರೆ. ನಿನ್ನ ಮನಿ ಕೊಡಿಸ್ತೀನಿ. ನಿನ್ನ ಮನಿ ಬಾಗಿಲಲ್ಲಿ ನೀನಿರು...ಎಷ್ಟು ದಿನಾ ಅಂತ ಕಾಡಲ್ಲಿರ್ತೀ? (ಅಳುತ್ತಾ...) ನೀನು ತಿರುಗಿ ಬರಬೇಕು'

→




ಬದುವುದೇನೆ ನೆಪ್ಪಿಗೆ...?

ಉರುಳಿದ ಯಕ್ಷಲೋಕದ ನಕ್ಷತ್ರ

ರಾಜ್‌ಕುಮಾರ್ ಕಳೆದುಕೊಂಡ ನಮ್ಮ ಸಿನಿಮಾ ರಂಗ ಹೇಗೆ ದುಃಖ ಸಾಗರದಲ್ಲಿ ಮುಳುಗಿತ್ತೋ, ಹಾಗೆಯೇ ಶೇಣಿ ಗೋಪಾಲಕೃಷ್ಣ ಭಟ್‌ರವರನ್ನು ಕಳೆದುಕಂಡ ಯಕ್ಷರಂಗ ದುಃಖದಲ್ಲಿ ಮುಳುಗಿದೆ. ಈ ಇಬ್ಬರೂ ಮಹಾನ್ ಕಲಾವಿದರಿಗೆ ಒಂದೆರಡು ಸಾಮ್ಯಗಳಿವೆ. ರಾಜ್ ಮತ್ತೆ ಅಭಿನಯಿಸುವಂತಹದ್ದೇನನ್ನು ಉಳಿಸಿರಲಿಲ್ಲ. ಹಾಗೆಯೇ ಶೇಣಿಯವರ ಅರ್ಥಗಾರಿಕೆಯ ಅಧ್ಯಾಯಗಳೆಲ್ಲಾ ಮುಗಿದಿದ್ದವು. ಇಬ್ಬರೂ ತಮ್ಮ ವೃತ್ತಿಯಲ್ಲಿ ತೋರಬಹುದಾದ ಎಲ್ಲಾ ಪ್ರತಿಭೆಗಳನ್ನು ತೋರಿ ತುಂಬು ಜೀವನ ನಡೆಸಿ ನಿಶ್ಚಿಂತೆಯ ಜೀವನ ಸಾಗಿಸಿ ಕಣ್ಮರೆಯಾದರು.


ಶೇಣಿಯವರನ್ನು ನಾನು ಮೊದಲು ನೋಡಿದ್ದು ಹೆಗ್ಗೋಡಿನ ಒಂದು ಶಿಬಿರದಲ್ಲಿ. ಹಿಂದಕ್ಕೆ ಬಾಚಿದ ರೇಷ್ಮೆಯಂತಹ ಬಿಳಿ ಕೂದಲು, ಬಿಳಿ ಪಂಚೆ, ಜುಬ್ಬ ಮತ್ತು ಕೈಯಲ್ಲಿ ಒಂದು ಬ್ಯಾಗು, ಅದರೊಳಗಿನಿಂದ ಆಗಾಗ್ಗೆ ಈಚೆ ಬರುತ್ತಿದ್ದ ಎಲೆಯಡಿಕೆಯ ಡಬ್ಬಿ, ಆ ಡಬ್ಬಿಯೊಳಗಿನ ಸಣ್ಣಸಣ್ಣ ಡಬ್ಬಿಗಳಲ್ಲಿ ಅಡಿಕೆ, ಏಲಕ್ಕಿ, ಲವಂಗ, ಕರ್ಪೂರದಂತಹ ಚೂರು, ಇವೆಲ್ಲವೂ ನೀಟಾಗಿ ಜೋಡಿಸಲ್ಪಟ್ಟಿದ್ದವು. ಮತ್ತೆ ಹಿಕ್ಕಳದಂತಹ ಸಾಧನದಿಂದ ಅಡಿಕೆಯನ್ನು ಅದುಮಿ ಬಾಯಿಗೆಸೆದುಕೊಂಡು, ಎಲ್ಲಾ ಡಬ್ಬಿಗಳಲ್ಲಿನ ಸಾಮಗ್ರಿಯನ್ನು ಚೂರುಚೂರೆ ಬಾಯಿಗೆಸೆದುಕೊಂಡು, ಗಮ್ಮೆನ್ನುವ ತಾಂಬೂಲದಿಂದ ಸುತ್ತಲೂ ಸುವಾಸನೆ ಹೊರಡಿಸುತ್ತ, ಆ ದಿನದ ಗೋಷ್ಠಿಯ ಅಧ್ಯಕ್ಷನ ಸ್ಥಾನದಿಂದ ಎದುರಾಳಿಗಳನ್ನು ಎದುರಿಸಲು ತಯಾರಾದರು.

ಆ ದಿನದ ಚರ್ಚಾ ವಿಷಯದಲ್ಲಿ ಮುಖ್ಯವಾಗಿ ಅವರ ವ್ಯಕ್ತಿತ್ವದ ಪ್ರಸ್ತಾಪವೂ ಪ್ರಧಾನವಾಗಿತ್ತು. ಮುಖ್ಯವಾಗಿ ಈಚೆಗೆ ಹದ್ದುಮೀರಿ ಹೋಗುತ್ತಿರುವ ಯಕ್ಷಗಾನಕ್ಕೆ ಒಂದು ಶಿಸ್ತಿನ ಕಡಿವಾಣ ಹಾಕಬೇಕು; ಅಂದರೆ ನಿರ್ದೇಶಕನನ್ನು ನೇಮಿಸಬೇಕು ಎಂಬುದೇ ಆ ದಿನದ ಚರ್ಚಾ ವಿಷಯವಾಗಿತ್ತು. ಇದಕ್ಕೆ ಶೇಣಿಯವರು ವಿರೋಧವಾಗಿದ್ದರು.



ಮುಖ್ಯವಾಗಿ ಶೇಣಿಯವರು ಯಕ್ಷಲೋಕದ ಸ್ಟಾರ್. ಸಹಜವಾಗಿ ಅವರ ಅಭಿನಯ ಮತ್ತು ಮಾತುಗಾರಿಕೆ ಅರ್ಥಗಾರಿಕೆಗೆ ಯಾವ ಕಡಿವಾಣವೂ ಇರಲಿಲ್ಲ. ಇದರಿಂದ ಅವರು ನಿರ್ವಹಿಸಿದ ಪಾತ್ರಗಳು ವಿಜೃಂಭಿಸಿ ಎದುರು ಪಾತ್ರಗಳು ಹೆಳವನಂತಾಗಿಬಿಡುತ್ತಿದ್ದವು. ಉದಾಹರಣೆಗೆ ಅವರು ರಾವಣನನ್ನು ಮಾಡಿದರೆ, ರಾಮ ಹೆಂಡತಿ ಕಳೆದುಕೊಂಡು ಗೋಳಾಡುವ ಹೆಣ್ಣಿಗನಂತಾಗಿಬಿಡುತ್ತಿದ್ದ. ಹಾಗೆಯೇ ಶೇಣಿಯವರು ದುರ್ಯೋಧನನಾಗಿ ಇನ್ಯಾರಾದರು ಕೃಷ್ಣನಾದರೆ ಕೃಷ್ಣನ ಕತೆ ಮುಗಿದಂತೆಯೇ. ಅವರು ಜರಾಸಂಧನಾಗಿ ಇನ್ಯಾರಾದರೂ ಕೃಷ್ಣನಾದರೆ ಕೃಷ್ಣ ಪ್ರೇಕ್ಷಕರಿಂದಲೇ ಗೇಲಿಗೊಳಗಾಗಿ ಎಲ್ಲರ ಬಾಯಲ್ಲೂ ಜರಾಸಂಧನೇ ಚರ್ಚೆಯಾಗುತ್ತಿದ್ದ.





ಅಂದರೆ ಶೇಣಿಯವರ ತಾರಾಮೌಲ್ಯ ಅಷ್ಟರಮಟ್ಟಿಗೆ ಯಕ್ಷಲೋಕದಲ್ಲಿ ಉತ್ತುಂಗದಲ್ಲಿತ್ತು. ಆದರೆ ಇದು ಪ್ರಸಂಗದಲ್ಲಿನ ನ್ಯೂನ್ಯತೆಯಾಗಿ ಯಕ್ಷ ವಿದ್ವಾಂಸರಿಗೆ ಕಂಡಿದ್ದರಿಂದ ಅವರೆಲ್ಲಾ ಗೋಷ್ಠಿಯ ಮುಖಾಂತರ ಶೇಣಿಯವರ ಅರ್ಥಗಾರಿಕೆಗೆ ಮೂಗುದಾರ ಹಾಕುವ ಪ್ರಯತ್ನ ಮಾಡಿದ್ದರು. ಇದರ ವಿರುದ್ಧ ತಿರುಗಿಬಿದ್ದ ಶೇಣಿಯವರು ತಮ್ಮ ಅಧ್ಯಕ್ಷಸ್ಥಾನ ಬಿಟ್ಟು ಪ್ರೇಕ್ಷಕರೊಂದಿಗೆ ಕುಳಿತುಕೊಂಡು ತಮ್ಮ ವಾದಕ್ಕೆ ಜೋತುಬಿದ್ದ ಫಲವಾಗಿ ಅಂದಿನ ಹೆಗ್ಗೋಡು ಚರ್ಚೆ ಅಪೂರ್ಣಗೊಂಡಿತು. ಆದರೂ ಅಂದಿನ ರಾತ್ರಿ ನಡೆದ ತಾಳಮದ್ದಳೆ ಪ್ರಸಂಗ ನಮ್ಮ ಜೀವಿತಾವಧಿಯಲ್ಲಿ ಮರೆಯಲಾಗದ್ದು. ರಾವಣನಿಗೆ ಹತ್ತು ತಲೆ, ಇಪ್ಪತ್ತು ಕೈಗಳು ನಿಜವೇ ಎಂಬ ವಿಚಾರವಂತರ ಪ್ರಶ್ನೆಗೂ ಆ ರಾತ್ರಿಯೇ ಶೇಣಿಯವರ ಅರ್ಥಗಾರಿಕೆಯಲ್ಲಿ ಉತ್ತರವಿತ್ತು.

ಅಯೋಧ್ಯೆಯಲ್ಲಿ ಕೇವಲ ರಾಮನ ಪಾದುಕೆಗಳನ್ನು ಸಿಂಹಾಸನದ ಮೇಲಿರಿಸಿದ್ದರಂತೆ. ಅಷ್ಟು ಮಾತ್ರದಿಂದಲೇ ರಾಜ್ಯಭಾರ ಶಿಸ್ತಿನಿಂದ ನಡೆದುಕೊಂಡು ಹೋಗಿತ್ತಂತೆ. ಆದರೆ ಇಲ್ಲಿ ಈ ರಾಕ್ಷಸರ ರಾಜ್ಯದಲ್ಲಿ ರಾಜನಾಗಿದ್ದವನಿಗೆ ಹತ್ತು ತಲೆಗಳಿದ್ದರೂ ಸಾಲದು. ಇಪ್ಪತ್ತು ಕೈಗಳಿದ್ದರೂ ಸಾಲದು ಎಂದು ರಾಕ್ಷಸರ ಆಕಾರಗಳಿಗೆ ಅರ್ಥ ಒದಗಿಸಿದ್ದರು ಶೇಣಿ. ಅವರ ಅರ್ಥಗಾರಿಗೆ ಮತ್ತು ಕಾಳಿಂಗ ನಾವಡರ ಹಾಡುಗಾರಿಕೆ ಇದ್ದರೆ ಆ ಯಕ್ಷಲೋಕದ ರಾತ್ರಿಯನ್ನು ಯಾರು ಎಂದೂ ಮರೆಯಲಾರರು.

ಬೆಂಗಳೂರು ಬಸವನಗುಡಿಯಲ್ಲಿನ ಪಾರ್ಕಿನಲ್ಲಿ ಒಮ್ಮೆ ನಾನು ಲಂಕೇಶ್ ಜೊತೆ ವಾಕ್ ಮಾಡುತ್ತಿದ್ದಾಗ ಈ ಯಕ್ಷಗಾನದ ವಿಸ್ಮಯವನ್ನು ಹೇಳುತ್ತ "ಸಾರ್, ಅಂಥಾ ಕಲೆ ಈ ಪ್ರಪಂಚದಲ್ಲೇ ಇಲ್ಲ ಸಾರ್" ಎಂದೆ.

"ಪ್ರಪಂಚದ ಕಲೆ ನಿನಿಗ್ಯಂಗೆ ಗೊತ್ತಲೆ?" ಎಂದರು.

"ನನಿಗೇನೊ ಅಂಗನ್ನಿಸಿದೆ ಸಾರ್. ನಮ್ಮ ರಾಮಾಯಣ, ಮಹಾಭಾರತನ ಇನ್ನು ಬೆಳೆಸ್ತಾಯಿರೋರೆ ಯಕ್ಷಗಾನದೋರು. ಅದರಲ್ಲೂ ಶಂಭು ಹೆಗಡೆನ ನೀವು ನೋಡಬೇಕು ಸಾರ್" ಎಂದು ಅವರ ಒಂದು ಪ್ರಸಂಗವನ್ನು ಹೇಳತೊಡಗಿದೆ. ಲಂಕೇಶ್ ಎಷ್ಟು ಕುತೂಹಲದಿಂದ ಕೇಳಿಸಿಕೊಂಡು ನಕ್ಕರೆಂದರೆ ಆ ವರ್ಷದ ಅವರ ಹುಟ್ಟುಹಬ್ಬಕ್ಕೆ ಯಕ್ಷಗಾನವನ್ನು ಕರೆಸೇಬಿಟ್ಟರು.

ಆ ಸಮಯದಲ್ಲಿ ಅವರ ಪ್ರೀತಿ ಮತ್ತು ವಿಶ್ವಾಸವನ್ನು ಸಂಪಾದಿಸಿದ್ದ ಮಹಾಬಲಮೂರ್ತಿ ಕೋಡ್ಲುಕೆರೆ ಶಂಭು ಹೆಗಡೆಯವರ ಟೀಮನ್ನು ಕರೆಸಿ ರಾವಣನ ಒಂದು ಪ್ರಸಂಗವನ್ನು ಆಡಿದರು. ಯಕ್ಷಗಾನದ ರುಚಿ ಹತ್ತಿದ ಲಂಕೇಶ್ ಆ ಮುಂದಿನ ವರ್ಷ ಕೃಷ್ಣ ಸಂಧಾನದ ತಾಳಮದ್ದಳೆ ಕರೆಸಿದರು. ಈ ತಾಳಮದ್ದಳೆಯಲ್ಲಿ ಶೇಣಿಯವರು ಬಾರದಿದ್ದರೂ ಅವರನ್ನು ನೂರಾರು ಪ್ರಸಂಗದಲ್ಲಿ ಎದುರುಗೊಂಡು ನಿಭಾಯಿಸಿದ ಕುಂಬ್ಳೆ ಸುಂದರರಾಯರು ಮತ್ತು ಡಾ. ಎಂ. ಪ್ರಭಾಕರ ಜೋಷಿಯವರು ಬಂದಿದ್ದರು. ನಿಜಕ್ಕೂ ಆ ದಿನ ದುರ್ಯೋಧನನಾಗಿ ಶೇಣಿ, ಕೃಷ್ಣನಾಗಿ ಕುಂಬ್ಳೆ ಇದ್ದಿದ್ದರೆ ಅನ್ನಿಸಿತ್ತು. ನನ್ನ ಅನ್ನಿಸಿಕೆ ಅಲ್ಲ್ಯಾರಿಗೂ ಇರಲಿಲ್ಲ. ಏಕೆಂದರೆ ಅಲ್ಲಿ ಬಂದಿದ್ದ ಬಹುತೇಕ ಜನ ಎಣ್ಣೆ ಹೊಡೆದು ಒಂದಿಷ್ಟು ಬಾಡು ತಿಂದು ಲಂಕೇಶ್ ಕಣ್ಣಿಗೆ ಬಿದ್ದು ಪರಾರಿಯಾಗುವಂತಹವರು.

ಒಂದೇ ಒಂದು ಯಕ್ಷಗಾನ ಮತ್ತು ತಾಳಮದ್ದಳೆ ಕೇಳಿದ್ದ ಲಂಕೇಶ್‌ಗೆ ನಮ್ಮ ಅಹಂಕಾರದಿಂದಲೇ ಎಂತಹಾ ಕಲೆಯನ್ನು ನಿರ್ಲಕ್ಷ ಮಾಡಿ ನೋಡಲಿಲ್ಲವಲ್ಲಾ ಎನ್ನಿಸಿತ್ತು. ಅವರು ಶೇಣಿಯವರ ತಾಳಮದ್ದಳೆ ಕೇಳಿದ್ದರೆ ಏನನ್ನುತ್ತಿದ್ದರೋ ಏನೋ. ಕುಣಿತವಿಲ್ಲದೆ ಬರೀ ವೇಷಧಾರಿಯಾಗಿ ಮಾತಿನ ಮೂಲಕವೇ ಯಕ್ಷಲೋಕವನ್ನು ಆಳಿದ ಶೇಣಿ ಒಂದು ಮಹಾ ಹೆಮ್ಮರ. ಈಗ ಈ ಮಹಾ ಹೆಮ್ಮರ ಉರುಳಿದೆ. ಹಾಗನ್ನುವುದಕ್ಕಿಂತಲೂ ಯಕ್ಷಲೋಕದ ಮಹಾ ನಕ್ಷತ್ರವೊಂದು ಉರುಳಿದೆ. ಅಂತಹವರು ಮತ್ತೆ ಹುಟ್ಟಲಾರರು.

–ಬಿ. ಚಂದ್ರೇಗೌಡ



ಅಂಧೇರಿ ನಗರಿ

ಎಡೆಬಿಡದೆ ಸುರಿದ ಮಳೆಗೆ
ತತ್ತರಿಸಿದ ಮುಂಬೈ ನಗರಿ
ಚೇತರಿಸಿ ಉಸಿರಾಡುತ್ತಿದ್ದಂತೆಯೇ
ಒಂದರ ಹಿಂದೊಂದರಂತೆ
ಸರಣಿ ಬಾಂಬುಗಳ ಸ್ಫೋಟ
ದುರಂತಗಳ ಮಧ್ಯದಲ್ಲಿಯೇ
ಎದ್ದು ನಿಲ್ಲುತ್ತದೆ ಮುಂಬೈ ನಗರಿ
ಫಿನಿಕ್ಸ್ ಹಕ್ಕಿಯ ಸಾವಿನಂತೆ
ಮತ್ತೆ ಮತ್ತೆ ಸತ್ತು ಬದುಕುತ್ತದೆ.

ಹಲವಾರು ಜನಾಂಗಗಳು, ಭಾಷೆಗಳು
ಸೌಹಾರ್ದತೆಯಿಂದ ಬದುಕಿವೆಯಿಲ್ಲಿ
ಕಂಡಿವೆ ಭಿನ್ನತೆಗಳ ಮಧ್ಯೆ ಏಕತೆ
ವಾಣಿಜ್ಯ ನಗರಿಯ ಗರ್ಭದಲ್ಲಿ
ದುರಂತಗಳ ಅಂಧೇರಿ ನಗರಿ
ಕತ್ತಲೆಯಲ್ಲೂ ಝುಗಝುಗಿಸುತ್ತದೆ.
ಮಾಯಾನಗರಿ ಮಲಗುವುದೇ ಇಲ್ಲ
ಒತ್ತಡಗಳಲ್ಲಿಯೇ ಬದುಕುತ್ತದೆ.

ಥಳಕು ಬಳುಕಿನ ಬಾಲಿವುಡ್
ತಾರೆಗಳ ಲೋಕವೂ ಇಲ್ಲಿಯೇ ಇದೆ.
ಭೂಗತ ಜಗತ್ತಿನ ಕೈಗಳು ಹೆಣೆದ
ಸಾವಿನ ಸುಳಿಗಳೂ ಇಲ್ಲಿಯೇ ಇವೆ.
ದುರಂತ-ತಲ್ಲಣಗಳ ಮರುಕ್ಷಣವೇ
ಬದುಕು ಚಿಗಿಯುತ್ತದೆ ಇಲ್ಲಿ
ವಿಚಲಿತವಾಗದು ಸ್ಫೋಟಗಳಿಗೆ
ಎದೆ ನಡುಗಿಸುವ ಶಬ್ದಕ್ಕೂ ಹೆದರದೇ
ಜನಜಂಗುಳಿಯ ಹೊತ್ತು ಮುನ್ನಡೆವ
ಲೋಕಲ್ ಟ್ರೇನುಗಳು ಸಾಲು ಸಾಲು
ಒಂದು ಕ್ಷಣ ಗಕ್ಕನೆ ನಿಂತರೆ ಟ್ರೇನು
ಬದುಕು ಸ್ಥಬ್ಧವಾಗುವುದಿಲ್ಲಿ.
ಸಾವಿನ ಕರಿನೆರಳುಗಳ ದಾಟಿದರೆ
ಸ್ಫೋಟದ ಶಬ್ದಕ್ಕೆ ಹರಿದ ಕಿವಿಪಟಲ
ಸಾವು ನೋವಿನ ಆರ್ತನಾದ

ಭೂಗತ ಉಗ್ರರ ಅಟ್ಟಹಾಸ
ಸರಣಿ ಬಾಂಬುಗಳ ಸ್ಫೋಟ
ಯಾವ ಸಾಧನೆಗಾಗಿ?
ಕೂಡಿ ಬಾಳಿದ ಮುಂಬೈಗೆ
ಅನಾದಿಕಾಲದ ಇತಿಹಾಸವಿದೆ
ಮಾನವೀಯತೆಯ ಉನ್ನತ ಗುಣವಿದೆ.
ಹಂತಕನಿಗೆ ದೇವರು, ಧರ್ಮಗಳಿಲ್ಲ
ಹಿಂಸೆಯ ಆಯುಧವೂ ಆತ್ಮಳ್ಳಿ
ಕೊಲ್ಲುವ ಹಂತಕನಿಗೂ ಸಾವು ನಿಶ್ಚಿತ.

–ಕೆ. ಪರೀಕ್ಷಾ

→

ಅಂತ ಅಂದ. ದಳದವ್ರು ಒಪ್ಪಿಕೊಳ್ಳಲಿಲ್ಲ. ನಾನು ಹೋಯ್ತೀನಿ ಅಂದೆ...

ತಿರುಗಿ ಬಂದೆ. ನನ್ನ ಅತ್ತಿಗೆ ರೊಟ್ಟಿ ಬಡೀತಿದ್ದಳು. ನನಗೆ ಒಂದು ರೊಟ್ಟಿ ಕೊಟ್ಟಳು. ಕೈಕಾಲು ತೊಳೆದು ಬಂದೆ. ದುಪಟ, ಚೀಲ ಎರಡನ್ನೂ ಆಕಡೆ ಇಟ್ಕೆ. ಎಷ್ಟೊತ್ತಿಂದ ಅವಿತು ಕೂತು ಕಾಯುತ್ತಿದ್ದರೋ, ಸುತ್ತ ಪೋಲಿಸರು ನೆರೆದರು. ಅಗಾ... ಅಲ್ಲೊಂದು ಮಾವಿನ ಮರ...ಇಲ್ಲೊಂದು ಬಗನಿ ಮರ. ಸರೀಕರೂ ಸುತ್ತ ಮುತ್ತ ಇದ್ದರು. ನನ್ನ ಕೈಗಳನ್ನ ಹಿಂದಕ್ಕೆ ತಳ್ಳಿ ಮರಕ್ಕೆ ಕಟ್ಟಿದ್ರು. ಹಗ್ಗದಲ್ಲಿ ಬಿಗಿದ್ರು. ಕಾಲಿಗೆ ಗೆಜ್ಜೆ ಕಟ್ಟಿದಂಗೆ ನಾರಿನಲ್ಲಿ ನನ್ನ ಕಾಲನ್ನು ಬಿಗಿದ್ರು. ಮೇಲೆ ನೀರು ಚಿಮುಕಿಸಿ ಗಂಟು ಇನ್ನೂ ಬಿಗಿಯೋ ಹಾಗೆ ಮಾಡಿದ್ರು. ನನ್ನ ತಮ್ಮನಿಗೆ ಎದೆ ಧಸಕ್ಕಂತು. 'ಈ ಪಾಪಿಗೆ ಅವಳನ್ನ ಸಮಾಧಾನ ಮಾಡಿ ಕರೆದುಕೊಂಡು ಬಂದೆನೇ?' ಎಂದು ಗೋಳಾಡಿದ. ಧಪ್..ಧಪ್..ಅಂತ ಚಾಟಿ ಏಟು...ಒಂದೊಂದು ಸಲ ಬಾರಿಸಿದ್ರೆ ಮೂರು ಸುತ್ತು ನನ್ನ ಮೈ ಸುತ್ತಿಕೊಳ್ಳುತ್ತಿತ್ತು, ಮುಸ್ಲೋರಿ ಸ್ಫೋಲೀಸರಂತೆ, ಚಾಟಿಗಳು. ಹೊಡೆತ ತಪ್ಪಿಸಿಕೊಳ್ಳಕೆ, ಕೈ ಎತ್ತಿದ್ರೆ ಕೈ ಮೇಲೆಲ್ಲಾ ಬಾಸುಂಡೆ. ಸುತ್ತ ರಕ್ತ ಚೆಲ್ಲಾಡಿತ್ತು, ನನ್ನ ಮಗ ಭೋ ಅಂತ ಮನಿ ತುಂಬ ಚೀರ್‍ತಾ ಇದ್ದ....

ಇಗಾ...ನೋಡಿ ಗಾಯದ ಕಲೆಗಳು ಈಗ ಹಳದಿಯಾಗಿದಾವೆ. ಏನೇನೋ ಚಿತ್ರಹಿಂಸೆ ಕೊಟ್ರು. ಆ ಮನೇಲಿ ಮೂರು ತಿಂಗಳಿಟ್ಟಿದ್ರು. ನನ್ನ ಮನೆಯೋರೆಲ್ಲ ನಾನೇನಾದ್ರೂ ತಪ್ಪಿಸಿಕೊಂಡರೆ ಅವರೇ ಜವಾಬ್ದಾರಿ ಅಂತ ಮುಚ್ಚಳಿಕೆ ಬರೆದುಕೊಟ್ಟ ಮೇಲೆ ನನ್ನ ಹೋಗೋಕೆ ಬಿಟ್ರು. ಒಂದಿಷ್ಟು ನುಚ್ಚು ಹೊಂದಿಸಿಕೊಂಡು, ನನ್ನ ಮಗಂದಿರನ್ನು ಕರೆದುಕೊಂಡು ಇಲ್ಲಿಗೆ ಬಂದೆ...



ಆಮೇಲೆ ದುಷ್ಟ್ನಿ, ಏರಂಪ್ಪ ಸತ್ತ, ಯಾರಿಂದ ಸತ್ತ? ಯಾಕೆ ಸತ್ತ? ನಂಗೇನು ಗೊತ್ತು? ಅವನ ಹೆಂಡತಿ ಸತ್ಯನ್ನು ನಾನೇ ಅವಳ ಗಂಡನ್ನ ಕೊಲ್ಲಿಸಿದ್ದು ಅಂತ ಹೇಳ್ಕೊಂಡು ಬಂದಳು. 'ಆ ಸೂಳೇನ ಹಿಡಿದು ತನ್ನಿ' ಅಂತ ಅಪ್ಪಣೆಯಾಯ್ತು, ಬೆಳಕು ಹರಿಯೋದ್ರಲ್ಲಿ ಮಿಲಿಟರಿಯೋರು ಬಂದು ನನ್ನ ಕರ್ಕೊಂಡು ಹೋದ್ರು. ಅವನ ದೊಡ್ಡ ಮನಿ ಮುಂದೆ ಹೆಣ ಇಟ್ಟಿದ್ರು. 'ಸೂಳೆ, ನೀನೇ ಈ ಮುದುಕನ್ನ ಕೊಲ್ಲಿಸಿದ್ದು...ನಿನ್ನೂ ಒಂದು ಚಟ್ಟಕ್ಕೆ ಹಾಕ್ತೀವಿ...' ಅಂತೆಲ್ಲ ಕಿರುಚಿದ್ರು. ನಾನು ಬಾಯಿ ತೆಗೆಯಲಿಲ್ಲ...

ಇಷ್ಟೆಲ್ಲಾ ಆದಮೇಲೆ ಅದೇಗೋ ಈ ಮನೆಗೆ ಬಂದೆ. ಶರಾಬು ಕುಪ್ಪಿಗಳನ್ನ ಹೊತ್ತೆ. ಭತ್ತ ಕುಟ್ಟಿದೆ. ಕೂಲಿಗೆ ದುಡಿದೆ. ಸುಮ್ಮನೆ ಕೂರಲಿಲ್ಲ...ದುಡ್ಡು ಮಾಡಕ್ಕೆ ಯಾರೂ ದಳಕ್ಕೆ ಹೋಗೋಲ್ಲ. ಈಗ ಯಾರ ಹತ್ತಿರ ನನ್ನ ಕಥೆ ಹೇಳಲಿ? ಕೂತ್ರೆ ಏಳೋಕ್ಯಾಗಲ್ಲ, ಎದ್ರೆ ಕೂರೋಕ್ಯಾಗೋಲ್ಲ, ನನ್ನ ಕಥೆ ನನಗೇ ಇರಲಿ...

(ಮೂಲ: ವಿಮೆನ್ ರೈಟಿಂಗ್ ಇನ್ ಇಂಡಿಯಾ, ಸಂಪುಟ ಎರಡು. ಸಂ: ಸೂಸಿ ಥಾರು ಮತ್ತು ಕೆ. ಲಲಿತಾ)

ಜೀವನವು ಮೃತ್ಯುವಿನೊಡನೆಯೇ ಸಮಾಪ್ತಿಯಾಗುವುದಿಲ್ಲ.

ಎಲ್ಲರೂ ಸಂಪನ್ನರೆ

'ಎಲ್ಲಿದ್ದಾರ್ರಿ ಸಂಪನ್ನರು' ಅಂತ ರೇಗಿದರು ರಿಟೈರ್ಡ್ ಡಿ.ಜಿ. ರಿಜಿಸ್ಟ್ರಾರ್ ಕಾಳಿಂಗರಾಯರು ಬೆಳಗಿನ ವಾಕಿಂಗ್‌ನಲ್ಲಿ. ರಾಯರು ಸರ್ವೀಸಿನಲ್ಲಿದ್ದಾಗ ಲಂಚವನ್ನೇ ಮುಟ್ಟುವುದಿಲ್ಲ ಎಂಬ ವೀರ ಶಪಥವನ್ನೇನೂ ಮಾಡಿರಲಿಲ್ಲ. ಆದರೆ 'ಕುಮಕಿ ಮಾಡಿ ದಕ್ಷಿಣೆ ಪಡೆಯಬೇಕೇ ಹೊರತು ತಿಥಿ ಮಾಡಿ ದಕ್ಷಿಣೆ ಪಡೆಯುವುದು ಸಲ್ಲ' ಅನ್ನುವ ಜಾಯಮಾನದವರು. ಅಂತಹ ಮನೋಭಾವದವರಿಗೆ ಎರಡನೇ ವರ್ಗದ ಜನರೇ ಎಲ್ಲೆಲ್ಲೂ ಮೆರೆಯುತ್ತಿರುವುದು ಆತಂಕ, ಜಿಗುಪ್ಸೆ, ಕೋಪಗಳಿಗೆ ಎಡೆ ಮಾಡಿರಬಹುದು.

ಬೀಚಿಯವರು ಒಂದು ನಗೆ ಬರಹದ ಸಂಕಲನ ಹೊರತಂದಿದ್ದಾರೆ. ಅದರ ಹೆಸರು 'ಸಂಪನ್ನರಿದ್ದಾರೆ ಎಚ್ಚರಿಕೆ!' 'ಕಳ್ಳರಿದ್ದಾರೆ ಎಚ್ಚರಿಕೆ' ಎನ್ನುವ ಸೂಚನಾಫಲಕ ಸಾರ್ವಜನಿಕ ಸ್ಥಳಗಳಲ್ಲಿ ಇರುವುದು ಮಾಮೂಲು. ಈ 'ಸಂಪನ್ನರಿದ್ದಾರೆ ಎಚ್ಚರಿಕೆ' ಎಂದರೇನು ಅರ್ಥ? ಬೀಚಿ ಯವರೇ ವಿಶದೀಕರಿಸುತ್ತಾರೆ: ಇವರು ಜಾಣ ಕಳ್ಳರು! ಸಂಪನ್ನ ಕಳ್ಳರು! ಇದೆಂತಹ ವಿರೋಧಾಭಾಸ? ಹಾಗೆಂದರೆ ಸಂಪನ್ನರ ವೇಷದಲ್ಲಿರುವ ಕಳ್ಳರು ಎಂದರ್ಥ!

ಇದನ್ನು ಇಲ್ಲಿ ಯಾಕೆ ಪ್ರಸ್ತಾಪಿಸಬೇಕಾಯಿತು ಅಂದರೆ 'ಕಳ್ಳರಿದ್ದಾರೆ ಎಚ್ಚರಿಕೆ' ಎಂದರೆ ಅರ್ಥ ಏನು? ಬಹುಪಾಲು ಜನ ಒಳ್ಳೆಯವರು, ಎಲ್ಲೋ ಕೆಲವರು ಕಳ್ಳರು ಇದ್ದಾರೆ; ಅವರ ಬಗ್ಗೆ ಎಚ್ಚರ ಇರಲಿ ಎಂದು ತಾನೆ? ಹಾಗೇನೇ 'ಸಂಪನ್ನರಿದ್ದಾರೆ ಎಚ್ಚರಿಕೆ!' ಎಂದರೆ ಎಲ್ಲೋ ಕೆಲವು ಜನ ಜಾಣ ಕಳ್ಳರಿದ್ದಾರೆ, ಆದರೆ ಬಹುಪಾಲು ಜನ ಸರ್ವಗುಣ ಸಂಪನ್ನರು ಅಂತ ತಾನೆ ಅರ್ಥ? ಆದರೆ ಕಾಳಿಂಗರಾಯರು 'ಎಲ್ಲಿದ್ದಾರ್ರಿ ಸಂಪನ್ನರು' ಅಂತ ಪ್ರಶ್ನಿಸಿದರೆ ಇದರ ಅರ್ಥ ಏನು? ಸಂಪನ್ನರು ಇಲ್ಲವೇ ಇಲ್ಲ ಎಂಬ ಅರ್ಥ ತಾನೆ.

ರಣಹದ್ದುಗಳ ಸಂತತಿ ಕ್ಷೀಣಿಸುತ್ತಾ ಇದೆ ಅನ್ನೋದನ್ನ ಪತ್ರಿಕೆಯಲ್ಲಿ ಓದಿದ್ದೆ. ಹಾಗೇನಾದರೂ ಈ ಸಂಪನ್ನರ ಸಂತತಿಯೂ ಕ್ಷೀಣಿಸುತ್ತಾ ಇದೆಯಾ ಅನ್ನುವ ಗುಂಗಿನಲ್ಲೇ ಮನೆ ತಲುಪಿ ಮಾಮೂಲಿನಂತೆ ಟಿವಿ ಮುಂದೆ ಕುಳಿತೆ. ವಿಧಾನಸಭೆ ನಡವಳಿಕೆಗಳ ನೇರ ಪ್ರಸಾರ ಬರುತ್ತಿತ್ತು. ಎಷ್ಟು ಮಜಬೂತಾಗಿತ್ತು ಅಂತೀರಿ. ಸದಸ್ಯರ ಕೈಗೆ ಒಂದೊಂದು ಲಾಂಗ್ ಕೊಟ್ಟಿದ್ದರೆ, ಥ್ರಿಲ್ ಕೊಡೋ ಸಿನಿಮಾ ಫೈಟಿಂಗ್ ಸೀನ್‌ಗಳನ್ನು ಇದರ ಮುಂದೆ ನೀವಾಳಿಸಿ ಬಿಸಾಕಬೇಕು, ಅಂತಹ ಅದ್ಭುತ ಸೀನ್ ಕ್ರಿಯೇಟ್ ಮಾಡಿದ್ದರು ಗೌರವಾನ್ವಿತ ಸದಸ್ಯರು! ಹಾಗೆ ನೋಡ್ತಾ ನೋಡ್ತಾ ನಿದ್ದೆ ಹೋದೆ. ಕನಸೋ, ನಿಜವೋ ಒಂದೂ ತಿಳಿಯದಂತಹ ಸ್ಥಿತಿ ತಲುಪಿದ್ದೆ.

ಮುಖ್ಯಮಂತ್ರಿ ಕುಮಾರಸ್ವಾಮಿಯವರು ಬಂದರು. ಹೊರಲಾರದೆ ಹೊತ್ತು ತಂದ ಕಡತ ಅವರ ಮೇಜಿನ ಮೇಲಿತ್ತು. ಕೈಯ್ಯಲ್ಲಿ ಸಿ. ದಿನಕರ್ ಅವರ 'ವೀರಪ್ಪನ್ಸ್ ಪ್ರೈಜ್ ಕ್ಯಾಚ್: ರಾಜ್‌ಕುಮಾರ್' ಪುಸ್ತಕ ಇತ್ತು. ಅವರನ್ನೇ ಕೇಳಿದೆ: 'ಏನ್ಸಾರ್ ಇದು?'

'ನನ್ನ ಮೇಲಿನ ಆರೋಪಗಳಿಗೆ ಉತ್ತರಾರೀ' ಅಂದರು ಮುಖ್ಯಮಂತ್ರಿಗಳು.

ಅರೆ, ಕೊಳ್ಳೆ ಹೊಡೆಯಲು ಇವರೂ ಶಾಮೀಲಾಗಿದ್ದರಾ?

'ನಿಮ್ಮ ಪಾಲು ಇತ್ತ ಸಾರ್ ಇದರಲ್ಲಿ?' ಕೇಳಿದೆ.

'ಏನು ತಲೇರಿ ನಿಮ್ದು... ನಾನು ಭಾಗಿಯಾಗಿದ್ದರೆ ಈ ಪುಸ್ತಕಾನ ಮಾರ್ಕೆಟ್ಟನಲ್ಲಿ ಇಲ್ಲಿವರೆವಿಗೆ ಇರೋಕೆ ಬಿಡ್ತಿದ್ದೆನೇನ್ರೀ' ಅಂತ ಮೀಸೆ ಇರಬೇಕಾದ ಕಡೆ ಕೈ ಹಾಕಿದರು. 'ಕಾಂಗ್ರೆಸ್‌ನವರ ಬಂಡವಾಳ ಬಯಲು ಮಾಡ್ತೀನಿ ನೋಡ್ತಿರಿ' ಅಂದರು.


ಕಾಂಗ್ರೆಸ್ಸಿನವರು ರಾಜ್‌ಕುಮಾರ್ ಬಿಡಿಸಿಕೊಂಡು ಬರೋಕೆ ಹತ್ತೋ ಇಪ್ಪತ್ತೋ ನಲವತ್ತೋ ಕೋಟಿ ರೂಪಾಯಿಗಳನ್ನ ಅವರಿವರಿಂದ ಕಿತ್ತು ಕೊಟ್ಟಿರಬಹುದು. ಈ ಸರ್ಕಾರದ ಮೇಲಿನ ಲಂಚದ ಆರೋಪಕ್ಕೆ ಇದು ಹೇಗೆ ಉತ್ತರ ಆಗುತ್ತೆ? ಇದೇನು ಮಕ್ಕಳ ಆಟ ಇದ್ದ ಹಾಗೆ ಇದೆಯಲ್ಲಾ, ಮಕ್ಕಳು ಅವನು ನನ್ನ ಕಾಲು ತುಳಿದ, ನಾನು ಅವನ ಕಪಾಳಕ್ಕೆ ಬಾರಿಸಿದೆ ಅನ್ನೋ ನ್ಯಾಯ ಇದ್ದ ಹಾಗೆ ಇದೆಯಲ್ಲಾ.

'ಅಲ್ಲಾ ಸಾರ್' ಅಂದೆ.

'ಏನ್ರೀ?' ಅಂದರು.

'ಇದಕ್ಕೆ ಅದು ಉತ್ತರಾನಾ ಸಾರ್?'

'ಹೇಗೆ ಉತ್ತರ ನೀಡಬೇಕು, ಹೇಗೆ ಆಡಳಿತ ನಡೆಸಬೇಕು ಅಂತ ಯಾರಿಂದಲೂ ಕಲಿಯಬೇಕಾಗಿಲ್ಲ' ಅಂದರು ಖಂಡತುಂಡವಾಗಿ.



ಏನಾಶ್ಚರ್ಯ ಅಂತೀರಿ. ಸುದ್ದಿ ಮಾಧ್ಯಮಗಳು 'ತಂದೆಯ ರೀತಿಯಲ್ಲೇ ತಿರುಗೇಟು ನೀಡಿದ ಮಗ', 'ಕಾಂಗ್ರೆಸ್‌ಗೆ ಮುಖ್ಯಮಂತ್ರಿ ತಿರುಗೇಟು' ಅಂತ ಹಾಡಿ ಹೊಗಳಿ ಲೇಖನ ಬರೆದವು.

ಆದರೆ... ಲಂಚದ ಆರೋಪಕ್ಕೆ ಉತ್ತರ?

ಅಫೆನ್ಸ್ ಈಸ್ ದಿ ಬೆಸ್ಟ್ ಫಾರಂ ಆಫ್ ಡಿಫೆನ್ಸ್ ಅಂತ ಯಾರೋ ಹೇಳಿದ ಮಾತು ನೆನಪಾಯಿತು.

'ಸಂಪನ್ನರಿದ್ದಾರೆ ಎಚ್ಚರಿಕೆ!' ಸರೀನಾ?

ಮೇಲ್ಮನೆ ಸದಸ್ಯ ಜನಾರ್ಧನ ರೆಡ್ಡಿ ಎತ್ತಿದ ಲಂಚದ ವಿಚಾರ ಬಂತು. ಅರಣ್ಯ ಸಚಿವರು ಬಂದರು.

'ಸಾರ್ 150 ಕೋಟಿ ಸಮಾಚಾರ' ಅಂದೆ.

'ಆ ರೆಡ್ಡಿ ಒಬ್ಬ ಹುಚ್ಚ ಕಣ್ರೀ' ಅಂದರು.

'ಆ ದುಡ್ಡು?'

'ನಮ್ಮಪ್ಪನಾಣೆ ನಾನು ಕೈಲೂ ಮುಟ್ಟಿಲ್ಲ ಕಣ್ರೀ'.

'ಹಂಗೇ ಕಣ್ಣಲ್ಲಿ ನೋಡೇ ಇಷ್ಟೊಂತ ಎಣಿಸಿದ್ರ ಸಾರ್?'

'ಯಾವ ದೇವರ ಮೇಲಾದ್ರೂ ಆಣೆ ಇಡ್ತೀನಿ....ನಾನು ದುಡ್ಡೇ ನೋಡಿಲ್ಲ ಕಣ್ರೀ'.

'ಕುಮಾರಣ್ಣ ಅಪ್ಪಾಜಿ ಮೇಲೂ ಇಡ್ತೀರಾ ಸಾರ್?'

'ಹುಟ್ಟು ತರಲೆ ಕಣ್ರಿ ನೀವು.'

ಟ್ರಾನ್ಸ್‌ಫರ್ ಸೀನರಿ. 'ನಾನು ಆ ರೀತಿ ಆರೋಪನೇ ಮಾಡಿಲ್ಲ, ಮುಖ್ಯಮಂತ್ರಿ ಹೆಸರಿನಲ್ಲಿ ನಕ್ಸಲೈಟರು ಹಣ ವಸೂಲಿ ಮಾಡಿದ್ದಾರೆ ಅಂತ ಹೇಳಿದ್ದೆ' ಅಂದರು ಜನಾರ್ಧನ ರೆಡ್ಡಿ.

'ಸಾರ್ ಚೆನ್ನಿಗಪ್ಪನವರೆ.'

'ಏನು?'

'ರೆಡ್ಡಿಯವರ ಹೇಳಿಕೆ?'

'ಸರಿಯಾಗಿಯೇ ಹೇಳಿದಾರೆ ರೆಡ್ಡಿ ಅವರು. ನನಗೆ ಯಾರೋ ಅವರ ಬಗ್ಗೆ ತಪ್ಪು ಮಾಹಿತಿ ಕೊಟ್ಟಿದ್ದರು. ಅದಕ್ಕೆ ಹುಚ್ಚ ಅಂದಿದ್ದೆ. ಅವರು ಬಹಳ ಸಂಭಾವಿತ ಕಣ್ರೀ.'

'ಸಂಪನ್ನರಿದ್ದಾರೆ ಎಚ್ಚರಿಕೆ!' ನೆನಪಾಯಿತು.

ಮತ್ತೆ ಟ್ರಾನ್ಸ್‌ಫರ್ ಸೀನರಿ. ಜನಾರ್ಧನ ರೆಡ್ಡಿ ಅವರಿಂದ ಮೇಲ್ಮನೆಯಲ್ಲೇ ಮುಖ್ಯಮಂತ್ರಿ ಅವರ ಸಂಬಂಧಿಕರು, ಅರಣ್ಯಮಂತ್ರಿ, ಗೃಹಮಂತ್ರಿ ಮಗನ ಮೇಲೆ ಲಂಚ ಸ್ವೀಕರಿಸಿದ ಆರೋಪ. ನಮ್ಮಲ್ಲಿ ಎಂತಹ ಘನವಾದ ವ್ಯವಸ್ಥೆ ಇದೆ ಅಂತೀರಿ. ಆ ರೆಡ್ಡಿ ಮಹಾಶಯ ಇನ್ನೂ ಏನೇನು ಬಯಲುಗೊಳಿಸಿಬಿಡುತ್ತಾನೋ ಎಂದೋ ಏನೋ ವಿಧಾನ ಪರಿಷತ್ತಿನ ಸಭಾಪತಿಗಳು ಅವರಿಗೆ ಮಾತನಾಡಲು ಅವಕಾಶನೇ ನೀಡಲಿಲ್ಲ. ಆದರೂ ಮಾತನಾಡುತ್ತಲೇ ಇದ್ದ ಸದಸ್ಯರ ಮಾತು ಯಾರಿಗೂ ಕೇಳಬಾರದಲ್ಲ... ಅದಕ್ಕೇ ಧ್ವನಿವರ್ಧಕಗಳನ್ನೇ ಸ್ವಿಚ್ ಆಫ್ ಮಾಡಿದರು! 'ಮಾತನಾಡಬೇಡಿ', 'ಕುಂತ್ಕಳ್ಳಿ' ಅಂತ ಸಭಾಪತಿಗಳು ಮನವಿ ಮಾಡುತ್ತಿದ್ದರೂ ಸದಸ್ಯರು ಮಾತನಾಡುತ್ತಲೇ ಇರುತ್ತಾರಲ್ಲ, ಆಗೆಲ್ಲ ಹೀಗೇನೆ ಸ್ವಿಚ್ ಆಫ್ ಮಾಡ್ತಾರಾ ಅಂದರೆ... ಅದು ಬೇರೆ ವಿಷಯ, ಇದು ಬೇರೆ ವಿಷಯ! ಇರಲಿ. ಲಂಚದ ಆರೋಪಕ್ಕೆ ಮಾಧ್ಯಮದವರ ಎದುರು ಮುಖ್ಯಮಂತ್ರಿ, ಗೃಹಮಂತ್ರಿಗಳ ಸ್ಪಷ್ಟೀಕರಣ.

`150ಕೋಟಿ ಅಂದರೆ ಹದಿನೈದರ ಮುಂದೆ ಎಷ್ಟು ಸೊನ್ನೆ ಹಾಕಬೇಕು ಅನ್ನುವುದೂ ಗೊತ್ತಿಲ್ಲ' ಮುಖ್ಯಮಂತ್ರಿ ಹೇಳಿಕೆ.

'ಜನಾರ್ಧನ ರೆಡ್ಡಿಯವರ ಮೇಲೆ ಕ್ರಮ ಜರುಗಿಸುತ್ತೀರಾ?' ಮಾಧ್ಯಮದವರ ಪ್ರಶ್ನೆ.

'ಆತನ ಮೇಲೆ ಆಗಲೇ ನಾಲ್ಕೈದು ಮಾನನಷ್ಟ ಮೊಕದ್ದಮೆ ಇದೆ' ಮುಖ್ಯಮಂತ್ರಿ....

'ಪದೇ ಪದೇ ಹೇಳಿಕೆ ಬದಲಾಯಿಸುತ್ತಿರುವ ಅವನೊಬ್ಬ ಹುಚ್ಚ' ಗೃಹಮಂತ್ರಿ.

'ನಿಮ್ಮ ಮಗನ ಮೇಲೆ ಆರೋಪ ಇದೆಯಲ್ಲ?'

'ನನ್ನ ಮಗ ಶ್ರೀರಾಮಚಂದ್ರನಂತೋನು. ಗಾಂಧೀಜಿಯ ಮೇಲೇ ಆರೋಪ ಮಾಡುತ್ತಿದ್ದ ದೇಶ ಇದು. ಇಂತಹ ಆರೋಪ ಸರ್ವೇ ಸಾಮಾನ್ಯ.'

'ಅದು ನಿಜವೋ ಸುಳ್ಳೋ?'

'ಸುಳ್ಳು, ನೂರಕ್ಕೆ ನೂರರಷ್ಟು ಸುಳ್ಳು'

'ಸತ್ಯವಾಗಿದ್ದರೆ ಏನು ಮಾಡ್ತೀರಿ?'

'ರಾಜಕೀಯ ಸನ್ಯಾಸತ್ವ ತಗೊಳ್ತೀನಿ!'

'ಆನಂತರ?'

'ಸಾಹಿತ್ಯ ಅಧ್ಯಯನದಲ್ಲಿ ಕಾಲ ಕಳೀತಿನಿ.'

'ಮಗನ ಅಪರಾಧಕ್ಕೆ ಶಿಕ್ಷೆ ಆಗಬೇಡವೆ?'

'ಅದಕ್ಕೆ ದೇಶದ ಕಾನೂನು ಇವೆ.'

'ಗೃಹಮಂತ್ರಿಯವರನ್ನು ಈ ರೀತಿ ಮೂಲೆಗೆ ಕುಳ್ಳರಿಸಬೇಕು ಎಂಬುದೇ ಆ ರೆಡ್ಡಿಯ ಹುನ್ನಾರ. ಪ್ರಕಾಶರಿಗೆ ಮಂತ್ರಿಗಿರಿ ಕೊಡಬೇಡಿ ಅಂದ. ನನ್ನನ್ನೇ ಮಂತ್ರಿ ಮಾಡಿ ಅಂತ ದುಂಬಾಲು ಬಿದ್ದ. ನಾನು ಒಪ್ಪಲಿಲ್ಲ. ಗಣಿಗಾರಿಕೆಗೆ ನಿರ್ಬಂಧ ಹೇರಿದೆ. ನೂರೈವತ್ತು ಕೋಟಿ ಆರೋಪ ತಂದ' ಮುಖ್ಯಮಂತ್ರಿ.

'ಸಿಬಿಐ ತನಿಖೆಗೆ ಒಳಪಡಿಸಿದರೆ ಸತ್ಯ ಹೊರಬೀಳುವುದಲ್ಲ?'

'ಅದು ಬೇಕಿಲ್ಲ. ಅವನು ಏನು ಅನ್ನುವುದು ನನಗೆ ಗೊತ್ತಿದೆ. ನಮ್ಮ ಪೊಲೀಸಿನವರೇ ದಕ್ಷರಿದ್ದಾರೆ.'

......ಮತ್ತೆ ಅದೇ 'ಸಂಪನ್ನರಿದ್ದಾರೆ ಎಚ್ಚರಿಕೆ!' ಮುಂದೆ ಬಂತು.

ಮತ್ತೆ ಟ್ರಾನ್ಸ್‌ಫರ್ ಸೀನರಿ. ಭಾಜಪ ಅಧ್ಯಕ್ಷ ಸದಾನಂದಗೌಡರ ಹಸನ್ಮುಖ ಕಂಡಿತು.

'ಗೊತ್ತುಂಟು ಗೊತ್ತುಂಟು. ನೂರ ಐವತ್ತು ಕೋಟಿ ಸಮಾಚಾರ ಅಲ್ಲವಾ? ಅದಕ್ಕೆ ಆಗಲೇ ಕ್ರಮ ಕೈಗೊಂಡು ಆಯಿತಲ್ಲ ಮಾರಾಯ' ಅಂದರು ನನ್ನನ್ನು ನೋಡುತ್ತಿದ್ದಂತೆ. ಕ್ರಮ ಕೈಗೊಂಡಿದ್ದಾರೆ ಅಂದರೆ ಕೋ-ಜಾ ಸರ್ಕಾರ ಉರುಳಿದಂತೆ!

'ಯಾವಾಗ ಬೆಂಬಲ ವಾಪಸ್ಸು ತೆಗೆದುಕೊಳ್ತೀರಿ?'

'ಎಂತದ್ದು ಮಾರಾಯ ನಿಮ್ಮ ಮಾತು? ಯಾವ ಬೆಂಬಲ, ಏನು ತೆಗೆದುಕೊಳ್ಳುವುದು... ಮಂಡೆ ಬಿಸಿ ಮಾಡಬೇಡಿ ಮಾರಾಯರಾ.'

'ಕ್ರಮ ಕೈಗೊಂಡಿದ್ದೇವೆ ಅಂದಿರಿ?'

'ಹೌದು ಕ್ರಮ ಕೈಗೊಂಡಿದ್ದೇವೆ. ಅದರಲ್ಲಿ ಅನುಮಾನ ಪಡುವುದು ಬೇಡ.'

'ಏನು ಕ್ರಮ ಅದು?'

'ಅದೇ ಜನಾರ್ಧನ ರೆಡ್ಡಿಯನ್ನು ಪಕ್ಷದಿಂದ ಹೊರಗೆ ಹಾಕಿದ್ದೇವೆ!'

ಸಂಪನ್ನರಿದ್ದಾರೆ ಎಚ್ಚರಿಕೆ!

-ಎಚ್.ಎಲ್.ಕೇಶವಮೂರ್ತಿ

"ಕಣ್ಣು ಕಿವಿ ಇಲ್ಲದ ಕೆಪಿಎಸ್‌ಸಿ"

ಎಫ್‌ಡಿಎ ನೇಮಕಾತಿ ಗೋಲ್‌ಮಾಲ್ ಬಗ್ಗೆ ಜುಲೈ 26 ರ ಸಂಚಿಕೆಯಲ್ಲಿ ಓದಿದೆ. ಈ ಬಗ್ಗೆ ಪತ್ರಿಕೆಯ ಸ್ಪಂದನ ನಿಧಾನವೆನಿಸಿತು. ಹಲವಾರು ದಿವಸಗಳಿಂದಲೂ ಅನ್ಯಾಯವಾಗಿರುವ ಅಭ್ಯರ್ಥಿಗಳು ದಿನ ಪತ್ರಿಕೆಗಳಲ್ಲಿ ಸಕಾರಣ ಸಹಿತ ಪ್ರತಿಭಟಿಸಿದರೂ, ಕೆಪಿಎಸ್‌ಸಿಯಿಂದ ದೋಷ ಸರಿಪಡಿಸುವ ಬಗ್ಗೆ ಚಕಾರ ವಿಲ್ಲ.

ಕೆಪಿಎಸ್‌ಸಿ ಎಂದರೆ ಅದೊಂದು ಕಣ್ಣು, ಕಿವಿ, ಇಲ್ಲದ ಕೇವಲ ಉದ್ದನೆಯ ಕೈಗಳಿರುವ ನೇಮಕಾತಿ ಸಂಸ್ಥೆ ಎನ್ನುವಂತಿದೆ. ಸರ್ಕಾರ ಇಂತಹ ವಿಷಯದತ್ತ ತೀರಾ ನಿರ್ಲಕ್ಷ್ಯ ವಹಿಸಿರುವುದನ್ನು ಗಮನಿಸಿದರೆ ಸರ್ಕಾರವೇ ಕೆಪಿಎಸ್‌ಸಿಗೆ ಪರೋಕ್ಷ ಬೆಂಬಲ ನೀಡುತ್ತಿರುವ ಅನುಮಾನವಿದೆ.

ಕೆಲವೇ ದಿನಗಳಲ್ಲಿ ನೇಮಕಾತಿ ನಡೆಯಲಿರುವ ಉಪನ್ಯಾಸಕರ ಹುದ್ದೆಗಳಲ್ಲೂ ಕೆಪಿಎಸ್‌ಸಿಯ ಭ್ರಷ್ಟತೆ ಮುಂದುವರೆಯುವುದರಿಂದ ಸರ್ಕಾರ ಪಾರದರ್ಶಕ ನೇಮಕಾತಿಗೆ ಸೀಇಟಿ ಹಾಗೂ ಮೀಸಲಾತಿ ಮೂಲಕ ನೇಮಕಾತಿ ನಿಯಮ ರೂಪಿಸುವುದಗತ್ಯ. ಕೆಪಿಎಸ್‌ಸಿ ಯನ್ನು ಶಾಶ್ವತವಾಗಿ ಮುಚ್ಚಿ ಸಂಬಂಧಿಸಿದ ಇಲಾಖೆಗಳ ಮೂಲಕವೇ ಪಾರದರ್ಶಕ ನೇಮಕಾತಿ ನಡೆಸುವುದು ಅಗತ್ಯ. ಇಲ್ಲವಾದರೆ ಕೋಟಿ ಕೋಟಿ ಅರ್ಜಿ ಶುಲ್ಕದಿಂದ ಕೆಪಿಎಸ್‌ಸಿ ಶ್ರೀಮಂತವಾಗುತ್ತಲೇ ಹೋಗುತ್ತದೆ. ನಿರುದ್ಯೋಗಿಗಳು ಅರ್ಜಿ ಹಿಡಿದು ಆಕಾಶ ನೋಡುತ್ತಲೇ ಇರಬೇಕಾಗುತ್ತದೆ.

ಅನಾರ್ಕಲಿ ಸಲೀಂಚಿಣ್ಯ,

ಶ್ರೀರಂಗಪಟ್ಟಣ

ಈ ವಾರದ ಸಂಚಿಕೆಯಲ್ಲಿ ದಲಿತನ ಕೊಲೆ, ಮಂತ್ರಿ ಕಾರಜೋಳ ಶಿಷ್ಯರ ಕೈವಾಡ! ಎಂಬ ಮೇಘರಾಜ್ ಅವರ ವರದಿ ಓದಿದೆ. ಬಾಗಲಕೋಟೆಯ ಹಣೆ ಬರಹಕ್ಕೆ ಹೊಣೆ ಯಾರು? ಎಂಬ ಪ್ರಶ್ನೆಗೆ ಉತ್ತರ ಸಿಗುತ್ತಿಲ್ಲ. ಅದ್ಯಾವ ಘಳಿಗೆಯಲ್ಲಿ ಎಸ್.ಪಿ. ರಮೇಶ್ ಹರಿಹರ ಎಂಬ ನಾಮರ್ದ ಜನಿವಾರಿ ವಕ್ಕರಿಸಿದನೋ ಅವತ್ತಿನಿಂದಲೇ ಇಡಿ ಜಿಲ್ಲೆ ಮಟ್ಕಾ, ಕೊಲೆ ಸುಲಿಗೆ ದರೋಡೆಗಳಿಂದ ತತ್ತರಿಸಿ ಹೋಗಿದೆ. ಜನ ಬೀದಿಗಿಳಿದು ಪೊಲೀಸ್ ಇಲಾಖೆ ವಿರುದ್ಧ ಬೊಬ್ಬೆ ಹೊಡಿಯುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿರುವ ಗೋವಿಂದ ಕಾರಜೋಳ ತನ್ನದೆ ಜಾತಿಯ ದಲಿತನ ಕೊಲೆಯಾದರೆ ಕ್ಯಾರೆ ಅನ್ನದೆ ಮೋಜು ಮಜಾ ಮಾಡುತ್ತ ಬಾಗಲಕೋಟೆಯನ್ನು ಬಿಹಾರ ಮಾಡಲು ನಿಂತಿರುವಾಗ ಏನೆನ್ನಬೇಕು? ಕಳೆದ ಐದು ವರ್ಷದಿಂದ ತಟ್ಟೆ ಹಿಡಿದು ಉಣ್ಣಲು ಕುಳಿತಿರುವ ಡಿ ವಾಯ್ ಎಸ್.ಪಿ. ಕ್ಯಾತನ್ ಎಂಬ ಹಲಾಲು ಟೋಪಿ ಖಾಕಿ ಕುಳನಿಗೆ ಆದ ಕೊಲೆ ಕೇಸ್‌ಗಳನ್ನು ಗಪ್ಪ ಚುಪ್ಪ ಮುಚ್ಚಿ ಹಾಕಿ ಅಮೇದ್ಯ ಮೇಯಲು ಬಿಟ್ಟಿರುವ ಮಂತ್ರಿ ಕಳ್ಳ ಕಾರಜೋಳನಿಗೆ ಧಿಕ್ಕಾರ...



ರಮಜಾನ ಕೆ. ಕೊರ್ತಿ. ಬಾದಾಮಿ.

ಮನುವಾದವನ್ನು ಮೆಟ್ಟಿನಿಂತು ಮಾನವವಾದಕ್ಕೆ ಉಸಿರು ಕೊಡುವ ದಾ. ಸೋಮನಾಥ್ ಹಾಗೂ ಸಂಪಾದಕರಾದ ಗೌರಿ ಲಂಕೇಶ್ ರವರಿಗೆ ಕರ್ನಾಟಕದ ಒಂದು ಕೋಟಿ ದಲಿತರ ಪರವಾಗಿ ಕೋಟಿ ಪ್ರಣಾಮಗಳು.

ಜುಲೈ 26ರ ಸಂಚಿಕೆಯಲ್ಲಿ ಪ್ರಕಟವಾದ "ಹರಿಜನರು ಮನೆ ಹೊಕ್ಕರೆ ಗೋಮೂತ್ರ ಹಾಕಿ" ಎಂಬ ಗುಂಜೂರು ಪ್ರಕಾಶ ಶಾಸ್ತ್ರಿಯ ವರದಿ ಪ್ರಕಟಿಸಿ ಮನುವಾದಿಗಳಿಗೆ ಎಚ್ಚರಿಕೆ ನೀಡಿದ್ದಕ್ಕೆ, ಸಂಪಾದಕರಿಗೆ ಧನ್ಯವಾದಗಳು.

ಇಂತಿ ತಮ್ಮ

ಪಾವಗಡ ಶ್ರೀರಾಂ ಮತ್ತು ಸಿದ್ಧಾರ್ಥನಗರ ಕುಮಾರ್. ಜಿ.ಅರಸಯ್ಯ ಮತ್ತು ಸ್ನೇಹಿತರು. (ದಿ.ಎಸ್.ಎಸ್.)

ತುಮಕೂರು.

ಲಂಕೇಶ್‌ನಲ್ಲಿ ಮೂಡಿಬಂದ "ಅರಮನೆ" "ಗುರುಮನೆ" "ಗೌಡ್ರು ಮನೆ" ಎಂಬ Head ಗಳ Head Line ಚೆನ್ನಾಗಿತ್ತು. ಗೌಡ್ರು "ರಾಜಕೀಯ ಕುತಂತ್ರ" ಎಂಬ University open ಮಾಡಿದ್ರೆ ಬಹಳ ಜನ Admission ಆಗೋಕೆ ರೆಡಿ ಇದ್ದಾರೆ. ಗೌಡ್ರು ರಾತ್ರಿ ನಿದ್ದೆ ಮಾಡ್ತರೋ ಯೋಚ್ನೆ ಮಾಡ್ತರೋ ಗೊತ್ತಿಲ್ಲ. ರಾಜಕೀಯದಲ್ಲಿ ತಮ್ಮತನ, ದಬ್ಬಾಳಿಕೆ, ಮೋಸ, ದಗಾಗಳೇ ತುಂಬಿ ತುಳುಕ್ತಾ ಇದೆ. ಇಂದು ಓಟು ಹಾಕಿದ ಪ್ರಜೆ ಮೂಕ ಪ್ರೇಕ್ಷಕ. ಇವತ್ತು ರೈತ ವಿಷ ಕುಡಿದು ಸತ್ತರೆ ದೇವೇಗೌಡನ ಮೊಸಳೆ ಕಣ್ಣೀರು ರೆಡಿ. ಅದೇ ಅಂಬಾನಿ ಅಪ್ಪ ಸತ್ತರೆ ಖುದ್ದು ಹಾಜರಿ ಇವತ್ತು ವಿಧಾನಸೌಧದ ಸಭಾಂಗಣ ಕೊಲೆಗಡುಕರ (ಸ್ವಲ್ಪ ಮಾನವಿ ಕಾಳಜಿ ಇರೋರನ್ನು ಬಿಟ್ಟು) ತುಂಬಿ ಹೋಗಿದೆ.

ಮುತ್ತಣ್ಣ ಪೂಜಾರ್, ಕದಲಬಾಳು

ಈ ವಿಭಾಗಕ್ಕೆ ಇ-ಮೇಲ್‌ನಲ್ಲಿ ಪತ್ರಗಳನ್ನು ಬರೆಯಲಿಚ್ಛಿಸುವವರು ಬರಹ ಅಥವಾ ನುಡಿ ತಂತ್ರಾಂಶದಲ್ಲಿ ಕಳುಹಿಸಿಕೊಡಬಹುದು.

ನಮ್ಮ e-mail ವಿಳಾಸ

lankesh70@rediffmail.com

ಸ್ವರ್ಗ ನೋಡಲು ಹೊರಟು ನಿಂತಾಗ

ಸ್ವರ್ಗ ಮತ್ತು ನರಕ ಎಂಬ ಪದಗಳನ್ನು ಕೇಳಿದ್ದೆ. ಆದರೆ ಸ್ವರ್ಗ ಎಂದರೆ ಏನು? ನರಕ ಅಂದರೆ ಹೇಗಿರುತ್ತೆ? ಎಂಬುದರ ಬಗ್ಗೆ ತಿಳಿದಿರಲಿಲ್ಲ. ಅಥವಾ ಅದನ್ನು ತಿಳಿಯಲು ಪ್ರಯತ್ನವನ್ನೂ ಪಟ್ಟಿರಲಿಲ್ಲ. ಆದರೆ ಅಪ್ಪಾಜಿ ಯಾವಾಗ 'ಸ್ವರ್ಗ ತೋರಿಸುತ್ತೇನೆ' ಎಂದು ಹೇಳಿದರೋ ಅಂದಿನಿಂದ ಆ ಸ್ವರ್ಗದ ಬಗ್ಗೆ ನನ್ನದೇ ಕಲ್ಪನೆಗಳು ಶುರುವಾದವು.



ಅದೊಂದು ದಿನ ರಾತ್ರಿ ಊಟ ಮಾಡುತ್ತಿದ್ದಾಗ ಅಪ್ಪಾಜಿ ನನ್ನನ್ನು ಹತ್ತಿರಕ್ಕೆ ಕರೆದು 'ಕಂದಾ.... ನೀನು ಸ್ವರ್ಗವನ್ನು ಎಂದಾದರೂ ನೋಡಿದ್ದೀಯಾ' ಎಂದು ಕೇಳಿದರು. ನಾನು 'ಇಲ್ಲಪ್ಪ' ಅಂದೆ. ಆಗ ಅಪ್ಪಾಜಿ 'ಮುಂದಿನ ವಾರ ನಿನಗೆ ಸ್ವರ್ಗ ತೋರಿಸುತ್ತೇನೆ' ಎಂದು ಹೇಳಿ ನನ್ನ ಪ್ರತಿಕ್ರಿಯೆಗಾಗಿ ನನ್ನನ್ನೇ ದಿಟ್ಟಿಸಿದರು. ನಾನು ಸಂತೋಷದಿಂದ ಅಪ್ಪಾಜಿಯನ್ನು ತಬ್ಬಿಕೊಂಡೆ.


ನನಗಾಗ ತುಂಬ ಚಿಕ್ಕ ವಯಸ್ಸು. ಬಹುಶಃ ನಾನು ಒಂಭತ್ತನೇ ತರಗತಿಯಲ್ಲಿ ಓದುತ್ತಿದ್ದೆ ಅನ್ನಿಸುತ್ತೆ. ಸ್ವರ್ಗ ಮತ್ತು ನರಕ ಎಂಬ ಪದಗಳನ್ನು ಕೇಳಿದ್ದೆ. ಆದರೆ ಸ್ವರ್ಗ ಎಂದರೆ ಏನು? ನರಕ ಅಂದರೆ ಹೇಗಿರುತ್ತೆ? ಎಂಬುದರ ಬಗ್ಗೆ ತಿಳಿದಿರಲಿಲ್ಲ, ಅಥವಾ ಅದನ್ನು ತಿಳಿಯಲು ಪ್ರಯತ್ನವನ್ನೂ ಪಟ್ಟಿರಲಿಲ್ಲ. ಆದರೆ ಅಪ್ಪಾಜಿ ಯಾವಾಗ 'ಸ್ವರ್ಗ ತೋರಿಸುತ್ತೇನೆ' ಎಂದು ಹೇಳಿದರೋ ಅಂದಿನಿಂದ ಆ ಸ್ವರ್ಗದ ಬಗ್ಗೆ ನನ್ನದೇ ಕಲ್ಪನೆಗಳು ಶುರುವಾದವು. ಅದಕ್ಕೆ ಕಾರಣವೂ ಇತ್ತು, ಅದೇನೆಂದರೆ ಅಪ್ಪಾಜಿ ಏನೇ ಹೇಳಿದರೂ ಅದನ್ನು ಖಂಡಿತವಾಗಿಯೂ ಮಾಡುತ್ತಾರೆ ಎಂಬ ನಮ್ಮೆಲ್ಲರ ನಂಬಿಕೆ.

ಹೀಗಿದ್ದಾಗ ಒಂದು ದಿನ ನಾವೆಲ್ಲಾ 'ಶಂಕರ್-ಗುರು' ಸಿನಿಮಾದ ಚಿತ್ರೀಕರಣವನ್ನು ನೋಡಲು ಹೋಗುವುದಾಗಿ ನಿರ್ಧರಿಸಲಾಯಿತು. ಅದಕ್ಕೆಂದು ನಾವೆಲ್ಲ ಶಾಲೆಗೆ ಸುಮಾರು ಹತ್ತು ದಿನಗಳ ರಜೆ ಹಾಕಬೇಕಾಯಿತು. ಹಾಗೆ ನೋಡಿದರೆ ನಮಗ್ಯಾರಿಗೂ ಚಿತ್ರೀಕರಣ ನೋಡುವ ಕ್ರೇಜ್ ಇರಲಿಲ್ಲ, ಅಷ್ಟೇ ಅಲ್ಲದೆ ಶಾಲೆ ಬಿಟ್ಟು ಶೂಟಿಂಗ್ ಸ್ಥಳದಲ್ಲಿ ನಮಗೆಲ್ಲ ಏನು ಕೆಲಸ? ಆಗ ಗೊತ್ತಾಯಿತು: 'ಶಂಕರ್-ಗುರು' ಸಿನಿಮಾದ ಚಿತ್ರೀಕರಣ ಇದ್ದದ್ದು ಮದರಾಸಿನಲ್ಲಲ್ಲ, ಕರ್ನಾಟಕದಲ್ಲೂ ಅಲ್ಲ, ಬದಲಾಗಿ ದೂರದ ಜಮ್ಮು ಮತ್ತು ಕಾಶ್ಮೀರದಲ್ಲಿ ಎಂದು.

ಆದ್ದರಿಂದಲೇ ನಮ್ಮ ಕುಟುಂಬದ ಬಹುತೇಕ ಎಲ್ಲಾ ಸದಸ್ಯರು ಜಮ್ಮುವಿಗೆ ಹೊರಟಿದ್ದೆವು. ಆ ದಿನ ನನಗೆ ಇನ್ನೂ ಚೆನ್ನಾಗಿಯೇ ನೆನಪಿದೆ. ಏಕೆಂದರೆ ನಮ್ಮ ಕುಟುಂಬದ ಅಷ್ಟೂ ಜನ ಅಷ್ಟು ದೂರದ ಪ್ರಯಾಣವನ್ನು ಮಾಡುತ್ತಿದ್ದದ್ದು ಅದೇ ಮೊದಲನೆ ಬಾರಿ. ಶೂಟಿಂಗ್‌ಗೆ ಸಂಬಂಧಪಟ್ಟ ಕಲಾವಿದರನ್ನು, ತಂತ್ರಜ್ಞರನ್ನು ಹೊರತು ಪಡಿಸಿದರೆ ನಾವೇ ಸುಮಾರು ಮೂವತ್ತು ಜನ ಜಮ್ಮುಗೆ ಹೊರಟು ನಿಂತಿದ್ದೆವು!

ನಿರೂಪಣೆ: ಸದಾಶಿವ ಶೆಣೈ

13



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ನನಗೆ ನೆನಪಿರುವ ಪ್ರಕಾರ ಲಕ್ಷ್ಮಿ, ರಾಘು, ನಟಿ, ಬಾಲು, ರಾವಂ, ಸೀನ, ಗೀತಕ್ಕ, ಸತೀಶ್, ಪರ್ಕಾ..... ಹೀಗೆ ಕಸಿನ್ಸ್‌ಗಳಲ್ಲದೆ, ನಿರ್ದೇಶಕ ಭಗವಾನ್ ಅವರ ಮಕ್ಕಳಾದ ರಿಚ್ಚಿ ಮತ್ತು ರಾಘು ಕೂಡ ಹೊರಟಿದ್ದರು. ಚಿ. ಉದಯಶಂಕರ್ ಅವರ ತಾಯಿ ಕೂಡ ಜಮ್ಮು ನೋಡಲು ನಮ್ಮೊಂದಿಗೆ ಬರುವಂತೆ ನನ್ನ ಅಮ್ಮ ಒತ್ತಾಯ ಮಾಡಿದ್ದರಿಂದ ಅವರೂ ಇದ್ದರು. ನನ್ನವ್ವ (ಅಂದರೆ ಅಪ್ಪಾಜಿಯ ತಾಯಿ) ಕೂಡ ನಮ್ಮ ತಂಡದ ಸದಸ್ಯೆಯಾಗಿದ್ದರು. ಹೀಗೆ, ಪುಟ್ಟ ಮಕ್ಕಳು, ಹಿರಿಯರು, ಅಜ್ಜಿಯಂದಿರು ಎಲ್ಲರೂ ಸ್ವರ್ಗ ನೋಡಲು ರೆಡಿ ಆಗಿದ್ದೆವು.

ನಾವೆಲ್ಲಾ ಮದ್ರಾಸಿನಿಂದ ಹೊರಟಿದ್ದು ಜಮ್ಮು-ತಾಣೆ ಎಕ್ಸ್‌ಪ್ರೆಸ್ ರೈಲಿನಲ್ಲಿ, ಆ ಎಕ್ಸ್‌ಪ್ರೆಸ್ ರೈಲು ಎಷ್ಟು ನಿಧಾನವಾಗಿ ಹೋಗುತ್ತಿತ್ತೆಂದರೆ, ಆದರಿಂದ ಇಳಿದು ನಾವು ಮತ್ತೆ ಅದನ್ನು ಹತ್ತಬಹುದಿತ್ತು! ಆದರೆ ಅಂಥ ದುಸ್ಸಾಹಸಕ್ಕೆ ಮುಂದಾಗಲು ನಮ್ಮ ಮನೆಯವರು ಬಿಟ್ಟಿರಲಿಲ್ಲ ಎಂಬುದು ಬೇರೆ ವಿಷಯ. ನಾವು ಒಟ್ಟು ಮೂರು ದಿನ ರೈಲಿನಲ್ಲೇ ಕಾಲ ಕಳೆದ ನಂತರ ಜಮ್ಮುವನ್ನು ತಲುಪಿದೆವು.

ಆ ಮೂರು ದಿನಗಳನ್ನು ನಾನು ನನ್ನ ಶಾಲೆ, ನನ್ನ ಗೆಳೆಯರು ಮತ್ತು ನನ್ನ ಆಟ-ಪಾಠವನ್ನು ಮರೆತು ಅತ್ಯಂತ ಸಂತೋಷದಿಂದ ಕಳೆದೆ. ರಾತ್ರಿ ಹೊತ್ತು ಟ್ರೈನ್‌ನಲ್ಲಿ ಮಲಗುವುದು ಒಂದು ರೀತಿಯಲ್ಲಿ ಸಂತೋಷ ಮತ್ತು ಇನ್ನೊಂದು ರೀತಿಯಲ್ಲಿ ಆತಂಕ ಮೂಡಿಸುವ ವಿಷಯವಾಗಿತ್ತು. ಏಕೆಂದರೆ, ರೈಲಿನ ಚುಕುಬುಕು ಶಬ್ದ ನಿದ್ರೆ ಬರಿಸುತ್ತಿದ್ದರೂ ರೈಲು ವಾಲಾಡುವುದರಿಂದ ಎಲ್ಲಿ ಬಿದ್ದುಬಿಡುತ್ತೀವೊ ಎಂಬ ಹೆದರಿಕೆ. ಒಮ್ಮೆಯಂತೂ ರಾತ್ರಿ ಮಲಗಿದ್ದ ಬರ್ಥ್‌ನಿಂದ ನನ್ನ ಸಹೋದರಿ ಲಕ್ಷ್ಮಿ ದಪ್ಪೆಂದು ಕೆಳಗೆ ಬಿದ್ದುಬಿಟ್ಟಳು.

ರೈಲಿನಲ್ಲೇ ಸ್ನಾನ ಮಾಡುವುದು, ಊಟ ಮಾಡುವುದು, ಎಲ್ಲಾ ಮಜವಾಗಿರುತ್ತಿತ್ತು, ಏಕೆಂದರೆ ಅಲ್ಲಿಯ ತನಕ ಮನೆ ಬಿಟ್ಟು ರೈಲಿನಲ್ಲಿ ಅಷ್ಟು ದೂರ ಪ್ರಯಾಣಿಸಿದ್ದ ಅನುಭವವೇ ನಮಗ್ಯಾರಿಗೂ ಇರಲಿಲ್ಲ. ನಮ್ಮ ಜೊತೆ ನಾರಾಯಣ ರಾವ್ ಎಂಬ ಮ್ಯಾನೇಜರ್ ಒಬ್ಬರನ್ನು ಅಮ್ಮ ಕರೆದುಕೊಂಡು ಬಂದಿದ್ದರು. ನಮಗೆಲ್ಲಾ ಸಮಯಕ್ಕೆ ಸರಿಯಾಗಿ ಟೀ, ಕಾಫಿ, ತಿಂಡಿ ಕೊಡುವ ಜವಾಬ್ದಾರಿ ನಾರಾಯಣರಾವ್ ಅವರದ್ದಾಗಿತ್ತು. ಚಿ. ಉದಯ ಶಂಕರ್ ಅವರ ತಾಯಿ ತುಂಬಾ ಮಡಿವಂತಿಕೆಯವರು. ಹೀಗಾಗಿ ಅವರ ಸ್ನಾನದ ಬಗ್ಗೆ, ಸ್ನಾನಕ್ಕಾಗಿ ಬಿಸಿ ನೀರಿನ ಬಗ್ಗೆ ನಾರಾಯಣ ರಾವ್ ವಿಶೇಷ ಎಚ್ಚರಿಕೆಯನ್ನು ವಹಿಸುತ್ತಿದ್ದರು.

ನಿರ್ದೇಶಕ ಭಗವಾನ್ ಅವರ ಮಕ್ಕಳಾದ ರಿಚ್ಚಿ ಮತ್ತು ರಾಘು ಆ ಪ್ರವಾಸವನ್ನು ನಮ್ಮಂತೆಯೇ ಸಿಕ್ಕಾಪಟ್ಟೆ ಎಂಜಾಯ್ ಮಾಡುತ್ತಿದ್ದರು. ಆದರೆ ರೈಲು ನಿಂತ ಬಹುತೇಕ ಎಲ್ಲಾ ನಿಲ್ದಾಣಗಳಲ್ಲಿ ಅವರು ಫಾಂಟಾ ಮತ್ತು ಕೋಲಾಗಳನ್ನು ಕುಡಿಯುತ್ತಿದ್ದರು. ಅವರಿಬ್ಬರು ನೀರು ಕುಡಿದುದನ್ನೇ ನಾವು ನೋಡಲಿಲ್ಲ. **They were pampered kids.** ಅವರ ತಂದೆ ಅವರಿಗೆ ಖರ್ಚು ಮಾಡಲು ಸಿಕ್ಕಾಪಟ್ಟೆ ಹಣ ನೀಡುತ್ತಿದ್ದರು. ಆದರೆ **we were not pampered.** ನಮಗೆ ಖರ್ಚು ಮಾಡಲು ಹಣ ಕೊಡುವ ಮಾತೇ ನಮ್ಮ ಮನೆಯಲ್ಲಿ ಇರಲಿಲ್ಲ. ನಮ್ಮ ಅಪ್ಪ-ಅಮ್ಮ ಏನು ತಿಂಡಿ-ತಿನಿಸುಗಳನ್ನು ನೀಡುತ್ತಿದ್ದರೋ ಅದನ್ನಷ್ಟೇ ನಾವು ತಿನ್ನಬೇಕಿತ್ತು.

ಇನ್ನೂ ನೆನಪಿದೆ... ಒಂದು ರಾತ್ರಿ ರೈಲಿನಲ್ಲಿದ್ದ ಎಲ್ಲರೂ ನಿದ್ರಿಸಿದ್ದರೂ ನನಗೆ ಮಾತ್ರ ಯಾಕೋ ನಿದ್ದೆ ಬರಲಿಲ್ಲ. ಕಿಟಕಿಯಿಂದ ಹೊರ ನೋಡಿದರೆ ಕಾರ್ಗತ್ತಲು. ಒಳಗಡೆ ಎಲ್ಲರೂ ನಿದ್ದೆ ಮಾಡುತ್ತಿದ್ದಾರೆ. ನಾನು ಇನ್ನೂ ಎಚ್ಚರವಾಗಿದ್ದದ್ದನ್ನು ಗಮನಿಸಿದ ನನ್ನವ್ವ ನನ್ನನ್ನು ಹತ್ತಿರಕ್ಕೆ ಕರೆದು ತಮ್ಮ ಪಕ್ಕ ಮಲಗಿಸಿಕೊಂಡರು, ತನ್ನ ಸೆರಗನ್ನು ನನ್ನ ಮೇಲೆ ಹೊದಿಸಿದರು. ನನಗೆ ಕತೆ ಹೇಳಲು ಶುರುಮಾಡಿದರು. ಆದರೆ ರೈಲಿನ ಚುಕುಬುಕು ಶಬ್ದದಲ್ಲಿ ಅವರ ಮಾತುಗಳು ಕೇಳಿಸುತ್ತಿರಲಿಲ್ಲ, ಆದರೂ ಅವರ ದನಿ ಕೇಳಿಸಿಕೊಳ್ಳುತ್ತಲೇ ನಾನು ನಿಧಾನವಾಗಿ ನಿದ್ರೆಗೆ ಜಾರಿದೆ.

ಜಮ್ಮು-ಕಾಶ್ಮೀರಕ್ಕೆ ಹೊರಡುವ ಮುನ್ನವೇ ಸಾಕಷ್ಟು ತಯಾರಿ ನಡೆಸಿದ್ದರೂ ಅಪ್ಪ-ಅಮ್ಮ ರೈಲಿನಲ್ಲೂ ಶೂಟಿಂಗ್ ಬಗ್ಗೆಯೇ ಚರ್ಚಿಸುತ್ತಿದ್ದರು. ಒಂದು ಸಿನಿಮಾ ಬಗ್ಗೆ ಅವರಿಬ್ಬರಿಗೂ ಇದ್ದ ಕಾಳಜಿ ಅಷ್ಟು. ಆದರೆ ನಾವು ಮಾತ್ರ ರೈಲಿನಲ್ಲೂ ನಮ್ಮ ಆಟಗಳಲ್ಲಿ ಮುಳುಗಿರುತ್ತಿದ್ದೆವು. ಆಗ ಅಂತ್ಯಾಕ್ಷರಿಗಳು ಅಷ್ಟು ಜನಪ್ರಿಯವಾಗಿರಲಿಲ್ಲವಾದ್ದರಿಂದ ನಾವು **trade monopoly** ಎಂಬ ಆಟವನ್ನು ಆಡುತ್ತಿದ್ದೆವು. ಈಗಲೂ ಮಕ್ಕಳಿಗೆ ಪ್ರಿಯವಾಗಿರುವ ಆ ಆಟ ತುಂಬಾ ಇಂಟರೆಸ್ಟಿಂಗ್. ಸಾಧಾರಣವಾಗಿ ಒಂದು ಸಾವಿರ ಅಥವಾ ಎರಡು ಸಾವಿರ ರೂಪಾಯಿ ಇಟ್ಟು ಆ ಆಟವನ್ನು ಆಡುತ್ತಿದ್ದೆವು. ಅದೆಲ್ಲ ಆಟವಾಡಲೆಂದೇ ತಯಾರಿಸಿದ್ದ ಆಟದ ರೂಪಾಯಿಗಳು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ತಾನೆ?

ಆ ಆಟದ ವಿಶೇಷತೆ ಏನೆಂದರೆ, ಆಟಗಾರರು ಒಂದೊಂದು ಏರಿಯಾವನ್ನು ಖರೀದಿಸುವುದು. ಆ ಆಟದಲ್ಲಿ ಸಾಧಾರಣವಾಗಿ ಬಾಂಬೆಯ ಹೆಸರುಗಳೇ ಇರುತ್ತಿದ್ದವು. ಉದಾಹರಣೆಗೆ ಬೊರಿವಿಲಿ, ಖಾಂದಿವಿಲಿ, ಮಲಾಡ್, ಗೋರೆಗಾವ್, ಅಂಧೇರಿ, ಬಾಂದ್ರಾ, ವೊರ್ಲಿ, ಥಾನೆ, ದಾದರ್ ಮೊದಲಾದ ಏರಿಯಾಗಳು ಅದರ ನಕ್ಷೆಯಲ್ಲಿರುತ್ತಿದ್ದವು. ನಾವು ಒಂದೊಂದು ಏರಿಯಾವನ್ನು ಖರೀದಿಸಬೇಕಿತ್ತು, ನಾವು ಖರೀದಿಸಿದ ಏರಿಯಾದಲ್ಲಿ ಬೇರೆ ಆಟಗಾರರು ಬಂದು ಕುಳಿತರೆ ಅವರು ಅದಕ್ಕೆ ಬಾಡಿಗೆ ನೀಡಬೇಕಿತ್ತು, ಈ ಥರಹದ ಒಂದು ವಿಶೇಷವಾದ ಆಟ ಅದಾಗಿತ್ತು.

ನಾವು ಸಿನಿಮಾ ಹಂಚಿಕೆಗಾಗಿ ಈಗ ಒಂದೊಂದು ಏರಿಯಾವನ್ನು ಹೇಗೆ ಖರೀದಿಸುತ್ತೇವೋ ಅದೇ ರೀತಿ ಈ ಆಟದಲ್ಲಿ ನಾವು ಒಂದೊಂದು ಏರಿಯಾವನ್ನು ಖರೀದಿಸುತ್ತಿದ್ದೆವು. ಈ ಆಟದ ಬಗ್ಗೆ ಹೀಗೆ ನಾನು ಎಷ್ಟೇ ಹೇಳಿದರೂ ಅದು ತುಂಬ ಕಡಿಮೆಯೇ. ಅದನ್ನು ಆಡಿದರೆ ಮಾತ್ರ ಅದರ ಮಜಾ ನಿಮಗೆ ಗೊತ್ತಾಗುತ್ತದೆ. ಆ ಆಟವನ್ನು ನಾವು ರೈಲಿನಲ್ಲೂ ನೆಲದ ಮೇಲೆ ಕೂತು ಆಡುವಂತೆ ಆಡುತ್ತಿದ್ದೆವು. ಆಗ ಆಕಡೆ-ಈಕಡೆ ಹೋಗುವವರಿಗೆ ತೊಂದರೆಯಾಗುತ್ತಿದೆ ಎಂಬ ಕಾರಣಕ್ಕಾಗಿ ಮೇಲ್ಗಡೆ ಬರ್ಥ್‌ನಲ್ಲಿ ಕುಳಿತುಕೊಂಡು ಆಡಿ ಎಂದು ಅಮ್ಮ ಆದೇಶಿಸುತ್ತಿದ್ದರು. ಮೇಲ್ಗಡೆಯ ಬರ್ಥ್‌ನಲ್ಲಿ ಎಲ್ಲರೂ ಕೂತು ಆಡುವುದು ಕಷ್ಟವಾದರೂ ಅದು ಹೇಗೊ ನಾವೆಲ್ಲ ಆಡುತ್ತ ಜೋಕ್ಸ್ ಹೊಡೆಯುತ್ತಾ ಸಮಯ ಕಳೆದೆವು.

ಹಲವೊಮ್ಮೆ ಆ ಆಟ ಬೋರ್ ಆದಾಗ ನಾನು ರೈಲಿನ ಬಾಗಿಲ ಬಳಿ ನಿಂತು ಹೊರಗಡೆಯ ದೃಶ್ಯಗಳನ್ನು ನೋಡುವುದರಲ್ಲಿ ತಲ್ಲೀನನಾಗುತ್ತಿದ್ದೆ. ಆದರೆ ಅಪ್ಪ-ಅಮ್ಮನಿಗೆ ನಾನು ಬಾಗಿಲ ಬಳಿ ನಿಲ್ಲುವುದು ಇಷ್ಟವಾಗುತ್ತಿರಲಿಲ್ಲ. ಆದರೆ ನಾನು ಹಟ ಮಾಡಿ ಅಲ್ಲೇ ನಿಲ್ಲುತ್ತಿದ್ದೆ ಅಥವಾ ಕೂತಿರುತ್ತಿದ್ದೆ. ಹಾಗೆ ಒಬ್ಬನೇ ಇದ್ದು ಪ್ರಕೃತಿಯ ಸೌಂದರ್ಯವನ್ನು ವೀಕ್ಷಿಸುತ್ತಾ ಅಪ್ಪ ತೋರಿಸುತ್ತೇನೆ ಅಂದಿದ್ದ 'ಸ್ವರ್ಗ' ಹೇಗಿರಬಹುದು ಎಂದು ಚಿಂತಿಸುತ್ತಿದ್ದೆ. ನನ್ನ ಕಲ್ಪನಾಲಹರಿ ರೈಲಿಗಿಂತಲೂ ವೇಗವಾಗಿ ಚಲಿಸುತ್ತಿತ್ತು...

(ಮುಂದುವರೆಯುವುದು)

"ಈಗ್ಲೇ ಮದ್ವೆನಾ" ಲಿಪ್-ಸುಂದರಿಯ ಡ್ರಾಮಾ!



ಆಯೇಷಾ ಟಕಿಯಾ ನೆನಪುಂಟಲ್ಲ? ಈಕೆಯನ್ನು ನೀವು ಮರೆತಿದ್ದರೂ ಈಕೆಯ ತುಟಿಗಳನ್ನು ಮರೆತಿರಲಾರಿರಿ.

ಈ ಆಯೇಷು ಈಗ ಲವ್‌ನಲ್ಲಿ ಬಿದ್ದು ಥ್ರಿಲ್ ಆಗಿದೆ. ಈ ಚಿತ್ರ ನೋಡಿ, ಎಷ್ಟು ಖುಷಿಯಾಗವ್ಳೆ ಲವ್ಲಿ ಲಿಪ್-ಸುಂದರಿ!

ಆಯೇಷ ಪುಟ್ಟಿ ಮದುವೆ ಯಾವಾಗ? ಎಂದ್ರೆ ನುಲಿತಾಳೆ: "ಈಗ್ಲೇ ಇಲ್ಲಪ್ಪ... ನನಗೀಗ ಬರೀ 21 ವರ್ಷ... ನನ್ನ ಬಾಯ್‌ಫ್ರೆಂಡ್ ಫರ್ಹಾನ್‌ಗೆ 24 ವರ್ಷ... ನಾವಿನ್ನೂ ಮದುವೆಯಾಗಲು ಮಾನಸಿಕವಾಗಿ ಗಟ್ಟಿಯಾಗಿಲ್ಲ ಎನಿಸುತ್ತೆ... ಮತ್ತು ಇತರ ವಿಷಯಗಳಲ್ಲೂ ಇನ್ನೂ ಗಟ್ಟಿಯಾಗೇಬೇಕಿದೆ...."

ಅರೆ ಆಯೇಷು ಚಿನ್ನು, ಏನ್ ಮಳ್ಳಿಯಂಗೆ ಆಡ್ತೀದೀಯಾ? ನೀ 21 ರ ಲಿಪ್-ಲೇಡಿ ಖಂಡಿತಾ ಎಲ್ಲದರಲ್ಲೂ fit ಆಗಿದ್ದೀಯಾ... mentally as well as physically ಅನ್ನೋದು ಪಡ್ಡೆಗಳ ಮಾತಪ್ಪೇ!

ಬೆನ್ಮೇಲೆ ಮಂತ್ರ.... ಎದೆ ಮೇಲೆ?



ಡ್ರೀಮ್‌ಗರ್ಲ್ ಹೇಮಾ ಮಾಲಿನಿ ಮಗಳು ಕ್ರೀಮ್‌ಗರ್ಲ್ ಇಷಾ ಡಯೋಲ್ ಒಂದು ಕಡೆ ಐಟಂಸಾಂಗ್‌ಗಳಲ್ಲಿ ಸ್ಕಿನ್-ಸುಂದರಿ ಆಗ್ತಾಳೆ, ಇನ್ನೊಂದು ಕಡೆ ರವಿಶಂಕರನ ಢೋಂಗಿ ಆಧ್ಯಾತ್ಮದ ಹಿಂದೆ ಬೀಳ್ತಾಳೆ.

ಈಗ ಬಿಚ್ಚಾಟ, ಆಧ್ಯಾತ್ಮಗಳನ್ನು ಬೆಸೆದು ಹೊಸ ಮಂತ್ರ ಉಚ್ಛರಿಸಿದ್ದಾಳೆ.

ಬೆನ್ನ ಮೇಲೆ ಒಂದು ಕಡೆ ಗಾಯಿತ್ರಿಮಂತ್ರದ ಹಚ್ಚೆ ಇನ್ನೊಂದು ಕಡೆ ಓಂ ಮಾರ್ಕು! ಅರೆ ಇಷೂ ಬೇಬಿ, ಬೆನ್ಮೇಲೆ ಬರೆದಿದ್ದು ಓದೋದು ಯಾರು? ನಾವೇ ಅಲ್ವಾ?

ನಿನಗೆ ಓದೋಕೆ ಎದೆ ಮೇಲೆ ಏನು ಹಚ್ಚೆ ಹಾಕಿಸಿಕೊಂಡಿಲ್ವಾ? ಖರೆ ಹೇಳು... ಅಲ್ಲಿ ವಾತ್ಸಾಯನ ಸೂತ್ರ ಇಲ್ಲ ತಾನೆ?

ಶಾಟ್ ಕಟ್

ಪತ್ಥರ್‌ಕರ್ತರ 'ಮುಕ್ತ' ತೆವಲು!

ವಿ.ಕ.ದಿಂದ ಯಾವಾಗ ಹೊರ ಹಾಕ್ತಾರೋ ಎಂದು ಭಯ ಬಿದ್ದಂತಿರುವ ವಿಶ್ವೇಶ್ವರಭಟ್ಟರೀಗ ಸೀರಿಯಲ್ ಪಾಲಾಗಿದ್ದಾರೆ. 'ಮುಕ್ತ'ದಲ್ಲಿ ಆತನೀಗ ಗವರ್ನರ್! ಆತನ ಹಿಂದೆ ಫೈಲ್ ಹಿಡಿದು ಬರುವಾತ, ಅದೇ ಪತ್ರಿಕೆಯ ಚೀಫ್ ರಿಪೋರ್ಟರ್ ಪಿ. ತ್ಯಾಗರಾಜ್! ಭಜರಂಗಿ ಸುನೀಲ್‌ಕುಮಾರ್ ನಟಿಸಿ ಹೋಗಾಯ್ತು, ಈಗ ಆರೆಸ್ಸೆಸ್‌ನ ಮಾಜಿ ಪಡ್ಡೆ ಬಿಜೆಪಿಯ ಹಾಲಿ ನಾಯಕ ಅರವಿಂದ ಲಿಂಬಾವಳಿಗೂ ಚಾನ್ಸು.... ರಾಜಕಾರಣಿ, ಸಾಹಿತಿಗಳ ನಂತರ ಈಗ ಬಿದ್ದಿ ಪತ್ರಕರ್ತರು, ರಾಜಕಾರಣಿಗಳು 'ಮುಕ್ತ'ಕ್ಕೆ ಲಗ್ಗೆ ಹಾಕಿವೆ.



ಜೊತೆಗೆ ಜೆಡಿಯುನ ಮಹಾದೇವಸ್ವಾಮಿ, ನಾಡಗೌಡರೂ ನಟಭಯಂಕರರಾಗಿದ್ದಾರೆ.

ಒಟ್ಟಿನಲ್ಲಿ ರಾಜಕಾರಣಿಗಳೇ ನಿಜವಾದ 'ನಟರು' ಎಂಬುದನ್ನು ಸೀತಾರಾಮ್ ಸಾಬೀತುಪಡಿಸುತ್ತಿದ್ದಾರೆ.

R.B.P. LANKESH, Kannada Weekly   Price Rs. 10/-   2-8-2006   RNI No. KARKAN2005/14648   Regd.No.KA/BG(S)/2036/2005-07



ಲಕ್ಷ್ಮಿಯ ಬೆನ್ನು ಬಿದ್ದವರು

ಮತ್ತೊಮ್ಮೆ ವರಮಹಾಲಕ್ಷ್ಮಿ ಪೂಜೆ ಹತ್ತಿರ ಬರುತ್ತಿದೆ. ನಟ ಸೌಂದರ್ಯ ನಟಿಸಿದ 'ಆಪ್ತಮಿತ್ರ' ತೆರೆಕಂಡಿದ್ದೇ ವರಮಹಾಲಕ್ಷ್ಮಿ ಹಬ್ಬದ ದಿನದಂದು! ಆ ಚಿತ್ರ ಕೋಟ್ಯಂತರ ರೂಪಾಯಿ ಲಾಭವನ್ನು ನಿರ್ಮಾಪಕ ದ್ವಾರಕೀಶ್‌ಗೆ ತಂದುಕೊಟ್ಟಿತು.

ಅದಾದ ನಂತರ 'ಜೋಗಿ' ಚಿತ್ರವನ್ನು ಕೂಡಾ ವರಮಹಾಲಕ್ಷ್ಮಿ ಹಬ್ಬದ ದಿನದಂದೇ ಬಿಡುಗಡೆ ಮಾಡಲಾಯಿತು. ಆ ಚಿತ್ರವೂ ಅಷ್ಟೇ.... ಬಾಕ್ಸ್ ಆಫೀಸ್‌ನಲ್ಲಿ ದಾಖಲೆಯ ಸುರಿಮಳೆಯನ್ನೇ ಸೃಷ್ಟಿಸಿತು.

ಈ ಬಾರಿಯ ವರಮಹಾಲಕ್ಷ್ಮಿ ಹಬ್ಬದ ದಿನದಂದು 'ಗಂಡುಗಲಿ ಕುಮಾರರಾಮ' ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದಾರೆ.

'ಆಪ್ತಮಿತ್ರ' ಮತ್ತು 'ಜೋಗಿ'ಗೆ ಒಲಿದ ಲಕ್ಷ್ಮಿ ಈ ಬಾರಿ 'ಕುಮಾರರಾಮ'ನಿಗೂ ಒಲಿಯುವಳೇ? ಎಂಬ ಪ್ರಶ್ನೆ ಇಡೀ ಗಾಂಧಿನಗರದ ಜನರನ್ನು ಕಾಡುತ್ತಿದೆ. ನೋಡೋಣ... ಏನೇನಾಗುತ್ತೆ ಎಂದು!

ಅಶ್ವಿನಿ-ಪ್ರೇಮ್: ಫಿಫ್ಟಿ-ಫಿಫ್ಟಿ





'ಪ್ರೀತಿ ಏಕೆ ಭೂಮಿ ಮೇಲಿದೆ?'


ಚಿತ್ರ ಅಫೀಷಿಯಲ್ ಆಗಿ ಅನೌನ್ಸ್ ಆಗಿದೆ.

ಆಗಸ್ಟ್ 4 ರಂದು ಇದರ ಮೂಹೂರ್ತ. 'ಜೋಗಿ'ಯ ಯಶಸ್ಸಿನ ನಂತರ ಪ್ರೇಮ್ ಮತ್ತು ನಿರ್ಮಾಪಕ ಅಶ್ವಿನಿ ರಾಮಪ್ರಸಾದ್ ಫೆವಿಕಾಲ್ ಜೋಡಿ ತರಹ ಅಂಟಿಕೊಂಡಿರುವುದು ಇಡೀ ಗಾಂಧಿನಗರಕ್ಕೇ ಗೊತ್ತು.

ತಮ್ಮ ಜೋಡಿ ಮುರಿಯಬಾರದೆಂಬ ಕಾರಣಕ್ಕೆ ಇವರಿಬ್ಬರೂ ಅನೇಕ ಒಳ ಒಪ್ಪಂದಗಳನ್ನು ಮಾಡಿಕೊಂಡಿದ್ದಾರಂತೆ. ಅಂತಹ ಒಪ್ಪಂದಗಳಲ್ಲಿ ಮುಖ್ಯವಾದ ಒಪ್ಪಂದವೆಂದರೆ, ಈ ಚಿತ್ರದಿಂದ ಬರುವ ಲಾಭವನ್ನು ಇಬ್ಬರೂ ಫಿಫ್ಟಿ-ಫಿಫ್ಟಿ ಹಂಚಿಕೊಳ್ಳುವುದು.

ಅಂದರೆ ಚಿತ್ರಕ್ಕೆ ಸಂಪೂರ್ಣ ಬಂಡವಾಳ ಹೂಡುವುದು ರಾಮಪ್ರಸಾದ್‌ರವರ ಕೆಲಸ. ಚಿತ್ರ ಮಾಡಿ ಮುಗಿಸಿಕೊಡುವುದು ಪ್ರೇಮ್ ಜವಾಬ್ದಾರಿ.

ಒಬ್ಬನದು ಹೆಸರು ಮತ್ತೊಬ್ಬನದು ಬಸಿರು ಅಂತಾರಲ್ಲ.. ಹಂಗಾಯ್ತು ಪ್ರೇಮ್-ರಾಮಪ್ರಸಾದ್ ಡೀಲು?!



ಕೋರ್ಟಿನಲ್ಲಿ ಸುಳ್ಳು 'ಸಾಕ್ಷಿ'

ಅಂದು ಜೋಕ್ಸ್, ಇಂದು ಚೀಟಿಂಗ್.

ಇದು ಸಾಕ್ಷಿ ಶಿವಾನಂದ್ ಎಂಬ ಸುಂದರಿಯ ಹೆಸರಲ್ಲಿ ಹುಟ್ಟಿರುವ ಹೊಸ ಗಾದೆ.

'ಸೈನಿಕ' ಚಿತ್ರದ ಸಮಯದಲ್ಲಿ ಆಕೆ ಸಿಡಿಸಿದ ಜೋಕ್ ಇಡೀ ಚಿತ್ರೋದ್ಯಮವನ್ನೇ ದಿಗ್ಭ್ರಮೆಗೊಳಿಸಿದ್ದು ನಿಮಗೆಲ್ಲಾ ಗೊತ್ತೇ ಇದೆ. ನಾನೂ ಮತ್ತು ನನ್ನ ತಂಗಿ ಶಿಲ್ಪಾ ಅವಳಿ-ಜವಳಿ. ನನಗೆ ಶೂಟಿಂಗ್‌ಗೆ ಹೋಗಲು ಸಾಧ್ಯವಾಗದಿದ್ದಾಗ ನನ್ನ ತಂಗಿ ಹೋಗುತ್ತಿದ್ದಳು. ಹೀರೋಗಳಿಗೆ ಗೊತ್ತಾಗುತ್ತಿರಲಿಲ್ಲ, ಎಂದು ಹೇಳಿ ಎಲ್ಲರನ್ನು ದಂಗುಪಡಿಸಿದ್ದಳು.

ಈಗ ಅದೇ ಸಾಕ್ಷಿ ನಾಲ್ಕು ವರ್ಷದ ನಂತರ ತಂಗಿ ಶಿಲ್ಪಾ ಹೆಸರಲ್ಲಿ ನಿರ್ದೇಶಕ ಚಿನ್ನಗಂಗಪ್ಪ ಅವರನ್ನು ಬ್ಲಾಕ್‌ಮೇಲ್ ಮಾಡಿ 24 ಲಕ್ಷ ರೂಪಾಯಿ ಹೊಡೆಯಲು ಸ್ಕೆಚ್ ಹಾಕಿದ್ದಾಳೆ.

ಈಕೆಯ ಬ್ಲ್ಯಾಕ್‌ಮೇಲ್ ತಂತ್ರಕ್ಕೆ ಹೆದರದ ಚಿನ್ನಗಂಗಪ್ಪ ನ್ಯಾಯಾಲಯದ ಮೊರೆ ಹೋಗಿದ್ದಾರೆ.

ಕಳೆದ ಬಾರಿ ಜೋಕ್ ಹೇಳಿ ತಪ್ಪಿಸಿಕೊಂಡಿದ್ದ ಸಾಕ್ಷಿ ಈ ಬಾರಿ ಕೋರ್ಟ್‌ನ ಕಟಕಟೆಯಲ್ಲಿ ನಿಂತು ಸಾಕ್ಷಿ ಹೇಳಬೇಕಾದ ಪರಿಸ್ಥಿತಿ ಬರುವುದು ಗ್ಯಾರಂಟಿ.

ದಿನೇಶ್‌ಬಾಬು ಈಗೇನ್ಮಾಡ್ತಾರೆ?



ದಿನೇಶ್ ಬಾಬುಗೂ ಈ 'ರೋಗ' ತಗುಲಿದೆ.

ಮೂರು ವರ್ಷದ ಹಿಂದೆ 'ಈಗೇನ್ಮಾಡಲಿ' ಎಂಬ ಚಿತ್ರ ಶುರು ಮಾಡಿದ್ದರು. ಇದರ ಹೆಸರು ಸರಿ ಇಲ್ಲದಿರುವುದಕ್ಕೇ ಚಿತ್ರ ಕುಂಟುತ್ತಾ ಸಾಗುತ್ತಿದೆ ಎಂಬ ತೀರ್ಮಾನಕ್ಕೆ ಬಾಬು ಬಂದರು. ಈಗ 'ಆಕಾಶ ಗಂಗೆ' ಎಂದು ಪುನರ್ ನಾಮಕರಣ ಮಾಡಿ ಚಿತ್ರ ಮುಗಿಸಿದ್ದಾರೆ. ಹೆಸರು ಬದಲಾಯಿಸಿದ ನಂತರ ಯುರೋಪ್‌ನ ಅನೇಕ ಭಾಗಗಳಲ್ಲಿ ಚಿತ್ರೀಕರಣ ಮಾಡಿದ್ದಾರಂತೆ ಬಾಬು.

ಕೇರಳದಿಂದ ಬಂದ ಈ ಬಾಬು ನಮ್ಮ ಗಾಂಧಿನಗರದ ಮಾಮೂಲಿ ನಿರ್ದೇಶಕರಿಗಿಂತ ಸ್ವಲ್ಪ ಪ್ರೋಗ್ರೆಸಿವ್, ಕ್ರಿಯೇಟಿವ್ ಆಗಿ ಕಾಣಿಸಿದ್ದರು. ಈಗ ಅವರೂ ಪಕ್ಕಾ ಗಾಂಧಿನಗರ ನಿವಾಸಿಯಾಗಿಬಿಟ್ಟಿದ್ದಾರೆ. ಛೇ!


ರಮ್ಯ 'ತನನಂ ತನನಂ...'

ಲತೆಯ ಅರಸಿ ಪ್ರೇಮ್!



ಇದು ಹೊಸ ಸುದ್ದಿಯೇನಲ್ಲ.

ಭಾರತೀಯ ಚಿತ್ರರಂಗದ ಗಾನಕೋಗಿಲೆ ಲತಾ ಮಂಗೇಶ್ಕರ್ ಕನ್ನಡ ಚಿತ್ರದಲ್ಲಿ ಹಾಡುವುದು ಪಕ್ಕಾ ಆಗಿದೆ. ಪ್ರೇಮ್ ನಿರ್ದೇಶನದ 'ಪ್ರೀತಿಏಕೆ ಭೂಮಿ ಮೇಲಿದೆ' ಚಿತ್ರಕ್ಕೆ ಆಕೆ ಹಾಡಲು ಒಪ್ಪಿದ್ದಾರಂತೆ.

ಆದರೆ ಆ ಕೋಗಿಲೆ ಕರ್ನಾಟಕಕ್ಕೆ ಹಾರಿ ಬರುತ್ತಿಲ್ಲ. ಕೋಗಿಲೆ ಇದ್ದ ಊರಿಗೆ ನಿರ್ಮಾಪಕರು ಹಣದ ಥೈಲಿ ಹಿಡಿದುಕೊಂಡು ಹಾರಿ ಹೋಗಬೇಕಾಗಿದೆ. ಅದೇನೆ ಇರಲಿ, ಲತಾಜೀ ಸುಮಾರು ನಲವತ್ತು ವರ್ಷಗಳ ನಂತರ ಎರಡನೆಯ ಕನ್ನಡ ಹಾಡು ಹಾಡುತ್ತಿರುವುದು ಸಂತೋಷದ ವಿಷಯ. ಬಹುಶಃ ಅಶ್ವಿನಿ ಸಂಸ್ಥೆಯ ಇತಿಹಾಸದಲ್ಲೇ ಈ ಹಾಡು ಅತ್ಯಂತ ದುಬಾರಿಯ ಹಾಡಾಗುವ ಸಾಧ್ಯತೆ ಇದೆ.

ನಿರ್ದೇಶಕರ ಸಂಘ : Part-2



ಚಲನಚಿತ್ರ ವಾಣಿಜ್ಯ ಮಂಡಳಿ ಮತ್ತು ನಿರ್ಮಾಪಕರ ಸಂಘದ ಮಾದರಿಯಲ್ಲೇ ಇದೀಗ ಕರ್ನಾಟಕ ನಿರ್ದೇಶಕರ ಸಂಘ ಕೂಡಾ ಇಬ್ಭಾಗವಾಗಿದೆ.

ನಾಗಭರಣ ನೇತೃತ್ವದ ಸಂಘದಿಂದ ಸುಮಾರು 60 ಜನ ಸದಸ್ಯರು ಹೊರಬಂದು ಬಿ.ಆರ್. ಕೇಶವರ ಅಧ್ಯಕ್ಷತೆಯಲ್ಲಿ ಹೊಸ ಸಂಘವನ್ನು ಹುಟ್ಟು ಹಾಕಿದ್ದಾರೆ. ಹಣಕಾಸು ಅವ್ಯವಹಾರ ಮತ್ತು ಹೊಸಬರನ್ನು ನಿರ್ಲಕ್ಷಿಸುತ್ತಿರುವುದರಿಂದ ಈ ಕ್ರಮ ಕೈಗೊಳ್ಳಬೇಕಾಯಿತು ಎಂದಿದ್ದಾರೆ ಹೊಸ ಸಂಘದ ಅಧ್ಯಕ್ಷ ಬಿ.ಆರ್. ಕೇಶವ್.

ಕ್ರಿಯಾಶೀಲರಾಗಿ ಕೆಲಸ ಮಾಡಬೇಕಾಗಿದ್ದ ನಿರ್ದೇಶಕರ ಸಂಘ ಈಗ ಅಸಮಾಧಾನದಿಂದ ತುಂಬಿದ ಒಡೆದ ಮನೆಯಾಗಿದೆ. ನಿರ್ದೇಶಕರ ಸಂಘ ಸ್ಥಾಪಿಸಿದ ಪುಟ್ಟಣ್ಣನವರ ಆತ್ಮ ಬಹುಶಃ ಈಗ ವಿಲವಿಲಾ ಒದ್ದಾಡುತ್ತಿರಬಹುದು.



ಸಂತನ ಹಿಂದೆ ಸಾಂಗ್ಲಿಯಾನ

'ಸಂತ'ನ ಹಿಂದೆ ಸಾಂಗ್ಲಿಯಾನ!

ಹೌದು, ಬಿಜೆಪಿ ಎಂ.ಪಿ. ನಿವೃತ್ತ ಪೊಲೀಸ್ ಅಧಿಕಾರಿ ಎಚ್.ಟಿ. ಸಾಂಗ್ಲಿಯಾನ ಈಗ 'ಸಂತ'ನ ಹಿಂದೆ ಬಿದ್ದಿದ್ದಾರೆ. ಈ 'ಸಂತ' ವಿ.ಎಚ್.ಪಿ.ಯ ಸಾಧು ಸಂತನಲ್ಲ ಬರಿ ಈ 'ಸಂತ' ಶಿವರಾಜ್‌ಕುಮಾರ್‌ರ ಹೊಸ ಚಿತ್ರವಷ್ಟೇ.

ಹಿಂದೆ ಅವರು ಕೆಲಸದಲ್ಲಿದ್ದಾಗ ಅವರದೇ ಹೆಸರಿನ ಸಾಂಗ್ಲಿಯಾನ, ಸಾಂಗ್ಲಿಯಾನ ಭಾಗ 2 ಚಿತ್ರಗಳು ಬಂದು ಫೇಮಸ್ ಆಗಿದ್ದವು.

ಪೊಲೀಸ್ ಅಧಿಕಾರಿಯಾಗಿ ಭಾಗ 1 ಮುಗಿಸಿ, ಸಡನ್ ಆಗಿ ಬಿಜೆಪಿ ಎಂಪಿಯಾಗಿ ಭಾಗ 2 ರಲ್ಲಿರುವ ಎಚ್.ಟಿ. ಸಾಂಗ್ಲಿಯಾನ ಮತ್ತೀಗ ಸಿನಿಮಾರಂಗಕ್ಕೆ ಎಂಟ್ರಿ ಕೊಡುವ ಮೂಲಕ ಭಾಗ 3 ಆರಂಭಿಸುತ್ತಿದ್ದಾರೆ.

ಎಷ್ಟಾದರೂ ಪ್ರಚಾರಪ್ರಿಯರಲ್ಲವೆ ಈ ಸಾಂಗ್ಲಿಯಾನ?

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore-4, Phone : 26676427 Fax : 26620026, E-mail : lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44